ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಸೆಪ್ಟೆಂಬರ್ 10, 2008 ರೂ. 12/-



ಪದ್ಮಪ್ರಿಯಾ ಪ್ರಕರಣ

ಮುಂದುವರಿದ ಸೇಡಿನ ಕತೆ!

ವಮೊಗ್ಗ ಮೆಡಿಕಲ್ ಕಾಲೇಜ್
ದ್ದಿ ಬಳಗದ ಕರ್ಮಕಾಂಡ

ಕರಾವಳಿ ಬಾಲೆ ಸಫಿಯಾ ಅಮಾನುಷ ಕೊಲೆ



ಗಣಿ ರೆಡ್ಡಿಗಳ ಗೂಂಡಾಗಿರಿ



ಬಿಜಾಪುರ ಪೊಲೀಸರ ಹೆದ್ದಾರಿ ದರೋಡೆ

ೇಡಗಾ ಮುತ್ಯಾನ ಧೂಮ್‌ಮಚಾಲೆ!



ಂಡೆ ಕುಮಾರನ ನಿಗೂಢ ಅಂತ್ಯ

ಕಾರ್ಟೂನ್ ಕಾರ್ನರ್



ಹೀಗೊಂದು ಅಂಕಿ-ಅಂಶ

'ಭೂಮಿ ಮೇಲಿನ ಸ್ವರ್ಗ' ಎಂದೇ ಖ್ಯಾತಿ ಪಡೆದಿರುವ ಕಾಶ್ಮೀರದ ವಾಸ್ತವ ಮುಖ ಹೀಗಿದೆ: ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇಲ್ಲಿಯತನಕ ಮಡಿದಿರುವವರ ಸಂಖ್ಯೆ 60,000ಕ್ಕೂ ಹೆಚ್ಚು; 'ಕಾಣೆಯಾಗಿರುವವರು' ಹತ್ತಾರು ಸಾವಿರ; ಪೊಲೀಸ್ ಮತ್ತು ಸೈನ್ಯದ ಹಿಂಸೆಗೆ ಗುರಿಯಾಗಿರುವವರು ಸಾವಿರಾರು; ಗಂಡನನ್ನು ಕಳೆದುಕೊಂಡು ವಿಧವೆಯಾಗಿರುವ ಮಹಿಳೆಯರು ಸಾವಿರಾರು; ಗಂಡುಮಕ್ಕಳನ್ನು ಕಳೆದುಕೊಂಡಿರುವ ತಾಯಂದಿರು ಸಾವಿರಾರು; ಗಂಡ ಸತ್ತಿದ್ದಾನೊ ಅಥವಾ ಬದುಕಿದ್ದಾನೋ ಎಂಬ ಸುಳಿವೂ ಸಿಗದೆ (ಇಂಥವರಿಗೆ ಅಲ್ಲಿ ಅರ್ಧ ವಿಧವೆ ಎಂಬ ವಿವರಣೆಯನ್ನು ಹುಟ್ಟುಹಾಕಲಾಗಿದೆ) ಜೀವಿಸುತ್ತಿರುವ ಮಹಿಳೆಯರು ಸಾವಿರಾರು; ಬಂದೂಕಿನ ನೆರಳಲ್ಲಿ ಬೆಳೆದಿರುವವರು ಒಂದು ತಲೆಮಾರು"

-ಒಂದು ವರದಿ

ಭಾರತ ಪ್ರಕಾಶಿಸುತ್ತಿದೆ

"ಅನಿಲ್ ಅಂಬಾನಿಯವರ ವಾರ್ಷಿಕ ಆದಾಯ 24 ಮಿಲಿಯನ್ ರೂಪಾಯಿಗಳಿಂದ 134 ಮಿಲಿಯನ್ ರೂಪಾಯಿಗಳಿಗೆ ಏರಿದೆ"

-ಪತ್ರಿಕಾ ವರದಿ

"ಜಗತ್ತಿನ 1.4 ಬಿಲಿಯನ್ ಬಡಜನರಲ್ಲಿ ಶೇ. 33 (ಅಂದರೆ 828 ಮಿಲಿಯನ್ ಜನ) ಭಾರತದಲ್ಲಿದ್ದಾರೆ. ಅವರೆಲ್ಲರ ದಿನದ ಆದಾಯ ರೂ. 80ಕ್ಕಿಂತಲೂ ಕಡಿಮೆ. ಭಾರತಕ್ಕಿಂತ ಸಹಾರಾ ಪ್ರದೇಶದಲ್ಲಿ ಕಡಿಮೆ ಸಂಖ್ಯೆಯಲ್ಲಿ (551 ಮಿಲಿಯನ್) ಬಡಜನರಿದ್ದಾರೆ"

-ವಿಶ್ವ ಬ್ಯಾಂಕ್ ವರದಿ

ಚೆಡ್ಡಿಗಳ ಸಾಚಾತನ

"ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ಲಂಚ ಪಡೆದು 2006ರಲ್ಲಿ ಸಿಕ್ಕಿಹಾಕಿಕೊಂಡಿದ್ದ ಛತ್ತೀಸ್‌ಗಡದ ಸಂಸದ ಪ್ರದೀಪ್ ಗಾಂಧಿಯನ್ನು ಮತ್ತೆ ಬಿಜೆಪಿ ಪಕ್ಷಕ್ಕೆ ಸೇರಿಸಿ ಕೊಳ್ಳಲಾಯಿತಲ್ಲದೆ, ಆತನಿಗೆ ಬರಲಿರುವ ರಾಜ್ಯ ಚುನಾವಣೆಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ನೀಡಲಾಗಿದೆ"

-ಪತ್ರಿಕಾ ವರದಿ

ಒಂದು ಪ್ರಶ್ನೆ, ಒಂದು ಉತ್ತರ

ಪ್ರಶ್ನೆ : ಇವತ್ತಿನ ಜಗತ್ತಿನಲ್ಲಿ ಬಂಧ್ ಮತ್ತು ಸ್ಟ್ರೈಕ್ ಮಾಡಿದರೆ ಪರಿಹಾರ ಸಿಗುತ್ತದೆಯೇ?

ಮಮತಾ ಬ್ಯಾನರ್ಜಿ ಉತ್ತರ : ಬಡವರು ತಮ್ಮ ದನಿಯನ್ನು ಎತ್ತಲು ಬೇರೆ ಮಾರ್ಗಗಳಿದ್ದರೆ ತಿಳಿಸಿ, ಅವುಗಳನ್ನು ಅನುಸರಿಸುತ್ತೇವೆ.

'ಬಂಧ್' ಆದ ಬುದ್ಧದೇಬ್ ಬಾಯಿ

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬುದ್ಧದೇಬ್ ಭಟ್ಟಾಚಾರ್ಯ ಹೇಳಿಕೆ : "ನಾನು ಯಾವುದೇ ಬಂಧ್ ಕರೆಯನ್ನು ಬೆಂಬಲಿಸುವುದಿಲ್ಲ, ಅದರಿಂದ ನಮಗಾಗಲಿ ನಮ್ಮ ದೇಶಕ್ಕಾಗಲಿ ಯಾವುದೇ ಪ್ರಯೋಜನವಿಲ್ಲ"


ಅವರ ಸಿಪಿಎಂ ಪಕ್ಷದ ಹೇಳಿಕೆ : "ಸ್ಟ್ರೈಕ್ ಮಾಡುವುದು ಕಾರ್ಮಿಕ ವರ್ಗದ ಮೂಲಭೂತ ಹಕ್ಕು."

ಪಾಕಿಸ್ತಾನ ಮತ್ತು ಮಾನಸಿಕ ರೋಗ

"ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) ಪಕ್ಷದ ನಾಯಕ ಆಸೀಫ್ ಆಲಿ ಜರ್ದಾರಿ ಅವರು ಕಳೆದ ವರ್ಷದ ತನಕ ತೀವ್ರ ಮಾನಸಿಕ ಅವ್ಯವಸ್ಥೆಯಿಂದ ಬಳಲಿದರು. ಅವರ ವೈದ್ಯರು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲೆಗಳ ಪ್ರಕಾರ ಅವರು ಮಾನಸಿಕ ಖಿನ್ನತೆ, ವ್ಯಾಧಿಗೆ ಒಳಗಾಗಿದ್ದರಲ್ಲದೆ, ಹಲವೊಮ್ಮೆ ಆತ್ಮಹತ್ಯೆ ಮಾಡಿಕೊಳ್ಳುವ ಬಗ್ಗೆಯೂ ಚಿಂತಿಸಿದ್ದರು"

- Financial Times ವರದಿ. ಜರ್ದಾರಿಯವರು ಈಗ ಪಾಕಿಸ್ತಾನದ ಅಧ್ಯಕ್ಷ ಪದವಿಯ ಆಕಾಂಕ್ಷಿಯಾಗಿದ್ದಾರೆ.

ವಾರದ ವಿವೇಕ:



"ನಾವು ದಕ್ಷಿಣ ಭಾರತದವರು ದಪ್ಪಗಿದ್ದು, ಲುಂಗಿಯುಟ್ಟು, ಮೀಸೆ ಹೊಂದಿದ್ದರೆ ಚೆನ್ನ. ನಮ್ಮ ಹಿಂದಿನ ನಾಯಕ ನಟರುಗಳೂ ಇದೇ ತರಹ ಇರುತ್ತಿದ್ದರು. ಅವರಿಂದ ನಾವು ಪ್ರಭಾವಿತರಾಗಿದ್ದೇವೆ. ಹೀಗಾಗಿ ನನಗೆ ನನ್ನ ಹಿಂದಿನ ನಾಯಕ ನಟರು ಸ್ಫೂರ್ತಿಯಾಗುತ್ತಾರೆಯೇ ವಿನಃ ಉತ್ತರ ಭಾರತದ ಹೀರೋಗಳಲ್ಲ, ಆದ್ದರಿಂದ ನಾನು ಸಿಕ್ಸ್‌ಪ್ಯಾಕ್ ಆಬ್ಸ್ ಪಡೆಯುವುದರಲ್ಲಿ ಅರ್ಥವಿಲ್ಲ. ಹಿಂದಿ ನಾಯಕ ನಟರ್‍ಯಾರು ಮೀಸೆ ಬಿಟ್ಟಿರುವುದಿಲ್ಲ. ಹಾಗಂತ ನಾವೂ ಅವರ ತರಹ ಕ್ಲೀನ್‌ಶೇವ್ ಮಾಡಲಾಗುತ್ತದೆಯೇ? ಇಷ್ಟಾಗಿಯೂ ನಟನ ಕೌಶಲ್ಯವನ್ನು ಮಾತ್ರ ಪ್ರೇಕ್ಷಕರು ನೆನಪಿನಲ್ಲಿಟ್ಟುಕೊಳ್ಳುತ್ತಾರೆ ಎಂಬುದು ಅಂತಿಮ ಸತ್ಯ."

- ಮಲೆಯಾಳಂ ಚಿತ್ರರಂಗದ ನಂ 1 ನಟ ಮೋಹನ್ ಲಾಲ್

ದೇವರಿಗೆ ಚಿನ್ನದ ವ್ಯಾಮೋಹ!



ಈ ಚಿನ್ನದ ವ್ಯಾಮೋಹ ಅನ್ನುವುದು ಹೆಂಗಸರಿಗೆ ಮಾತ್ರ ಅಂತ ಭಾವಿಸಿದ್ದೆ. ಮೈಮೇಲೆ ಹೆಚ್ಚೆಚ್ಚು ಆಭರಣ ಹೇರಿಕೊಂಡಷ್ಟೂ ಅವರ ಅಂತಸ್ತು ಏರುತ್ತೆ ಅಂತ ತಿಳ್ಕೊಂಡಿದಾವೆ ಪೆದ್ದು ಮುಂಡೇವು ಅಂದುಕೊಂಡಿದ್ದೆ. ಅದಕ್ಕೇ ಚಿನ್ನದ ಬೆಲೆ ಏರುತ್ತಾ ಹೋದಂತೆ ಅವರ ಮುಖ ಕಪ್ಪಿಡುತ್ತೆ, ಇನ್ನೂ ಹೆಚ್ಚಿಗೆ ಆದೀತೆಂಬ ಭಯದಿಂದ ಆದಷ್ಟೂ ಚಿನ್ನದ ಒಡವೆಗಳನ್ನು ಕೊಂಡಿಡುತ್ತಾರೆ; ಅದೇ ಕಡಿಮೆ ಆದಾಗ ಸಸ್ತಾ ಇರೋವಾಗಲೇ ಕೊಳ್ಳುವುದು ವಾಸಿ ಅಂತ ಅದೇ ಹಳ್ಳಕ್ಕೆ ಬೀಳ್ತಾವೆ ಎಂದೆಲ್ಲ ತಮಾಷೆ ಮಾಡಿಕೊಂಡು ಗೆಳೆಯರ ನಡುವೆ ಕೇಕೆ ಹಾಕಿದ್ದೆ.

ಆದರೆ ಇತ್ತೀಚಿನ ವರದಿಗಳು ಬರುತ್ತಿರುವುದನ್ನು ಕಂಡರೆ ಗಂಡಸರಿಗೇ ಅದರಲ್ಲೂ ಗಂಡು ದೇವರಿಗೇ ಒಡವೆ ಮೇಲೆ ವ್ಯಾಮೋಹ ಜಾಸ್ತಿ ಅನ್ನಿಸುತ್ತಿದೆ. ತಿರುಪತಿ ತಿಮ್ಮಪ್ಪನನ್ನು ನೋಡಿ. ಅವನ ಅಲಂಕಾರಕ್ಕೆ ಅಂತಾನೆ ಎಂಟು ಟನ್ ಚಿನ್ನದ ಒಡವೆ ಇದೆಯಂತೆ! ಇಂತಹ ಒಡವಾಲಂಕೃತ ತಿಮ್ಮಪ್ಪನ ಕಂಡರೇ ಯಾತ್ರಾರ್ಥಿಗಳ ಭಕ್ತಿರಸ ಉಕ್ಕಿ ಹರಿಯುವುದಂತೆ! ಭ್ರಷ್ಟಾಚಾರದ ಪಾಪಪ್ರಜ್ಞೆಯಿಂದ ನರಳುತ್ತಿರುವವರು ತಪ್ಪು ಕಾಣಿಕೆಯಾಗಿ ಹಣವನ್ನೇ ಅಲ್ಲದೆ ಚಿನ್ನದ ಒಡವೆಗಳನ್ನು ಒಪ್ಪಿಸುತ್ತಿದ್ದಾರಂತೆ. ಪ್ರತಿ ವಾರವೂ ಹತ್ತು ಕೆಜಿಯಷ್ಟು ದೈವ ಕಾಣಿಕೆ ಚಿನ್ನದ ರೂಪದಲ್ಲಿ ಸ್ವಾಮಿಯ ಪಾದ ಸೇರುತ್ತಂತೆ. ಆಡಳಿತ ಮಂಡಳಿಯ ಆಯಕಟ್ಟಿನ ಸ್ಥಳದಲ್ಲಿರೋರು ಇಂತಹ ಒಡವೆಗಳಲ್ಲಿ ಕೆಲವನ್ನು ದೇವರ ಮೈಮೇಲೆ ಹಾಕುವುದನ್ನು ಮರೆತು ಹೆಂಡತಿ ಮೈಯನ್ನು ಅಲಂಕರಿಸಿ ಆನಂದಪಡುತ್ತಿದ್ದಾರಂತೆ! ಯಾರ ಹೆಂಡತಿ ಮೇಲೆ ಅಂದರೆ ಅವರ ಸ್ವಂತ ಹೆಂಡತಿಯ ಮೇಲೆ ಇರಬೇಕು ಅನ್ನುವುದು ಊಹೆ ಅಷ್ಟೆ!

ಗುಜರಾತಿನ ಸೋಮನಾಥ ದೇವರಿಗೂ ಇಂತಹದ್ದೇ ವ್ಯಾಮೋಹ ಇರಬೇಕು. ಅಲ್ಲಿಗೂ ಯದ್ವಾತದ್ವಾ ಚಿನ್ನ ಹರಿದು ಬರುತ್ತಿದೆಯಂತೆ. ಈ ಚಿನ್ನಕ್ಕೆ ಒಂದು ಗತಿ ಕಾಣಿಸಬೇಕು ಅಂತ ಆಡಳಿತ ಮಂಡಳಿ ಯೋಚಿಸಿತಂತೆ. ದೇವಸ್ಥಾನ ಫಳಫಳಾಂತ ಹೊಳೆದರೆ ಆಹಾ ಎಷ್ಟೊಂದು ಪಸಂದು ಅಂತ ಅವರು ದೇವಾಲಯದಲ್ಲಿರುವ ಒಂದುನೂರ ಹತ್ತು ಕಂಬಗಳಿಗೂ ಚಿನ್ನದ ತಗಡನ್ನು ಹೊದಿಸಲು ತೀರ್ಮಾನಿಸಿದ್ದಾರಂತೆ! ಇಷ್ಟಕ್ಕೆ ಅಲ್ಲಿನ ಚಿನ್ನ ಕರಗಲ್ಲವಂತೆ. ಅದೆಷ್ಟು ಪಾಪಿಷ್ಟರಿದ್ದಾರೋ ಏನು ಕತೆಯೋ. ಆ ಸ್ವಾಮಿಯ ಮೂರ್ತಿಗೂ ಚಿನ್ನ, ಗೋಪುರಕ್ಕೂ ಚಿನ್ನ ಹೊದಿಸಬೇಕೆಂದು ನಿರ್ಧರಿಸಿದ್ದಾರಂತೆ!

ಅಂದರೆ ಗುಜರಾತ್ ಮಾದರಿಯನ್ನೇ ಮುಂದುವರೆಸಿದರೆ ಎಲ್ಲ ಪ್ರಸಿದ್ಧ ದೇವಾಲಯಗಳೂ ಇನ್ನೂ ಚಿನ್ನಮಯ ಆಗಬಹುದು!


ಅಲ್ಲ, ಇದು ಯಾವ ದೇವರಿಗೆ ಪ್ರೀತಿ ಅಂತೀನಿ.

ಅಳಿಯ ಅಲ್ಲ ಮಗಳ ಗಂಡ!

ಒಂದುನೂರ ಹದಿನಾಲ್ಕು ಜನ ಶಾಸಕರು ಅಮೆರಿಕಾಕ್ಕೆ ಹೋಗಿ ಕನ್ನಡದ ಉದ್ಧಾರ ಮಾಡುವುದು ಕೆಲವರ ಕೆಂಗಣ್ಣಿಗೆ ಗುರಿಯಾಗಿದೆ. ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಗುಜರಾಯಿಸಿ ಸಾರ್ವಜನಿಕರ ಹಣವನ್ನು ಹೀಗೆ ದುಂದು ಮಾಡಬಾರದು ಅಂತ ಹೈಕೋರ್ಟಿನಲ್ಲಿ ಕೇಳಿಕೊಂಡರಂತೆ. ಇಂತಹ ಮೂರ್ಖ ಶಿಖಾಮಣಿಗಳಿಗೆ ಉತ್ತರವೋ ಎಂಬಂತೆ ಅವರೆಲ್ಲ ತಮ್ಮ ಸ್ವಂತ ಖರ್ಚಿನಲ್ಲಿ 'ಅಕ್ಕ'ದಲ್ಲಿ ಭಾಗವಹಿಸಲು ತೆರಳುತ್ತಿದ್ದಾರೆಯೇ ಪರಂತು ಸಾರ್ವಜನಿಕ ಹಣದಿಂದಲ್ಲ ಎಂದು ಸರ್ಕಾರ ಉತ್ತರಿಸಿತಂತೆ. ಈ ಹಿತಾಸಕ್ತಿ ಅರ್ಜಿ ವಜಾ ಆಯಿತಂತೆ-ಅವರ ಹೆಂಡ, ಅವರ ಖಂಡ ಯಾರದ್ದೇನು ಮರ್ಜಿ ಅಂತ.

ವಿಷಯ ಚೀಟದಾಗ ತಿಳಿದು ಬಂದದ್ದು ಏನು ಅಂದರೆ ಈ ಮಹಾಮಹಿಮರು ಸರ್ಕಾರದ ಖರ್ಚಿನಲ್ಲಿ ಹೋಗುತ್ತಿಲ್ಲ; ಆದರೆ ಯಾರು ಯಾರೋ ಪ್ರಾಯೋಜಕರು ಇದರ ಹಿಂದೆ ಇದ್ದಾರಂತೆ! ಅಂದರೆ ಸಾರ್ವಜನಿಕ ಹಣ ಲೂಟಿ ಹೊಡೆಯಲು ರಹದಾರಿ ಪಡೆಯಲಾಗುತ್ತಿದೆ ಅಂದ ಹಾಗಾಯಿತು! ಅಲ್ಲ ಈ ಸುತ್ತಿಬಳಸುವ ವಿಧಾನಕ್ಕಿಂತ ನೇರವಾಗಿ ಸಾರ್ವಜನಿಕ ಹಣದಿಂದಲೇ ಹೋಗಿಬಂದಿದ್ದರೆ ಜನರ ಮೇಲಿನ ಹೊರೆ ಕಡಿಮೆಯಾಗುತ್ತಿತ್ತೇನೋ ಅಂತ ಒಂದು ಚಿಂತನೆ ಅಷ್ಟೆ!

ಎಚ್.ಎಲ್. ಕೇಶವಮೂರ್ತಿ



ಜೆನ್ ಕತೆ

ಮಾತು

ಮಾರುಕಟ್ಟೆಯಲ್ಲಿ ಕೇಳಿದ್ದ ಗಾಳಿಸುದ್ದಿಯನ್ನು ಗುರುಗಳಿಗೆ ಹೇಳಲು ಶಿಷ್ಯ ಓಡೋಡಿ ಬಂದ.

"ಒಂದೇ ಒಂದು ನಿಮಿಷ" ಎಂದ ಗುರುಗಳು "ನೀನು ಹೇಳಬೇಕೆಂದಿರುವುದು ಸತ್ಯವಾ?" ಎಂದು ಕೇಳಿದರು.

"ಗೊತ್ತಿಲ್ಲ" ಎಂದ ಶಿಷ್ಯ.

"ಹೋಗಲಿ, ಅದು ಉಪಯೋಗಕಾರಿಯಾದದ್ದಾ?"

"ಇಲ್ಲ."

"ತಮಾಷೆಯಾಗಿದ್ದು ನಮ್ಮನ್ನು ನಗಿಸುತ್ತದೆಯಾ?"

"ಇಲ್ಲ."

"ಹಾಗಾದರೆ ನಾವು ಅದನ್ನು ಯಾಕೆ ಆಲಿಸಬೇಕು?"


ಒರಿಸ್ಸಾ ಎಂಬ ನರಕ



ಕಂಡಹಾಗೆ

■ ಗೌರಿ ಲಂಕೇಶ್

ಒರಿಸ್ಸಾ ರಾಜ್ಯದ ಕಂದಮಹಲ್ ಜಿಲ್ಲೆ ಮತ್ತೆ ಹತ್ತಿ ಉರಿಯುತ್ತಿದೆ. ಅಲ್ಲಿನ ಹಿಂದೂತ್ವವಾದಿ ಸಂಘಟನೆಗಳ ಸದಸ್ಯರು ಕ್ರಿಶ್ಚಿಯನ್ನರ ಚರ್ಚ್‌ಗಳಿಗೆ, ಮನೆಗಳಿಗೆ ಬೆಂಕಿ ಹಾಕುತ್ತಿದ್ದಾರೆ. ಕ್ರಿಶ್ಚಿಯನ್ನರನ್ನು ಸದೆಬಡಿಯುತ್ತಿದ್ದಾರೆ. ಈಗಾಗಲೇ ಹತ್ತಾರು ಕ್ರಿಶ್ಚಿಯನ್ನರ ಸಾವಿಗೆ ಕಾರಣರಾಗಿದ್ದಾರೆ. ಪೊಲೀಸರಾಗಲಿ, ಆಡಳಿತ ವ್ಯವಸ್ಥೆಯಾಗಲಿ ಅಲ್ಲಿನ ಅಮಾಯಕ ಜನರ ನೆರವಿಗೆ ಬಾರದಂತೆ, ಹಿಂಸಾವಾದಿಗಳ ಅಟ್ಟಹಾಸವನ್ನು ತಡೆಯುದಂತೆ ಕಂದಮಹಲ್ ಪ್ರದೇಶಕ್ಕಿರುವ ರಸ್ತೆಗಳನ್ನೆಲ್ಲ ಬಂದ್ ಮಾಡಿದ್ದಾರೆ. ಇವರ ಕ್ರೌರ್ಯಕ್ಕೆ ಹೆದರಿ ಅದೆಷ್ಟೋ ಬಡ ಕ್ರಿಶ್ಚಿಯನ್ನರು ತಮ್ಮ ಮನೆ, ಗುಡಿಸಲುಗಳನ್ನು ತೊರೆದು ಹತ್ತಿರದ ಅಡವಿಯಲ್ಲಿ ಬಚ್ಚಿಟ್ಟುಕೊಂಡಿದ್ದಾರೆ. ಸಾವಿರಾರು ಜನ ನಿರಾಶ್ರಿತರ ಶಿಬಿರಗಳಲ್ಲಿ ಯಾವುದೇ ಸೌಲಭ್ಯಗಳಿಲ್ಲದೆ ದಿನಗಳನ್ನು ದೂಡುತ್ತಿದ್ದಾರೆ.



ಇದೆಲ್ಲ ಪ್ರಾರಂಭವಾಗಿದ್ದು ಲಕ್ಷ್ಮಣಾನಂದ ಸರಸ್ವತಿ ಎಂಬ ವಿಶ್ವ ಹಿಂದೂ ಪರಿಷತ್ತಿನ ಸ್ವಾಮಿಯ ಅಮಾನುಷ ಕೊಲೆಯಿಂದ. ಅದು ನಡೆದದ್ದು ಆಗಸ್ಟ್ 23 ರಂದು. ಅವತ್ತು ಕೃಷ್ಣ ಜನ್ಮಾಷ್ಟಮಿ. ಈ ಹಬ್ಬವನ್ನು ಆಚರಿಸಲು ಲಕ್ಷ್ಮಣಾನಂದ ಸರಸ್ವತಿ ತಾನು ಓಲೇಪಟ್ಟಾ ಎಂಬ ಊರಿನಲ್ಲಿ ಆದಿವಾಸಿ ಹುಡುಗಿಯರಿಗೆ ನಡೆಸುತ್ತಿದ್ದ ಕನ್ಯಾಶ್ರಮದಲ್ಲಿ ತಂಗಿದ್ದ. ಅವತ್ತಿನ ರಾತ್ರಿ ಆಶ್ರಮಕ್ಕೆ ನುಗ್ಗಿದ ಹತ್ತಾರು ಬಂದೂಕುಧಾರಿಗಳು ಮನಸೋಇಚ್ಛೆ ಹಾರಿಸಿದ ಗುಂಡುಗಳಿಗೆ 85 ವರ್ಷ ವಯಸ್ಸಾಗಿದ್ದ ಲಕ್ಷ್ಮಣಾನಂದ ಸೇರಿದಂತೆ ಇನ್ನೂ ನಾಲ್ವರು ಪ್ರಾಣ ತೆತ್ತರು.

ಲಕ್ಷ್ಮಣಾನಂದನ ಕೊಲೆ ಖಂಡನಾರ್ಹ. ಆತನ ಬಗ್ಗೆ ಅದೆಷ್ಟೇ ಅಸಮಾಧಾನವಿದ್ದರೂ ಆತನ ಕೆಲಸ, ಧೋರಣೆ ಮತ್ತು ಕೃತ್ಯಗಳ ಬಗ್ಗೆ ಅದೆಷ್ಟೇ ಮನಸ್ತಾಪವಿದ್ದರೂ ಯಾವುದೇ ಕೊಲೆಯನ್ನು ಸಮರ್ಥಿಸಲಾಗುವುದಿಲ್ಲ. ಆದರೆ ಇವತ್ತು ಒರಿಸ್ಸಾದಲ್ಲಿ ಏನಾಗುತ್ತಿದೆ ಎಂದು ಅರ್ಥ ಮಾಡಿಕೊಳ್ಳಲು, ಅಲ್ಲಿನ ಇತಿಹಾಸ, ಪ್ರಸ್ತುತ ಪರಿಸ್ಥಿತಿ, ಹಿಂಸಾಕೃತ್ಯದಲ್ಲಿ ವಿವಿಧ ಧಾರ್ಮಿಕ ಸಂಘಟನೆಗಳ ಪಾತ್ರ ಮತ್ತು ಈಗ ಅಂತಹದ್ದೇ ಹಿಂಸಾಕೃತ್ಯಕ್ಕೆ ಬಲಿಯಾಗಿರುವ ಲಕ್ಷ್ಮಣಾನಂದ ಸರಸ್ವತಿ ಎಂಬ ಸ್ವಾಮಿಯ ದುಷ್ಟತನದತ್ತ ಗಮನ ಹರಿಸಬೇಕಿದೆ.

ಭಾರತದ ಇತರೆ ರಾಜ್ಯಗಳಿಗೆ ಹೋಲಿಸಿದರೆ ಒರಿಸ್ಸಾ ಹಿಂದುಳಿದ ರಾಜ್ಯವಾಗಿದೆಯಲ್ಲದೆ, ಅಲ್ಲಿನ ಬಹಳಷ್ಟು ಪ್ರದೇಶಗಳನ್ನು ಇವತ್ತಿಗೂ ಕಿತ್ತು ತಿನ್ನುವ ಬಡತನ ಕಾಡುತ್ತಿದೆ. ಅದರಲ್ಲೂ ಹೆಚ್ಚಿನ ಸಂಖ್ಯೆಯಲ್ಲಿರುವ ಆದಿವಾಸಿಗಳು ಮತ್ತು ದಲಿತರು ಲಭ್ಯವಿರುವ ಅಲ್ಪಸ್ವಲ್ಪ ಸವಲತ್ತುಗಳಿಗೂ ಪರಸ್ಪರ ಕಿತ್ತಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ವಾತಂತ್ರ್ಯ ಬಂದು 61 ವರ್ಷಗಳಾದರೂ ರಾಜ್ಯದ ಬಹಳಷ್ಟು ಪ್ರದೇಶಗಳಿಗೆ ಸರ್ಕಾರ ಎಂಬುದು ಇಂದಿಗೂ ಕಾಲಿಟ್ಟಿಲ್ಲ. ಆದ್ದರಿಂದ ಶಾಲೆ, ಆಸ್ಪತ್ರೆ, ಪೊಲೀಸ್ ಠಾಣೆ, ಉದ್ಯೋಗ ಅವಕಾಶ ಎಂಬುದೆಲ್ಲ ಅಲ್ಲಿನ ಜನರಿಗೆ ಮರೀಚಿಕೆಗಳಾಗಿಯೇ ಉಳಿದಿವೆ. ಇಂತಹ ಪ್ರದೇಶದಲ್ಲಿ ಇವತ್ತಿಗೂ ಭೂಸುಧಾರಣೆ ಕಾನೂನು ಜಾರಿಗೆ ಬಂದಿಲ್ಲ, ಶೇ. 60 ರಷ್ಟು ಸರ್ಕಾರಿ ಶಾಲೆಗಳಲ್ಲಿ ಮೇಷ್ಟ್ರುಗಳೇ ಇಲ್ಲ, ಆರೋಗ್ಯ ಕೇಂದ್ರಗಳಂತೂ ಇಲ್ಲವೇ ಇಲ್ಲ ಎಂದರೆ ಅಚ್ಚರಿ ಆಗದಿರದು.


ಆದರೆ ಯಾವ ಪ್ರದೇಶಗಳಿಗೆ ಸರ್ಕಾರ ಕಾಲಿಡಲಿಲ್ಲವೋ ಅಲ್ಲಿಗೆ ಅರವತ್ತರ ದಶಕದಲ್ಲಿ ಹಲವಾರು ಧಾರ್ಮಿಕ ಸಂಘಟನೆಗಳು ಕಾಲಿಟ್ಟವು. ಅದರ ಹಿಂದೆ ಅವುಗಳದ್ದೇ ಆದ ಧಾರ್ಮಿಕ ನಿಷ್ಠೆ ಮತ್ತು ಅದರೊಂದಿಗೆ ಧಾರ್ಮಿಕ ಸ್ವಾರ್ಥ ಇದ್ದವೆಂಬುದನ್ನೂ ಅಲ್ಲಗಳೆಯಲಾಗುವುದಿಲ್ಲ. ಈಗ ಹಿಂಸಾಚಾರಕ್ಕೆ ತುತ್ತಾಗಿರುವ ಕಂದಮಹಲ್ ಜಿಲ್ಲೆಯನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ಅಲ್ಲಿ ಬಹುಸಂಖ್ಯೆಯಲ್ಲಿರುವವರು ಖೊಂಡೋಸ್ ಎಂಬ ಪರಿಶಿಷ್ಟ ವರ್ಗ (ಆದಿವಾಸಿ) ಮತ್ತು ಪನಾಸ್ ಎಂಬ ಪರಿಶಿಷ್ಟ ಜಾತಿ(ದಲಿತ)ಯ ಜನ. ನೂರಾರು ವರ್ಷಗಳಿಂದ ಖೊಂಡೋಸ್ ಜಾತಿಯವರು ದಲಿತರ ಮೇಲೆ ದಬ್ಬಾಳಿಕೆ ನಡೆಸುತ್ತಲೇ ಬಂದಿದ್ದರು.

ಅರವತ್ತರ ದಶಕದಲ್ಲಿ ಆ ಪ್ರದೇಶಕ್ಕೆ ಕ್ರಿಶ್ಚಿಯನ್ ಸಂಘಟನೆಗಳು ಕಾಲಿಟ್ಟು, ಶಾಲೆ ಮತ್ತು ಆಸ್ಪತ್ರೆಗಳನ್ನು ಪ್ರಾರಂಭಿಸಿದಾಗ ಅವುಗಳ ಲಾಭ ಪಡೆದವರು ದಲಿತರು. ಆ ದಲಿತರಲ್ಲಿ ಬಹಳಷ್ಟು ಜನ ಕೂಲಿ ಕೆಲಸ ಮಾಡುವವರು, ಅಕಸ್ಮಾತ್ ಅವರಲ್ಲಿ ಕೆಲವರು ಭೂಮಿ ಹೊಂದಿದ್ದರೆ ಅದು ಅರ್ಧ ಎಕರೆಗಿಂತ ಹೆಚ್ಚಿರುತ್ತಿರಲಿಲ್ಲ. ಕ್ರಿಶ್ಚಿಯನ್ ಸಂಘಟನೆಗಳು ನಡೆಸುತ್ತಿದ್ದ ಆಸ್ಪತ್ರೆ, ವಿದ್ಯಾಸಂಸ್ಥೆಗಳಿಂದ ಲಾಭ ಪಡೆದ ದಲಿತರು ಉದ್ಯೋಗಾವಕಾಶಗಳನ್ನೂ ಪಡೆಯಲಾರಂಭಿಸಿದರಲ್ಲದೆ, ಅವರಲ್ಲಿ ಬಹಳಷ್ಟು ಜನ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡರು.

ಈ ವಿದ್ಯಮಾನಗಳನ್ನು ಗಮನಿಸುತ್ತಿದ್ದ ಹಿಂದೂತ್ವವಾದಿ ಸಂಘಟನೆಗಳಾದ RSS, ವಿಶ್ವಹಿಂದೂ ಪರಿಷತ್ ಮತ್ತು ಅದರ ವಿವಿಧ ಸಂಘಟನೆಗಳು ಕೂಡ ಅರವತ್ತರ ದಶಕದಲ್ಲಿ ಈ ಪ್ರದೇಶವನ್ನು ಪ್ರವೇಶಿಸಿದವು. ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿರುವ ದಲಿತರು ಗೋಮಾಂಸ ತಿನ್ನಲಾರಂಭಿಸಿದ್ದಾರೆ (ಮತಾಂತರಗೊಳ್ಳುವ ಮುನ್ನವೂ ದಲಿತರು ಗೋಮಾಂಸ ತಿನ್ನುತ್ತಿದ್ದರು ಎಂಬುದನ್ನು ಬೇಕೆಂತಲೇ ಮರೆತು) ಎಂದು ಗುಲ್ಲೆಬ್ಬಿಸಿದ RSS 1965 ರಲ್ಲಿ ಗೋರಕ್ಷಾ ಆಂದೋಲನವನ್ನು ಪ್ರಾರಂಭಿಸಿತು. ಈ ಆಂದೋಲನದ ಉಸ್ತುವಾರಿಯನ್ನು ಅಗಸ ಜಾತಿಗೆ ಸೇರಿದ ಲಕ್ಕನ್ ಎಂಬಾತನಿಗೆ ನೀಡಲಾಗಿತ್ತು. ಈ ಲಕ್ಕನ್ ಎಂಬಾತನೇ ಆನಂತರ ಕಾವಿ ತೊಟ್ಟು ಲಕ್ಷ್ಮಣಾನಂದ ಸರಸ್ವತಿ ಎಂಬ ಸ್ವಾಮಿ ಆಗಿದ್ದು. ಆಗ ಅಲ್ಲಿನ ಪರಿಸ್ಥಿತಿ ಹಿಂದೂತ್ವವಾದಿಗಳಿಗೆ ಹೇಳಿಮಾಡಿಸಿದಂತಿತ್ತು. ಒಂದೆಡೆ ಮೇಲುಜಾತಿಗಳ ಮತ್ತು ಖೊಂಡೋಸ್ ವರ್ಗದವರ ಕಪಿಮುಷ್ಟಿಯಿಂದ ತಪ್ಪಿಸಿಕೊಳ್ಳಲಾರಂಭಿಸಿದ್ದ ದಲಿತರು, ಇನ್ನೊಂದೆಡೆ ವಿದ್ಯೆ ಪಡೆದಿದ್ದರಿಂದ ಉದ್ಯೋಗ ಪಡೆದು ತಮ್ಮ ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳುತ್ತಿದ್ದ ದಲಿತ ಕ್ರಿಶ್ಚಿಯನ್ನರು, ಮತ್ತೊಂದೆಡೆ ತಮ್ಮ ಧರ್ಮ ಪ್ರಚಾರದಿಂದ ದೊಡ್ಡ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸುತ್ತಿದ್ದ ಕ್ರಿಶ್ಚಿಯನ್ ಸಂಘಟನೆಗಳು, ಮಗದೊಂದೆಡೆ ಮತಾಂತರಗೊಂಡಿದ್ದಕ್ಕೆ ಮೀಸಲಾತಿ ಅವಕಾಶಗಳಿಂದ ವಂಚಿತರಾಗಿದ್ದು ತಮಗೂ ಮೀಸಲಾತಿ ನೀಡಬೇಕೆಂದು ಒತ್ತಾಯಿಸುತ್ತಿದ್ದ ದಲಿತ ಕ್ರಿಶ್ಚಿಯನ್ನರು. ಶ್ರೇಣೀಕೃತ ಸಮಾಜವನ್ನೇ ಕಾಪಾಡಿಕೊಳ್ಳಬೇಕು ಎಂದೇ ನಂಬಿರುವ ಹಿಂದೂತ್ವವಾದಿಗಳ ಬೆಂಬಲಕ್ಕೆ ಸಹಜವಾಗಿಯೇ ಮೇಲುಜಾತಿಯವರು ನಿಂತರು. ಅದೇ ಹೊತ್ತಿಗೆ ಮೀಸಲಾತಿಯಲ್ಲಿ ಪಾಲು ಕೇಳುತ್ತಿದ್ದ ದಲಿತ ಕ್ರಿಶ್ಚಿಯನ್ನರ ವಿರುದ್ಧ ಮೀಸಲಾತಿಯಿಂದ ಅವಕಾಶಗಳನ್ನು ಪಡೆಯುತ್ತಿರುವ ಬಹುಸಂಖ್ಯಾತ ಖೊಂಡೋಸ್ ಜನರೂ RSS ಮತ್ತು ವಿಶ್ವಹಿಂದೂ ಪರಿಷತ್ತಿನ ಕಾಲಾಳುಗಳಾದರು.







ಕ್ರಿಶ್ಚಿಯನ್ನರಿಂದ ಹಿಂದೂ ಧರ್ಮಕ್ಕೆ ಅಪಾಯವಿದೆ ಎಂದು ಅಬ್ಬರಿಸಲಾರಂಭಿಸಿದ RSS ವ್ಯವಸ್ಥಿತ ಯೋಜನೆಗಳನ್ನು ಜಾರಿಗೆ ತರಲಾರಂಭಿಸಿತು. 70 ರ ದಶಕದ ಪ್ರಾರಂಭದಲ್ಲಿ ಲಕ್ಷ್ಮಣಾನಂದ ಸರಸ್ವತಿಯ ನೇತೃತ್ವದಲ್ಲಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದ ಆದಿವಾಸಿಗಳನ್ನು ಮತ್ತು ದಲಿತರನ್ನು ಬಲವಂತವಾಗಿ ಹಿಂದೂ ಧರ್ಮಕ್ಕೆ 'ಮರು' ಮತಾಂತರಗೊಳಿಸಲಾರಂಭಿಸಿತು.

ಆತ ಮತ್ತಾತನ ಹಿಂದೂತ್ವವಾದಿ ಸಂಘಟನೆಗಳು ಅದನ್ನಷ್ಟೇ ಮಾಡಿಕೊಂಡು ಹೋಗಿದ್ದರೆ ಸಮಸ್ಯೆ ಇರಲಿಲ್ಲ. ಕಾನೂನಿನ ವಿರುದ್ಧ ಆಮಿಷಗಳನ್ನು ನೀಡಿ ಕ್ರಿಶ್ಚಿಯನ್ ಸಂಘಟನೆಗಳು ಜನರನ್ನು ಮತಾಂತರ ಮಾಡುತ್ತಿದ್ದರೆ ಅವರ ವಿರುದ್ಧ ದೂರು ನೀಡಿ ಶಿಕ್ಷೆ ಆಗುವಂತೆ ಮಾಡಿದ್ದರೂ ಪರವಾಗಿರಲಿಲ್ಲ. ಆದರೆ ಲಕ್ಷ್ಮಣಾನಂದ ಮತ್ತಾತನ ಹಿಂದೂತ್ವವಾದಿ ಸಂಘಟನೆಗಳ ಜಾಯಮಾನ ಅದಾಗಿರಲಿಲ್ಲ. ಹಿಂದೂ ಧರ್ಮವನ್ನು ರಕ್ಷಿಸುತ್ತಿದ್ದೇವೆಂಬ ನೆಪದಲ್ಲಿ ಕೋಮು ಗಲಭೆಗಳಿಗೆ ಪ್ರಚೋದನೆ ನೀಡುತ್ತಿದ್ದ, ಗೋಹತ್ಯೆಯನ್ನು ನಿಷೇಧಿಸಬೇಕೆಂದು ಮುಸಲ್ಮಾನರ ವಿರುದ್ಧವೂ, ಮತಾಂತರ ತಡೆಯಬೇಕೆಂದು ಕ್ರಿಶ್ಚಿಯನ್ನರ ವಿರುದ್ಧವೂ ಹಿಂದೂಗಳನ್ನು ಪ್ರಚೋದಿಸುತ್ತಿದ್ದ, ಅವರನ್ನು ಅನ್ಯಧರ್ಮೀಯರ ಮೇಲೆ ಛೂ ಬಿಡುತ್ತಿದ್ದ.

ಮೊದಮೊದಲು ಚಿಕ್ಕಪುಟ್ಟ ಘರ್ಷಣೆಗಳಿಗಿದ್ದ ಇಂತಹ ಘಟನೆಗಳು ಕಾಲಕ್ರಮೇಣ ದೊಡ್ಡ ರೂಪ ಪಡೆದವು. ಹಿಂದೂತ್ವವಾದಿ ಸಂಘಟನೆಗಳಿಗೆ ಸಾವಿರಾರು ಜನ ಸೇರಿಕೊಂಡರು. ಒಂದು ಅಂದಾಜಿನ ಪ್ರಕಾರ ಇವತ್ತು ಒರಿಸ್ಸಾ ರಾಜ್ಯದಲ್ಲಿ RSS ಮತ್ತದರ ಬೆಂಬಲಿತ ಸಂಘಟನೆಗಳ ಸದಸ್ಯತ್ವ 1,50,000 ಕ್ಕಿಂತಲೂ ಹೆಚ್ಚಾಗಿದೆ.

RSS ನ ಸದಸ್ಯತ್ವ ಹೆಚ್ಚಾದಂತೆ ಆ ರಾಜ್ಯದಲ್ಲಿನ ಕೋಮು ಗಲಭೆಗಳು ಅನ್ಯಧರ್ಮೀಯರ ಮೇಲಿನ ಹಿಂಸಾಕೃತ್ಯಗಳು ಹೆಚ್ಚಾಗಲಾರಂಭಿಸಿದವು. 1986 ರಲ್ಲಿ ದೊಡ್ಡಮಟ್ಟದಲ್ಲಿ ಕೋಮುಗಲಭೆಗಳು ನಡೆದವು. 1999 ರ ಜನವರಿ 8 ರಂದು ಆಸ್ಟ್ರೇಲಿಯಾದ ಗ್ರಹಾಂ ಸ್ಟೈನ್ಸ್ ಮತ್ತು ಅವರ ಇಬ್ಬರು ಗಂಡುಮಕ್ಕಳನ್ನು ದಾರಾಸಿಂಗ್ ಮತ್ತಾತನ ಭಜರಂಗ ದಳದವರು ಜೀವಂತವಾಗಿ ಸುಟ್ಟು ಹಾಕಿದರು. ಅದೇ ವರ್ಷ ಅರುಲ್ ದಾಸ್ ಎಂಬ ಪಾದ್ರಿಯನ್ನೂ ಹಿಂದೂತ್ವವಾದಿಗಳು ಕೊಂದರು. ಗ್ರಹಾಂ ಸ್ಟೈನ್ಸ್ ಕೊಲೆ ಕೇಸಿನಲ್ಲಿ ದಾರಾಸಿಂಗನಿಗೆ ಮರಣದಂಡನೆಯನ್ನೂ, ಆತನ 13 ಸಹಚರರಿಗೆ ಜೀವಾವಧಿ ಶಿಕ್ಷೆಯನ್ನೂ ನ್ಯಾಯಾಲಯ ನೀಡಿತು. ಗ್ರಹಾಂ ಸ್ಟೈನ್ಸ್‌ರವರ ಬರ್ಬರ ಹತ್ಯೆ ಮತ್ತು ಅದಕ್ಕೆ ನೀಡಿದ ಶಿಕ್ಷೆಯಿಂದಲಾದರೂ ಅಂಧವಾಗಿ ಹಿಂದೂತ್ವವಾದವನ್ನು ಬೆಂಬಲಿಸುತ್ತಿರುವವರು ಎಚ್ಚರಗೊಳ್ಳಬೇಕಿತ್ತು; ಆ ಸಿದ್ಧಾಂತದಿಂದಾಗಿ ತಾವು ಮನುಷ್ಯರಾಗಿ ಉಳಿದಿಲ್ಲ, ಬದಲಾಗಿ ಮೃಗಗಳಾಗಿದ್ದೇವೆ ಎಂಬುದನ್ನಾದರೂ ಅರ್ಥಮಾಡಿಕೊಳ್ಳಬೇಕಿತ್ತು.

ಆದರೆ ಗಾಂಧಿಗಿಂತ ಅವರನ್ನು ಕೊಂದ ಗೋಡ್ಸೆ ದೊಡ್ಡವನು, ದೇಶದ್ರೋಹಿ ವಿ.ಡಿ. ಸಾವರ್ಕರ್ ಎಂಬಾತನೇ 'ವೀರ', ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಳ್ಳಲಿದ್ದ RSS ಮಹಾನ್ ರಾಷ್ಟ್ರಪ್ರೇಮಿ ಸಂಘಟನೆ ಎಂದೆಲ್ಲಾ ಸುಳ್ಳು ಹೇಳುವ ಹಿಂದೂತ್ವವಾದಿಗಳು ದಾರಾಸಿಂಗ್‌ನನ್ನು ಖಂಡಿಸುವ ಬದಲಾಗಿ ಆತನನ್ನು ಹಿಂದೂಧರ್ಮ ರಕ್ಷಕ ಎಂದು ಬಿಂಬಿಸಿತು. ಆತನಂತೆ ಹಿಂಸಾಕೃತ್ಯಗಳಲ್ಲಿ ತೊಡಗುವವರು ಧೈರ್ಯಶಾಲಿಗಳು ಎಂದಿತು. ಹಾಗೆಯೇ ಶಸ್ತ್ರಾಸ್ತ್ರ ಪಡೆಗಳನ್ನೂ, ಆತ್ಮಾಹುತಿ ದಳಗಳನ್ನೂ ಹುಟ್ಟುಹಾಕಿತು. ಇದೆಲ್ಲದರಿಂದ ಕೋಮುಗಲಭೆಗಳು ಹೆಚ್ಚಾದವು. ಇದೇ ಹೊತ್ತಿಗೆ ಬಿಜೆಪಿ ಬೆಂಬಲದೊಂದಿಗೆ ಬಿಜೆಡಿಯ ನವೀನ್ ಪಟ್ನಾಯಕ್ ನೇತೃತ್ವದ ಸರ್ಕಾರ ಅಲ್ಲಿ ಅಧಿಕಾರಕ್ಕೆ ಬಂದಿದ್ದು ಹಿಂದೂತ್ವವಾದಿಗಳಿಗೆ ಲಂಗುಲಗಾಮು ಹಾಕುವವರೇ ಇಲ್ಲದಂತಾಯಿತು.

ಲಕ್ಷ್ಮಣಾನಂದ ಸರಸ್ವತಿ ನೇತೃತ್ವದಲ್ಲಿ ಹಿಂದೂತ್ವವಾದಿಗಳು ಕಂಡಕಂಡ ಚರ್ಚ್‌ಗಳ ಮೇಲೆ, ಕ್ರಿಶ್ಚಿಯನ್ನರ ಮೇಲೆ ದಾಳಿ ಇಡಲಾರಂಭಿಸಿದರು. 2007 ರ ಡಿಸೆಂಬರ್ ತಿಂಗಳಲ್ಲಿ ಇದು ಅತಿರೇಕಕ್ಕೆ ಹೋಗಿ ಸ್ವತಂತ್ರ ಭಾರತದ ಇತಿಹಾಸದಲ್ಲೇ ಅತಿ ದೊಡ್ಡ ಪ್ರಮಾಣದಲ್ಲಿ ಕ್ರಿಶ್ಚಿಯನ್ನರ ಮೇಲೆ ವ್ಯವಸ್ಥಿತ ದಾಳಿ ನಡೆಯಿತು. "ಕ್ರೈಸ್ತ ಧರ್ಮವನ್ನು ಕಿತ್ತೊಗೆಯಿರಿ, ಕ್ರಿಶ್ಚಿಯನ್ನರನ್ನು ಕೊಲ್ಲಿ", "ಕ್ರಿಶ್ಚಿಯನ್ನರು ಹಿಂದೂಗಳಾಗಬೇಕು ಅಥವಾ ಮಡಿಯಬೇಕು", "ಗೀತಾ ಬೇಕು, ಬೈಬಲ್ ಬೇಡ", "ಕ್ರಿಶ್ಚಿಯನ್ ಧರ್ಮವನ್ನು ನಾಶ ಮಾಡಿ" ಎಂಬ ಸ್ಲೋಗನ್ನುಗಳೊಂದಿಗೆ ದಾಳಿ ಇಡಲಾರಂಭಿಸಿದ ಹಿಂದೂತ್ವವಾದಿಗಳು ಎಂತಹ ಉಗ್ರರೂಪ ತಾಳಿದರೆಂದರೆ ಕ್ರಿಶ್ಚಿಯನ್ನರ ದನದ ಕೊಟ್ಟಿಗೆಗಳಿಂದ ಹಸುಗಳನ್ನು ಹೊರಗೆಳೆದು ಅವುಗಳೂ 'ಕ್ರಿಶ್ಚಿಯನ್ ಹಸುಗಳು' ಎಂದೆನ್ನುತ್ತಾ ಆ ಮೂಕಪ್ರಾಣಿಗಳನ್ನು ಕೊಂದರು. ಇವರ ಗೋರಕ್ಷಣೆ, ಗೋಪ್ರೇಮ ಇಂತಹದ್ದು!

ಅಂದಿನ ಗಲಭೆಗಳಲ್ಲಿ ನೂರಾರು ಚರ್ಚ್‌ಗಳು, ಕ್ರಿಶ್ಚಿಯನ್ ಮನೆಗಳು ಧ್ವಂಸಗೊಂಡವಲ್ಲದೆ, ಪಾಸ್ಟರ್ ದಿಗಾಲ್ ಎಂಬುವವರು ತಮ್ಮ ಧರ್ಮವನ್ನು ತಿರಸ್ಕರಿಸಿ ಹಿಂದೂ ಧರ್ಮಕ್ಕೆ 'ಮರು' ಮತಾಂತರಗೊಳ್ಳಲು ಒಪ್ಪಲಿಲ್ಲವೆಂದು ಅವರ ತಲೆ ಬೋಳಿಸಿ, ಅವರನ್ನು ನಗ್ನಗೊಳಿಸಿ, ಊರಿನ ತುಂಬಾ ಮೆರವಣಿಗೆ ಮಾಡಿದ್ದರು. ನಾಲ್ಕೈದು ದಿನ ಮುಂದುವರಿದ ಆ ಗಲಭೆಗಳಲ್ಲಿ ನಾಲ್ವರು ಸಾವನ್ನಪ್ಪಿದ್ದರು. ಇಷ್ಟೆಲ್ಲಾ ಹಿಂಸೆ, ದೌರ್ಜನ್ಯ ಕೊಲೆ ನಡೆಯುತ್ತಿದ್ದರೂ ಪೊಲೀಸರು ಗಲಭೆಕೋರರ ಮೇಲೆ ಕ್ರಮ ತೆಗೆದುಕೊಳ್ಳದೆ ಕೈಕಟ್ಟಿ ಕೂತಿದ್ದರು.

ಅವತ್ತಿನ ಗಲಭೆಗಳಿಗೆ ಪ್ರಚೋದನೆ ನೀಡಿದ್ದವನೇ ಲಕ್ಷ್ಮಣಾನಂದ ಸರಸ್ವತಿ. ಆತನ ವಿರುದ್ಧ ದೂರು ನೀಡಲು ಕೆಲವರು ಪ್ರಯತ್ನಿಸಿದ್ದರೂ ಪೊಲೀಸರು ದಾಖಲಿಸಿಕೊಂಡಿರಲಿಲ್ಲ. ಮಾತ್ರವಲ್ಲ "ಕ್ರಿಶ್ಚಿಯನ್ ಧರ್ಮ ಸ್ವೀಕರಿಸುವವರೆಲ್ಲರೂ ದೇಶದ ವೈರಿಗಳು. ಇಲ್ಲಿಂದ ಕ್ರಿಶ್ಚಿಯನ್ನರು ತೊಲಗಿದರೆ ಯಾವ ಸಮಸ್ಯೆಯೂ ಇರುವುದಿಲ್ಲ. ನೀವೆಲ್ಲ ಬರೀ ಟೈಯರ್‌ಗಳನ್ನು ಸುಡುತ್ತಿದ್ದೀರಿ. ಇದರಿಂದ ಏನು ಪ್ರಯೋಜನ? ನೀವು ಎಷ್ಟು ಕ್ರಿಶ್ಚಿಯನ್ನರನ್ನು, ಅವರ ಚರ್ಚುಗಳನ್ನು ಸುಟ್ಟಿದ್ದೀರಿ? ಕ್ರಾಂತಿ ಇಲ್ಲದೆ ಶಾಂತಿ ಇರಲ್ಲ" ಎಂದೆಲ್ಲಾ ಆತ ಹೇಳಿದ್ದು ದೇಶದ ಪ್ರಮುಖ ಟಿವಿ ಚಾನೆಲ್‌ಗಳಲ್ಲೂ ಪ್ರಸಾರಗೊಂಡಿದ್ದವು. ಆದರೂ ಒರಿಸ್ಸಾ ಸರ್ಕಾರ ಆತನ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಂಡಿರಲಿಲ್ಲ.

'ಮಾಡಿದ್ದುಣ್ಣೋ ಮಹಾರಾಯ' ಎಂಬ ಗಾದೆ ಮಾತಿನ ಅರ್ಥ ಲಕ್ಷ್ಮಣಾನಂದ ಸರಸ್ವತಿಗೆ ಗೊತ್ತಿತ್ತು ಅನ್ನಿಸುತ್ತದೆ. ಆದ್ದರಿಂದ ತನಗೆ ಜೀವಭಯ ಇದೆ ಎಂದು ಆತ ಪೊಲೀಸರು ರಕ್ಷಣೆ ಕೋರಿದ್ದ. ಅದನ್ನು ಸರ್ಕಾರ ಆತನಿಗೆ ಒದಗಿಸಿತ್ತು. ಆದರೂ ಆತನ ಹೆಣ ಕಳೆದವಾರ ನೆಲಕ್ಕುರುಳಿತು.

ಲಕ್ಷ್ಮಣಾನಂದ ಸರಸ್ವತಿ ಮೇಲೆ ಬಹಳಷ್ಟು ಜನರಿಗೆ ಕೋಪವಿತ್ತು ಹಗೆ ಇತ್ತು, ಆದರೆ ಆತನನ್ನು ಕೊಂದವರು ಯಾರು?

ಪೊಲೀಸರ ಪ್ರಕಾರ ಮಾವೋವಾದಿಗಳು. ಆದರೆ ಅದನ್ನು ಮಾವೋವಾದಿಗಳು ನಿರಾಕರಿಸಿದ್ದಾರೆ.

ಹಿಂದೂತ್ವವಾದಿಗಳ ಪ್ರಕಾರ ಲಕ್ಷ್ಮಣಾನಂದ ಸರಸ್ವತಿಯನ್ನು ಕೊಂದದ್ದು ಕ್ರಿಶ್ಚಿಯನ್ ಸಂಘಟನೆ. ಆದರೆ ಬಹಳಷ್ಟು ಕ್ರಿಶ್ಚಿಯನ್ ಸಂಘಟನೆಗಳು ಆತನ ಕೊಲೆಯನ್ನು ಖಂಡಿಸಿವೆ. ಕೊಲೆ ಮಾಡಿದವರನ್ನು ಪತ್ತೆಹಚ್ಚಿ ಶಿಕ್ಷಿಸಬೇಕೆಂದು ಆಗ್ರಹಿಸಿವೆ.

ಇನ್ನೂ ಕೆಲವರ ಪ್ರಕಾರ ಹಿಂದೂತ್ವವಾದಿಗಳೇ ಲಕ್ಷ್ಮಣಾನಂದನನ್ನು ಕೊಂದಿರಲೂಬಹುದು. ಯಾಕೆಂದರೆ ಆತನ ಮೇಲೆ ಹಲ್ಲೆ ನಡೆದಾಗ ಆತನ ರಕ್ಷಣೆಗಿದ್ದ ನಾಲ್ವರು ಪೊಲೀಸರು ಯಾವುದೇ ಗಾಯವೂ ಆಗದಂತೆ ತಪ್ಪಿಸಿಕೊಂಡಿದ್ದಾರೆ. ಮಾತ್ರವಲ್ಲ ಅಂದು ಆತನೊಂದಿಗಿದ್ದ ಹಲವು ಆಪ್ತರೂ ಪವಾಡದಂತೆ ತಪ್ಪಿಸಿಕೊಂಡಿದ್ದಾರೆ. ಇದು ಹೇಗೆ ಸಾಧ್ಯವಾಯಿತು? ಇದರ ಹಿಂದೆ ದೊಡ್ಡ ಸಂಚೊಂದಿರಬಹುದೇ ಎಂದು ಕೆಲವರು ಪ್ರಶ್ನಿಸುತ್ತಿದ್ದಾರೆ.

ಅವರ ಪ್ರಶ್ನೆಗಳಿಗೆ ಕಾರಣಗಳು ಇಲ್ಲವೆಂದಲ್ಲ. ಸದ್ಯದಲ್ಲೇ ಒರಿಸ್ಸಾದಲ್ಲಿ ಚುನಾವಣೆಗಳು ನಡೆಯಲಿವೆ. ಅಲ್ಲಿನ ಜನರ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಯಾವ ಕೆಲಸವನ್ನೂ ಮಾಡಿರದ ಬಿಜೆಪಿಗೆ ನವೀನ್ ಪಟ್ನಾಯಕ್ ಹಂಗಿಲ್ಲದೆ ಅಧಿಕಾರಕ್ಕೆ ಬರುವುದು ಕಷ್ಟಕರವಾಗಿದೆ. ಆದ್ದರಿಂದ ಹೇಗಾದರು ಮಾಡಿ ಅಲ್ಲಿ ಕೋಮುಗಲಭೆಗಳನ್ನು ನಡೆಸಿ ರಕ್ತವನ್ನು ಹರಿಸಬೇಕಿದೆ, ಆ ಮೂಲಕ ಅಧಿಕಾರದ ಗದ್ದುಗೆಯನ್ನೇರಬೇಕಿದೆ.

ಇದು ಕಲ್ಪಿಸಿಕೊಳ್ಳಲಾಗದಂತಹ ತರ್ಕವೇನಲ್ಲ. 2001 ರಲ್ಲಿ ಗುಜರಾತಿನ ನಗರಪಾಲಿಕೆಗಳಿಗೆ ಚುನಾವಣೆಗಳು ನಡೆದು ಅವುಗಳಲ್ಲಿ ಬಿಜೆಪಿ ಮಣ್ಣುಮುಕ್ಕಿತ್ತು. 2002 ರಲ್ಲಿ ನಡೆಯಲಿದ್ದ ರಾಜ್ಯ ವಿಧಾನಸಭೆ ಚುನಾವಣೆಯಲ್ಲೂ ಬಿಜೆಪಿ ಸೋಲಬಹುದು ಎಂಬ ಆತಂಕವಿತ್ತು. ಅದೇ ಸಂದರ್ಭದಲ್ಲಿ ಗೋಧ್ರಾ ಹತ್ತಿರ ಸಬರಮತಿ ರೈಲಿಗೆ ಬೆಂಕಿ ಬಿತ್ತು. ಆ ದುರಂತದಲ್ಲಿ ಕನಿಷ್ಠ 56 ಜನ ಭಸ್ಮಗೊಂಡರು. ಆನಂತರ ಆ ರಾಜ್ಯದ ಅಲ್ಪಸಂಖ್ಯಾತ ಮುಸಲ್ಮಾನರ ಮೇಲೆ ವ್ಯವಸ್ಥಿತ ದಾಳಿ ನಡೆದು ಸಾವಿರಾರು ಜನ ಸತ್ತರು. ಇದೆಲ್ಲ ಮುಗಿದನಂತರ ಬಿಜೆಪಿಯ ನರೇಂದ್ರ ಮೋದಿ ಚುನಾವಣೆಯಲ್ಲಿ ಗೆದ್ದನು. ಆದರೆ ಇವತ್ತಿಗೂ ಸಬರಮತಿ ರೈಲಿಗೆ ಬೆಂಕಿ ಬಿದ್ದದ್ದು ಹೇಗೆ, ಅದನ್ನು ಹಚ್ಚಿದವರು ಯಾರು ಎಂಬುದು ಮಾತ್ರ ನಿಗೂಢವಾಗೇ ಇದೆ.

ಒರಿಸ್ಸಾದ ಪ್ರಸ್ತುತ ಗಲಭೆಗಳಿಂದ ಒಂದಂತೂ ಸ್ಪಷ್ಟ. ಅದೇನೆಂದರೆ ಬೇರೆ ಧರ್ಮವನ್ನು ನಾಶ ಮಾಡಲು ಯತ್ನಿಸಿದ್ದ ಲಕ್ಷ್ಮಣಾನಂದ ಸರಸ್ವತಿ ಯಾವ ರೀತಿಯಿಂದಲೂ ತನ್ನ ಹಿಂದೂ ಧರ್ಮವನ್ನು ಉದ್ಧಾರ ಮಾಡಲಿಲ್ಲ; ಹಾಗೆಯೇ ಆತನನ್ನು ಕೊಂದವರು ಕೂಡ ತನ್ನ ಧರ್ಮವನ್ನು ರಕ್ಷಿಸಿಕೊಳ್ಳಲಿಲ್ಲ. ■


ನೈಸರ್ಗಿಕ ಕೃಷಿಕರಿಗೆ ಬೆನ್ನು ತೋರಿಸುತ್ತಿರುವ ಯಡ್ಡಿ ಸರ್ಕಾರ...



ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ ಹನ್ನೆರಡೇ ದಿನದಲ್ಲಿ ಪ್ರತಿಭಟನಾ ನಿರತರಾಗಿದ್ದ ರೈತರ ಮೇಲೆ ಗೋಲಿಬಾರ್ ನಡೆಸಿ, ರಕ್ತದ ಕಲೆಯನ್ನು ಅಂಟಿಸಿಕೊಂಡ ಯಡಿಯೂರಪ್ಪ ನೇತೃತ್ವದ ಸರ್ಕಾರ ತನ್ನ ನಡೆನುಡಿಯಲ್ಲಿ ಅಪ್ಪಟ ರೈತ ವಿರೋಧಿ ಧೋರಣೆಯನ್ನೇ ಅನುಸರಿಸುತ್ತಾ ಬಂದಿದೆ.

ಯಡಿಯೂರಪ್ಪ ಮಂಡಿಸಿದ ಬಜೆಟ್ ಕೂಡ ಇದಕ್ಕೆ ಮತ್ತೊಂದು ನಿದರ್ಶನವಾಯಿತು. ಇನ್ನೇನು ನೂರು ದಿನಗಳನ್ನು ಪೂರೈಸಲಿರುವ ಯಡ್ಡಿ ಸರ್ಕಾರ ಆಪರೇಷನ್ ಕಮಲ ಎಂಬ ಪರಮನೀಚ ತಂತ್ರಗಾರಿಕೆ, ಗೋಕರ್ಣ ದೇವಸ್ಥಾನದ ಹಸ್ತಾಂತರದಂತ ಹಳವಂಡಗಳಲ್ಲಿ ತೆವಳಿಕೊಂಡು ಸಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲೇ ನಾಡಿನಾದ್ಯಂತ ಇರುವ ರೈತ ಪರ ಮುಖಂಡರು ಸುಭಾಷ್ ಪಾಳೇಕಾರ್‌ರ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿಯನ್ನು ಸರ್ಕಾರದ ಕೃಷಿ ನೀತಿಯನ್ನಾಗಿ ಜಾರಿ ಮಾಡುವಂತೆ ಮೇಲಿಂದ ಮೇಲೆ ಒತ್ತಡ ಹೇರುವ, ಮನವೊಲಿಸುವ ಪ್ರಯತ್ನಗಳನ್ನು ಮಾಡುತ್ತಲೇ ಇದ್ದಾರೆ.


ಮೂರು ಹಂತಗಳಲ್ಲಿ ನಡೆದಿರುವ ಈ ಪ್ರಯತ್ನ ಫಲಕಾರಿಯಾಗುವುದೇ ಎಂಬ ಜಿಜ್ಞಾಸೆ ಇದ್ದೇ ಇದೆ. ಜುಲೈ 21 ರಿಂದ 24 ರವರೆಗೆ ವಿಧಾನ ಸೌಧದಲ್ಲೇ ಶಾಸಕರಿಗೆ ನೈಸರ್ಗಿಕ ಕೃಷಿ ಕಾರ್ಯಾಗಾರ ನಡೆಯಿತು.



ಮೊದಲ ದಿನ 18 ಶಾಸಕರು ಅದರಲ್ಲಿ ಭಾಗವಹಿಸಿದರೂ, ನಂತರ ದಿನಗಳಲ್ಲಿ ಮೂರು ನಾಲ್ಕು ಶಾಸಕರು ಮಾತ್ರ ಭಾಗವಹಿಸಿದಾಗ ಈ ಕಾಟಾಚಾರದ ತರಬೇತಿಯೇ ಬೇಡ ಎಂದು ರದ್ದು ಮಾಡಲಾಗಿದೆ. ನಂತರ ನಡೆದ ಸಭೆಗಳಲ್ಲಿ ಮುಖ್ಯ ಮಂತ್ರಿ ಯಡಿಯೂರಪ್ಪ, ಕೃಷಿ ಸಚಿವ ರವೀಂದ್ರ ನಾಥ್, ತೋಟಗಾರಿಕ ಸಚಿವರಾಗಿದ್ದ ಈಗ ಆಪರೇಷನ್ ಕಮಲದ ಬಲಿ ಪಶುವಾಗಿರುವ ಬೆಳ್ಳುಬ್ಬಿ, ರೇಷ್ಮೆಸಚಿವ ವೆಂಕಟರಮಣಪ್ಪ, ಕೃಷಿ ವಿಜ್ಞಾನಿ ಜಿ.ಕೆ.ವಿರೇಶ್, ರಾಜ್ಯ ಕೃಷಿ ನಿರ್ದೇಶಕ ರಾಜಣ್ಣ, ಹೆಬ್ಬಾಳ ಕೃಷಿ ವಿ.ವಿಯ ಪ್ರೊ.ರೆಡ್ಡಿ, ಮುಖ್ಯ ಮಂತ್ರಿಗಳ ಕಾರ್ಯದರ್ಶಿ ವಿ.ಪಿ.ಬಳಿಗಾರ್ ಸೇರಿದಂತೆ ರಾಜ್ಯ ಸಾವಯವ ಘಟಕದ ಸಮಸ್ತ ಅಧಿಕಾರಿ ಗಣವೇ ಭಾಗವಹಿಸಿದೆ.

ರೈತರ ಪ್ರತಿನಿಧಿಗಳಾಗಿ ಸುಭಾಷ್ ಪಾಳೇಕಾರ್ ಜೊತೆ ರಾಜ್ಯ ರೈತ ಸಂಘದ ಅಧ್ಯಕ್ಷ ಕೆ.ಎಸ್. ಪುಟ್ಟಣ್ಣಯ್ಯ, ಬಸವರಾಜ ತಂಬಾಕೆ, ಶ್ರೀ ಜಯಮೃತ್ಯುಂಜಯ ಸ್ವಾಮಿಗಳು, ಮಾಜಿ ಶಾಸಕ ಶ್ರೀಶೈಲಪ್ಪ ಗರಗ ಬಿದರೂರು, ಡಿ.ಆರ್.ಪಾಟೀಲ್, ಬನ್ನೂರು ಕೃಷ್ಣಪ್ಪ, ಡಾ.ಜೆ.ಎಸ್. ಮಧುಕುಮಾರ್, ತುಮಕೂರಿನ ಮೃತ್ಯುಂಜಯಪ್ಪ, ನಾಗೇಶ್, ಮಾಯ ಕೊಂಡದ ಡಾ.ಎಂ.ಬಿ. ರಾಮಮೂರ್ತಿ ಮುಂತಾದವರು ಭಾಗವಹಿಸಿದ್ದಾರೆ. ವಿಧಾನಸಭಾ ಅಧ್ಯಕ್ಷ ಜಗದೀಶ್ ಶೆಟ್ಟರ್ ಅವರ ಕಚೇರಿಯಲ್ಲಿ ನಡೆದ ಮೊದಲ ಸಭೆಯಲ್ಲಿ ಪಾಳೇಕಾರ್ ಅವರು ನೈಸರ್ಗಿಕ ಕೃಷಿಯನ್ನು ಕರ್ನಾಟಕದಲ್ಲಿ ಅಳವಡಿಸಿಕೊಳ್ಳಲೇಬೇಕಾದ ಆಗತ್ಯದ ಕುರಿತು ವಿವರಿಸಿದ್ದಾರೆ.

ಸಚಿವ ಬೆಳ್ಳುಬ್ಬಿ ಈ ಪ್ರಸ್ತಾವನೆಗೆ ಸಕಾರಾತ್ಮಕವಾಗಿ ಸ್ಪಂದಿಸಿದರೂ, ಕೃಷಿ ಸಚಿವ ರವೀಂದ್ರನಾಥ್ ಮಾತ್ರ "ಎಲ್ಲಾದರೂ ಉಂಟೇನ್ರಿ. ರಸಗೊಬ್ಬರ ಪೂರೈಕೆ ಮಾಡೋಕಾಗದೇ ಹೀಗೆ ಮಾಡ್ತಿದಾರೆ ಅಂತ ಜನ ಕೂಗಾಡ್ತಾರೆ. ನನಗೆ ಇದರ ಬಗ್ಗೆ ಅಷ್ಟು ಒಲವಿಲ್ಲ, ರೈತರು ಸಗಣಿ ಗಂಜಲ ಮುಟ್ಟುವ ಕಾಲ ಹೋಗಿದೆ. ನೈಸರ್ಗಿಕ ಕೃಷಿ ಯಶಸ್ವಿ ಪದ್ಧತಿ ಎನ್ನುವುದಾದರೆ ಎಲ್ಲಾ ರೈತರು ಯಾಕೆ ಮಾಡ್ತಿಲ್ಲ?" ಎಂದು ಓತಪ್ರೇತವಾಗಿ ಮಾತನಾಡಿ ಕೈತೊಳೆದುಕೊಂಡಿದ್ದಾರೆ.


ಕೆ.ಎಸ್.ಪುಟ್ಟಣ್ಣಯ್ಯ

ಕಳೆದ 13 ರಂದು ಕೆ.ಎಸ್. ಪುಟ್ಟಣ್ಣಯ್ಯನವರ ಪ್ರಯತ್ನದಿಂದಾಗಿ ಕೃಷಿ ಸಚಿವ ರವೀಂದ್ರನಾಥ್ ಮತ್ತು ಕೃಷಿ ಅಧಿಕಾರಿಗಳೊಂದಿಗೆ ಮತ್ತೊಂದು ಸಭೆ ನಡೆದಿದೆ. ಈ ಸಭೆಯಲ್ಲಿ ನೈಸರ್ಗಿಕ ಕೃಷಿಕರು ತಮ್ಮ ಅನುಭವಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ನೈಸರ್ಗಿಕ ಕೃಷಿ ಅಳವಡಿಸಿ ಕೊಳ್ಳುವುದಕ್ಕೂ ಮೊದಲು ಇದ್ದ ತಮ್ಮ ಸ್ಥಿತಿಗತಿಗಳು, ಬೆಳೆಯ ಇಳುವರಿ-ಗುಣಮಟ್ಟ, ಖರ್ಚು-ವೆಚ್ಚ-ಲಾಭಾಂಶ. ನೈಸರ್ಗಿಕ ಕೃಷಿ ಅಳವಡಿಸಿ ಕೊಂಡ ನಂತರ ಆದ ಬದಲಾವಣೆಗಳನ್ನು ಅಂಕಿಅಂಶಗಳ ಸಮೇತ ಮಂಡಿಸಿದ್ದಾರೆ. ತಾವು ಬೆಳೆದಿದ್ದ ನೈಸರ್ಗಿಕ ಕೃಷಿ ಉತ್ಪನ್ನಗಳ ಸಾಕ್ಷಾತ್ ಪ್ರದರ್ಶನ ಮಾಡಿ, ತಮ್ಮ ಯಶಸ್ವಿ ಪ್ರಯೋಗಗಳ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಯಶೋಗಾಥೆಗಳನ್ನೂ, ಛಾಯಾಚಿತ್ರಗಳನ್ನೂ ತೋರಿಸಿ ದ್ದಾರೆ. ಸ್ವತಃ ಕೃಷಿ ಸಚಿವ ರವೀಂದ್ರನಾಥರ ಕ್ಷೇತ್ರದಿಂದಲೇ ಬಂದಿದ್ದ ರೈತ ರೊಬ್ಬರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ ಮಂತ್ರಿ ರವೀಂದ್ರನಾಥ್ ಅವಾಕ್ಕಾಗಿದ್ದಾರೆ.

ರೈತರೆಲ್ಲಾ ತಮ್ಮ ಸ್ವಂತ ಅನುಭವಗಳನ್ನು ಹೇಳಿಕೊಂಡ ನಂತರವೂ ಕೃಷಿ ವಿ.ವಿ.ಯ ಪ್ರೊ.ರೆಡ್ಡಿ ಮತ್ತು ಜಿ.ಕೆ.ವಿರೇಶ್ "ಭೂಮಿಯಲ್ಲಿ ಸಾವಯವ ಅಂಶ ಕಡಿಮೆ ಇದೆ. ಬರೀ ಜೀವಾಮೃತದಿಂದ ಇದನ್ನು ಪೂರೈಸಲು ಸಾಧ್ಯವಿಲ್ಲ, ನಾವು ಕೂಡ ಪ್ರಾಯೋಗಿಕವಾಗಿ ಮಾಡ್ತಾ ಇದೀವಿ. ಅಂತಾ ನಿರೀಕ್ಷಿತ ಫಲಿತಾಂಶ ಬಂದಿಲ್ಲ, ಹಾಗಾಗಿ ನೈಸರ್ಗಿಕ ಕೃಷಿ -ಸಾವಯವ ಕೃಷಿ ಎರಡನ್ನು ಹೇಳೋಣ. ರೈತನಿಗೆ ಯಾವುದನ್ನು ಬೇಕೋ ಅದನ್ನು ಆಯ್ಕೆಮಾಡಿಕೊಳ್ಳಲಿ. ನೈಸರ್ಗಿಕ-ಸಾವಯವ ಬೇರೆ ಬೇರೆ ಅಂತ ವಿಂಗಡಿಸು ವುದು ಬೇಡ" ಎಂಬ ಉಡಾಫೆ ಹೇಳಿಕೆ ನೀಡಿದ್ದಾರೆ. ಇವರಿಬ್ಬರ ಎಡಬಿಡಂಗಿ ಹೇಳಿಕೆಗಳ ಬಗೆ ಸಭೆಯಲ್ಲಿದ್ದ ರೈತರೆಲ್ಲರೂ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಆಗ ಕೆ.ಎಸ್.ಪುಟ್ಟಣ್ಣಯ್ಯ ಮಧ್ಯೆ ಪ್ರವೇಶಿಸಿ "ಇಷ್ಟವಿದ್ದವರು ಸಾವಯವ ಕೃಷಿ ಮಾಡುವುದಾದರೆ ನಮ್ಮ ವಿರೋಧವೇನೂ ಇಲ್ಲ, ರಾಜ್ಯ ಸಾವಯವ ಘಟಕ ಮಾಡಿರುವಂತೆ, ರಾಜ್ಯ ನೈಸರ್ಗಿಕ ಕೃಷಿ ಘಟಕವನ್ನೂ ಮಾಡಿ. ನೂರು ಕೋಟಿ ಪ್ರತ್ಯೇಕ ಅನುದಾನ ಬಿಡುಗಡೆ ಮಾಡಿ. ಈ ಅನುದಾನದಲ್ಲಿ ಕಾರ್ಯಯೋಜನೆಯೊಂದನ್ನು ರೂಪಿಸಿ ಪ್ರತಿ ಹೋಬಳಿ ಹಂತದಲ್ಲಿ ನೈಸರ್ಗಿಕ ಕೃಷಿ ಕಾರ್ಯಾಗಾರಗಳನ್ನು ನಡೆಸಿ. ಸಾವಯವ ಕೃಷಿ ಗ್ರಾಮಗಳಂತೆ ನೈಸರ್ಗಿಕ ಕೃಷಿ ಗ್ರಾಮಗಳನ್ನು ಅಭಿವೃದ್ಧಿಗೂ ಪ್ರಯತ್ನಿಸಿ. ಸಾವಯವ ಎಂದಾಕ್ಷಣ ರೈತನಿಗೆ ವರ್ಮಿ ಕಾಂಪೋಸ್ಟ್, ಕಾಂಪೋಸ್ಟ್ ಜ್ಞಾಪಕ ಬರುತ್ತೆ, ಇದನ್ನೆಲ್ಲಾ ಮಾಡಲಿಕ್ಕೆ ಕೃಷಿ ತ್ಯಾಜ್ಯವಿಲ್ಲ, ಮುಖ್ಯವಾಗಿ ರೈತನಿಗೆ ಇದು ಲಾಭದಾಯಕ ವಾಗಿಲ್ಲ, ಸುಮ್ಮನೆ ರೈತರಲ್ಲಿ ಗೊಂದಲ ಹುಟ್ಟು ಹಾಕಬೇಡಿ. ಒಂದು ಹಸುವಿನಿಂದ ಲಭ್ಯವಾಗುವ ಸಗಣಿ ಗಂಜಲದಿಂದ 20-30 ಎಕರೆ ಜಮೀನನ್ನು ನೈಸರ್ಗಿಕ ಕೃಷಿಗೆ ಒಳಪಡಿಸಬಹುದು. ಸಾಧ್ಯವಾದರೆ ಸರ್ಕಾರದಿಂದ ನಾಟಿ ಹಸು ಸಾಕುವವರಿಗೆ ಸಹಾಯ ಧನ ನೀಡಿ ಉತ್ತೇಜಿಸುವ ಪ್ರಯತ್ನ ಮಾಡಿ. ಕೃಷಿಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳನ್ನೊಳಗೊಂಡ ಅಧಿಕಾರಿ ಗಳೊಂದಿಗೆ ಚರ್ಚಿಸಿ ಸಮಗ್ರ ನೀತಿಯನ್ನು ರೂಪಿಸಿ" ಎಂದು ಹೇಳಿದ್ದಾರೆ.

ಕೃಷಿ ಸಚಿವ ರವೀಂದ್ರನಾಥ್ ಕೂಡ ಎಲ್ಲಾ ಸಲಹೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ತೀರ್ಮಾನ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಇದಾದನಂತರ ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ಯಡಿಯೂರಪ್ಪನವರ ಸಮ್ಮುಖದಲ್ಲಿ ಮತ್ತೊಂದು ಸಭೆ ನಡೆದಿದೆ. ಸುಭಾಷ್ ಪಾಳೇಕಾರ್ ಅವರು ಪ್ರಸ್ತುತ ರಾಜ್ಯದಲ್ಲಿ ರುವ ಕೃಷಿ ಬಿಕ್ಕಟ್ಟನ್ನು ಪ್ರಸ್ತಾಪಿಸಿ, ನೈಸರ್ಗಿಕ ಕೃಷಿಯನ್ನು ಇಂದು ಸರ್ಕಾರಿ ನೀತಿಯನ್ನಾಗಿ ಅಳವಡಿಸಿಕೊಳ್ಳಲೇಬೇಕಾದ ಅಗತ್ಯದ ಕುರಿತು ಹೇಳಿದ್ದಾರೆ. "ಸರ್ಕಾರದ ಬಳಿ ನಾನೇನೂ ಬೇಡಲು ಬಂದಿಲ್ಲ, ನೈಸರ್ಗಿಕ ಕೃಷಿಗೂ ಯಾವ ನೆರವನ್ನೂ ಕೇಳುತ್ತಿಲ್ಲ. ಇದುವರೆಗೆ ಸರ್ಕಾರದ ಯಾವುದೇ ರೀತಿಯ ಭಾಗವಹಿಸುವಿಕೆ ಇಲ್ಲದೇ ರಾಜ್ಯದಾದ್ಯಂತ 136 ಕಾರ್ಯಾಗಾರಗಳನ್ನೂ ಸಂಘಟಿಸಲಾಗಿದೆ. ಸರ್ಕಾರದಿಂದ ಇಂತಹ ಕಾರ್ಯಾಗಾರಗಳನ್ನು ಆಯೋಜಿಸಿದರೆ ನನ್ನ ಟೈಮನ್ನು ಕೊಡಲಿಕ್ಕೆ ತಯಾರಿದ್ದೇನೆ. ಇದು ಸಂಕಷ್ಟದಲ್ಲಿರುವ ರೈತರಿಗೆ ತಲುಪಬೇಕಿದೆ. ರಾಜ್ಯದಲ್ಲಿ ಸಾವಿರಾರು ರೈತರು ನೈಸರ್ಗಿಕ ಕೃಷಿ ಮಾಡುತ್ತಿದ್ದಾರೆ. ನೈಸರ್ಗಿಕ ಕೃಷಿಗೆ ಸಾಮಾನ್ಯವಾಗಿ ಈಗ ರಾಜ್ಯದಲ್ಲಿ ಬಳಸುತ್ತಿರುವ ನೀರು ಮತ್ತು ವಿದ್ಯುತ್ ಪ್ರಮಾಣದಲ್ಲಿ ಶೇ 10% ರಷ್ಟು ಸಾಕು. ಸಮರ್ಪಕವಾಗಿ ಅನುಷ್ಠಾನಗೊಳಿಸಿದರೆ ಪ್ರಸ್ತುತ ಲಭ್ಯವಾಗುತ್ತಿರುವ ನೀರು-ವಿದ್ಯುತ್‌ನಲ್ಲಿ ಇನ್ನೂ ಹತ್ತು ಪಟ್ಟು ಕೃಷಿ ಚಟುವಟಿಕೆ ಗಳನ್ನು ವಿಸ್ತರಿಸಬಹುದು" ಎಂದಿದ್ದಾರೆ.


ದಾವಣಗೆರೆಯ ವಿರಕ್ತ ಮಠದ ಶ್ರೀ ಜಯಮೃತ್ಯುಂಜಯ ಸ್ವಾಮಿಗಳು ಜಿಲ್ಲೆಯ ನೂರಾರು ರೈತರ ಅನುಭವಗಳನ್ನು ತಾವು ಕಣ್ಣಾರೆ ಕಂಡದ್ದನ್ನು ಹೇಳಿದ್ದಾರೆ. ಮುಖ್ಯಮಂತ್ರಿ ಯಡಿಯೂರಪ್ಪ ಯಥಾಪ್ರಕಾರ ಅಧಿಕಾರಿಗಳ ಅಭಿಪ್ರಾಯವನ್ನೇ ಗಿಣಿಪಾಠದಂತೆ ಒಪ್ಪಿಸಿದ್ದಾರೆ. "ನಮ್ಮ ಅಧಿಕಾರಿಗಳು, ಕೃಷಿ ವಿಜ್ಞಾನಿಗಳು ಇದಿನ್ನೂ ಪ್ರಯೋಗದ ಹಂತದಲ್ಲಿದೆ. ನಮ್ಮ ಬೆಳೆಗಳಿಗೆ ಪರಿಣಾಮಕಾರಿಯಾಗಿಲ್ಲ ಅಂತ ವರದಿ ಕೊಡ್ತಿದ್ದಾರೆ. ಇದನ್ನೆಲ್ಲಾ ಪರಾಮರ್ಶೆ ಮಾಡಿ ತೀರ್ಮಾನ ತೆಗೆದುಕೊಳ್ಳೋಣ. ನನಗಂತೂ ಈ ಬಗ್ಗೆ ಒಲವಿದೆ" ಎಂದಿದ್ದಾರೆ.

ಈ ಮಾತುಕತೆಗಳ ವಿವರಗಳನ್ನು ದಾಖಲಿಸಲಿಕ್ಕೆ ಕಾರಣವಿದೆ. ಪಾಳೇಕಾರ್ ಆದಿಯಾಗಿ ಈ ಎಲ್ಲಾ ರೈತ ಮುಖಂಡರ ಅಭಿ ಪ್ರಾಯದ ಪ್ರಕಾರ ಇದೊಂದು ಸರ್ಕಾರಿ ಕೃಷಿ ನೀತಿಯಾದರೆ ವಿಸ್ತೃತವಾಗಿ ಜನರಿಗೆ ತಲುಪಲು ಸಾಧ್ಯವಾಗುತ್ತದೆ. ಸರ್ಕಾರಕ್ಕೆ ಇದರಿಂದ ಯಾವ ನಷ್ಟವೂ ಇಲ್ಲ, ಸರ್ಕಾರದ ಮುಂದೆ ಈ ಪ್ರಸ್ತಾವನೆಯನ್ನು ಮಂದಿಸುತ್ತಿರುವವರಲ್ಲಿ ಯಾವ ರಾಜಕೀಯ ಹಿತಾಸಕ್ತಿಯೂ ಇಲ್ಲ. ರಾಜ್ಯದ ರೈತರ ಪಾಲಿಗೆ ಇದೊಂದು ಬಿಡುಗಡೆಯ ದಾರಿಯಾಗಬಹುದೆಂಬುದೇ ಎಲ್ಲರ ಆಶಯ.

ವಿಪರ್ಯಾಸವೆಂದರೆ ಸರ್ಕಾರ ರೈತರ ಹಿತಾಸಕ್ತಿಯನ್ನು ಕಡೆಗಣಿಸಿ ಸಾವಯವ ಕೃಷಿಯ ಅದರಲ್ಲೂ ಸಾವಯವ ಕೃಷಿ ನಿರ್ವಹಣೆ ಹೆಸರಲ್ಲಿ ಕೋಟ್ಯಂತರ ಹಣ ಲೂಟಿ ಮಾಡುತ್ತಿರುವ ತಥಾಕಥಿತ ಎನ್.ಜಿ.ಓಗಳು ಹಾಗೂ ಸರ್ಕಾರಿ ಹಣವನ್ನು ಪೋಲು ಮಾಡುವ, ತಮಗೊಂದಿಷ್ಟು ಪಾಲು ಪಡೆಯಲು ಅನುಕೂಲವಾಗುವಂತಹ ದುಬಾರಿ ಕೃಷಿ ಪದ್ಧತಿಗಳೆ ನಮಗೆ ಲೇಸೆಂದು ಭಾವಿಸಿರುವ ಕೃಷಿ-ತೋಟಗಾರಿಕಾ ಇಲಾಖೆಯ ಅಧಿಕಾರಿಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ. ಬಹಳ ಮುಖ್ಯವಾಗಿ ಪಾಳೇಕಾರರ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಪದ್ಧತಿಯನ್ನು ಸರ್ಕಾರಿ ನೀತಿಯನ್ನಾಗಿ ಜಾರಿ ಮಾಡುವುದೆಂದರೆ ರಾಜ್ಯದಲ್ಲಿ ಸಾವಿರಾರು ಕೋಟಿ ವಹಿವಾಟು ನಡೆಸುತ್ತಿರುವ ಕೀಟನಾಶಕ, ರಸಗೊಬ್ಬರ ಮಾರಾಟ ಕಂಪೆನಿಗಳ ವಿರೋಧ ಕಟ್ಟಿಕೊಳ್ಳುವುದೆಂದರ್ಥ. ಅದು ಕೇವಲ ವಿರೋಧವಲ್ಲ, ನೇರವಾಗಿ ಬಿಜೆಪಿಯಂಥ ಪಕ್ಷಕ್ಕೆ ಆರ್ಥಿಕ-ರಾಜಕೀಯ ನಷ್ಟ ಕೂಡ. ವಸ್ತುಸ್ಥಿತಿ ಹೀಗಿರುವಾಗ ಕೃಷಿಕರ ನೈಸರ್ಗಿಕ ಒತ್ತಾಸೆಗೆ ಈ ಮಾರ್ವಾಡಿ ಸ್ವಭಾವದ ಸರ್ಕಾರದಿಂದ ಮನ್ನಣೆ ಸಿಗುತ್ತದೆಂದು ನಿರೀಕ್ಷಿಸಲಾದಿತೆ...?

■ ವರದಿಗಾರ

ಪಾಯ್ಸನ್ ಹೆಡೆಯೊಳಗೆ ಕಿಲ್ಲರ್ ಭವಾನಿ


ಭವಾನಿ


ಮದ್ಯಪಾನ ವಿರೋಧಿ ಹೋರಾಟಗಾರ ಎ.ಟಿ. ಬಾಬು ಹತ್ಯೆಯಾಗಿ ಒಂದೂವರೆ ತಿಂಗಳಾ ಗುತ್ತಾ ಬಂದರೂ ಈತನಕ ಹಂತಕರನ್ನು ಹಿಡಿಯ ಲಾಗುತ್ತಿಲ್ಲ, ಏಕೆಂದರೆ ಸುಪಾರಿ ದೊರೆ ಕಡಬ ಗೆರೆಯ ಪಾಯ್ಸನ್ ರಾಮ ಕೊಲೆಗಿನ್ನೂ ಮೂರು ದಿನವಿರುವಂತೆಯೇ ಮಂಡ್ಯ ಜೈಲು ಹೊಕ್ಕಿ ಸೇಫಾಗಿ ಕೂತಿದ್ದಾನೆ.

ಬಾಬು ಹತ್ಯೆಗೆ ಆತನೇ ರೂವಾರಿ ಎಂಬ ಬಗ್ಗೆಯಾಗಲಿ, ಆತನ ಬಲಗೈ ಬಂಟ ಭವಾನಿಯೇ ಕೊಂದ ಬಗ್ಗೆಯಾಗಲಿ ಯಾರಿಗೂ ಅನುಮಾನ ಗಳಿಲ್ಲ.


ಬಾಬು ಹತ್ಯೆಗೆ ಆತನೇ ರೂವಾರಿ ಎಂಬ ಬಗ್ಗೆಯಾಗಲಿ, ಆತನ ಬಲಗೈ ಬಂಟ ಭವಾನಿಯೇ ಕೊಂದ ಬಗ್ಗೆಯಾಗಲಿ ಯಾರಿಗೂ ಅನುಮಾನಗಳಿಲ್ಲ.

ಮತ್ತು ಕೊಲೆಗೆ ಪ್ರಕಾಶ್‌ನಗರದ ವೈನ್‌ಸ್ಟೋರ್ ಮಾಲೀಕ ಕುಮಾರೇಗೌಡ, ಹೊಯ್ಸಳ ಸೇನೆಯ ರಾಬರಿ ನಂಜೇಗೌಡ, ಆತನ ಅಣ್ಣ ವೈನ್ಸ್ ಸೋಮ, ಶಿವಾಸ್ ಬಾರ್ ಧಣಿ ಮಲೆಯಾಳಿ ಪ್ರಸನ್ನ, ಪೀಣ್ಯದ ವಿಘ್ನೇಶ್ವರ ವೈನ್ಸ್ ಮಾಲೀಕ ಲಕ್ಕಣ್ಣ, ಆತನ ಪಾಲುದಾರ ಪ್ರಭಾಕರ; ಮುಂತಾದ ಲಿಕ್ಕರ್ ಕುಳಗಳೆಲ್ಲ ಸೇರಿ ದೊಡ್ಡ ಮೊತ್ತದ 'ಸುಪಾರಿ ಹಣ'ವನ್ನು ಸಂಗ್ರಹಿಸಿ ಪಾಯ್ಸನ್ ರಾಮನಿಗೆ ಕೊಟ್ಟದ್ದೇ ಎ.ಟಿ. ಬಾಬು ಹತ್ಯೆಗೆ ಮೂಲ ಕಾರಣವೆಂಬುದೂ ಗುಟ್ಟೇನಲ್ಲ.

ಎ.ಆರ್. ಇನ್‌ಫ್ಯಾಂಟ್, ಗೋಪಾಲ್ ಹೊಸೂರ್, ರಾಮನಗರದ ಎಸ್ಪಿ ಮಹೇಶ್‌ರಂಥ ಹಿರಿಯ ಪೊಲೀಸ್ ಅಧಿಕಾರಿಗಳೇ ಹತ್ಯೆಯ ತನಿಖೆಯ ನೇತೃತ್ವ ವಹಿಸಿದಾಗಲೂ ಈತನಕ ಹತ್ಯೆಯ ಪ್ರಮುಖ ಆರೋಪಿ ಭವಾನಿಯನ್ನು ಹಿಡಿಯಲಾಗುತ್ತಿಲ್ಲ. ಕಾಮಾಕ್ಷಿಪಾಳ್ಯದ ಮಚ್ಚನ ಹತ್ಯೆಯೂ ಸೇರಿದಂತೆ ಭವಾನಿ ಈಗಾಗಲೇ ಮೂರು ಕೊಲೆ ಕೇಸುಗಳಲ್ಲಿ ಪ್ರಮುಖ ಆರೋಪಿ. ಎ.ಟಿ. ಬಾಬು ಹತ್ಯೆ ಆತನ ಪಾಲಿಗೆ ನಾಲ್ಕನೇ ಸುಪಾರಿ ಹತ್ಯೆ. ಎ.ಟಿ. ಬಾಬು ಹತ್ಯೆಯ ತನಿಖಾಧಿಕಾರಿ ರಾಮನಗರದ ಪೊಲೀಸ್ ಇನ್ಸ್‌ಪೆಕ್ಟರ್ ಧರ್ಮೇಂದ್ರ ಮತ್ತು ಮಾಗಡಿಯ ಇನ್ಸ್‌ಪೆಕ್ಟರ್ ಕೃಷ್ಣಕುಮಾರ್ ಭವಾನಿಯನ್ನು ಬೆನ್ನತ್ತಿ ಹಾಸನ ಮತ್ತು ಮಂಗಳೂರಿನ ತನಕ ಹೋಗಿ ಬಂದರಾದರೂ ಪರಿಣಾಮ ಸೊನ್ನೆಯೇ.


ಕುಮಾರೇಗೌಡ


ಎ.ಟಿ.ಬಾಬು


ಗೋಪಾಲ್ ಹೊಸೂರ್

ಏಕೆಂದರೆ ಭವಾನಿ ಒಂದು ಜಾಗದಲ್ಲಿ ನಿಲ್ಲುತ್ತಿಲ್ಲ, ದಿನಕ್ಕೊಂದು ಜಾಗ ಬದಲಾಯಿಸುತ್ತಾನೆ. ಅದೂ ಎಂಥಾ ಅಟ್ಟಹಾಸವೆಂದರೆ 'ನಿನಗೆ ತಾಕತ್ತಿದ್ರೆ ನನ್ನನ್ನು ಹಿಡಿದು ನೋಡೋ....!' ಎಂದು ಇನ್ಸ್‌ಪೆಕ್ಟರ್ ಧರ್ಮೇಂದ್ರರಿಗೇ ಫೋನ್ ಮಾಡಿ ಹೀಯಾಳಿಸಿದ್ದಾನೆ. ಒಂದು ಮೂಲದ ಪ್ರಕಾರ ಸದ್ಯ ಶ್ರೀರಂಗಪಟ್ಟಣದ ತೋಟವೊಂದರಲ್ಲಿ ಅಡಗಿ ಕೂತಿರುವ ಭವಾನಿ ಮತ್ತು ಪಕ್ಕದ ಮಂಡ್ಯ ಜೈಲಲ್ಲಿರುವ ಪಾಯ್ಸನ್ ರಾಮನ ಮಧ್ಯೆ ಇವತ್ತಿಗೂ ನಿಕಟ ಸಂಪರ್ಕವಿದೆ. ಪಾಯ್ಸನ್ ರಾಮನ ಜೊತೆ ಮಂಡ್ಯ ಜೈಲಲ್ಲಿರುವ ಮುಲಾಮನ ಬಂಟ ಸುಂಕದಕಟ್ಟೆ ರಾಮನೂ (ಲಕ್ಷ್ಮಣ ಅಣ್ಣ) ಕೈಜೋಡಿಸಿದ ಫಲವೇ ಹಂದೆಕುಮಾರನ ಹತ್ಯೆಯೆ?

ಹೀಗೊಂದು ಗುಮಾನಿಯಂತೂ ಪೊಲೀಸರಿಗಿದೆ. ಯಾವುದಕ್ಕೂ ಭವಾನಿ ಸಿಕ್ಕಿಬಿದ್ದರಷ್ಟೇ ಎ.ಟಿ. ಬಾಬು ಹತ್ಯೆಯ ಪೂರ್ತಿ ಚಿತ್ರಣ ಸಿಗುತ್ತದೆ ಎಂದು ಪೊಲೀಸರು ಕಾಲ ನೂಕುತ್ತಿದ್ದಾರೆಯೇ ಹೊರತು ಲಿಕ್ಕರ್ ಕ್ರಿಮಿಗಳಾದ ಕುಮಾರೇ ಗೌಡನನ್ನಾಗಲಿ, ಪೀಣ್ಯದ ಬಾರ್ ಲಕ್ಕಣ್ಣನನ್ನಾಗಲಿ, ಶಿವಾಸ್ ಬಾರ್‌ನ ಮಲೆಯಾಳಿ ಪ್ರಸನ್ನನನ್ನಾಗಲಿ ಈತನಕ ಮುಟ್ಟಿಲ್ಲ, ಕನಿಷ್ಠ ವೈನ್ಸ್ ಸೋಮನ ತಮ್ಮ ರಾಬರಿ ನಂಜೇಗೌಡನನ್ನು ಹೊತ್ತೊಯ್ದು ಬಾಯಿಬಿಡಿಸಿದರೂ ಸತ್ಯ ಹೊರಬರುತ್ತಿತ್ತು, ಹಾಗೊಮ್ಮೆ ಭವಾನಿ ಕೊನೆತನಕ ಪೊಲೀಸರ ಕೈಗೆ ಸಿಗಲೇ ಇಲ್ಲ ಅಂತಾದರೆ ಎ.ಟಿ. ಬಾಬು ಹತ್ಯೆ ಕೇಸು ಹಳ್ಳ ಹಿಡಿಯಿತೆಂದೇ ಅರ್ಥವೆ?


ಏಕೆ ಪೊಲೀಸರು ಲಿಕ್ಕರ್ ದೊರೆಗಳನ್ನು ಮುಟ್ಟುತ್ತಿಲ್ಲ? ಎ.ಟಿ. ಬಾಬು ಹತ್ಯೆ ಮಾಡಿ ತಲೆಮರೆಸಿಕೊಂಡಿದ್ದೇ ಭವಾನಿ ಜೊತೆ ಕಮ್ಮಿಯೆಂದರೂ ಎಂಟು ಮಂದಿಯ ಗ್ಯಾಂಗಿದೆ. ರಿವಾಲ್ವರ್ ಕೂಡ ಇದೆ. ಮಂಡ್ಯ ಜೈಲಲ್ಲಿ ಕೂತೇ ಪಾಯ್ಸನ್ ರಾಮ ಭವಾನಿಯ ಖರ್ಚಿಗೆ ದುಡ್ಡು ಒದಗಿಸುತ್ತಿರುವ ಸಾಧ್ಯತೆಗಳೂ ಇಲ್ಲದಿಲ್ಲ. ಪೊಲೀಸರೇನಾದರೂ ತನ್ನನ್ನು ಸುತ್ತುವರಿದರೆಂದರೆ ಪೊಲೀಸರ ಮೇಲೆ ಗುಂಡು ಹಾರಿಸುತ್ತೇನೆಂದು ಈಗಾಗಲೇ ಭವಾನಿ ಧಮಕಿ ಹಾಕಿದ್ದಾನೆ. ಹಾಗಂತ ಪೊಲೀಸರೇನೂ ಕೈಕಟ್ಟಿ ಕೂರುವುದಿಲ್ಲ, ಅವರೂ ರೆಡಿಯಾಗೇ ಇದ್ದಾರೆ. ಈ ಎಲ್ಲಾ ಬೆಳವಣಿಗೆಗಳನ್ನು ನೋಡುತ್ತಿದ್ದರೆ ಇಷ್ಟರಲ್ಲೇ ಭವಾನಿ ಎಂಬ ಪಾತಕಿಯ ಎನ್‌ಕೌಂಟರ್ ಸಂಭವಿಸಿದರೂ ಅಚ್ಚರಿಯೇನಿಲ್ಲ, ಆದರೆ ಭವಾನಿಯ ಅಂತ್ಯದೊಂದಿಗೆ ಎ.ಟಿ. ಬಾಬು ಹಂತಕರು ಮತ್ತು ಅವರ ಹಿಂದಿನ ಕಾಣದ ಕೈಗಳು ಬಚಾವಾಗ ಬಾರದಷ್ಟೇ. ಈ ಬಗ್ಗೆ ಪೊಲೀಸರು ಎಚ್ಚರ ವಹಿಸಬೇಕು. ಎ.ಟಿ. ಬಾಬು ಹತ್ಯೆಯ ಹಿಂದಿರುವ ಪ್ರತಿಯೊಬ್ಬರಿಗೂ ಶಿಕ್ಷೆಯಾಗಲೇಬೇಕು. ■

ಸುಂಕದಕಟ್ಟೆಯ ಹಳೇ ಪಾತಕಿ ಹಂಡೆಕುಮಾರ ಅಷ್ಟು ಸುಲಭಕ್ಕೆ ಬೀಳುವ ತಲೆಯಲ್ಲ. ಆಗಸ್ಟ್ 22 ರ ರಾತ್ರಿ ಗೊಲ್ಲರಹಟ್ಟಿ ಸಮೀಪದ ನೈಸ್ ರಿಂಗ್ ರಸ್ತೆಯಲ್ಲಿ ಆತನ ಹೆಣ ಕಂಡವರಿಗೆ ಅದೊಂದು ಆಕ್ಸಿಡೆಂಟ್ ಎಂಬುದನ್ನು ಇವತ್ತಿಗೂ ನಂಬಲಾಗುತ್ತಿಲ್ಲ. ಅದು ಕೊಲೆಯಾ? ಮುಲಾಮನ ಗ್ಯಾಂಗ್ ಸದ್ದಿಲ್ಲದೇ ಹೆಣೆದ ಬಲೆಯಾ? ಸುಂಕದಕಟ್ಟೆಯ ಹಂತಕ ಸಹೋದರರಾದ ಲಕ್ಷ್ಮಣ ಮತ್ತು ಹನುಮಂತ ಸೇರಿಕೊಂಡು ಮುಗಿಸಿದ ಡೀಲಾ? ಅದಕ್ಕೆ ಸುಂಕದಕಟ್ಟೆಯ ಪೂಜಾರಿ ಸಾವಿತ್ರಮ್ಮನ ಮಗ ಪೋರ್ಕಿ ಮಂಜುನಾಥನೇ ಸುಪಾರಿ ಕೊಟ್ಟನಾ? ಆತನ ತಮ್ಮ ಪಿಂಟು ಮಹೇಶನ ನೆರವಿನಿಂದಲೇ ಹಂಡೆ ಕುಮಾರನ ಕೊಲೆಯಾಯಿತಾ?


ಇಂಥ ಊಹಾಪೋಹಗಳಿಗೂ ಕಾರಣವಿಲ್ಲದಿಲ್ಲ. ನಿಗೆ ಲಾಂಗ್ ಬೀಸಿ ಎಸ್ಕೇಪಾದವನು ರಾಜಗೋಪಾಲನಗರ ಲಿಮಿಟ್ಸನಲ್ಲಿ ಸುಲತಾಚಾರಿ ಎಂಬ ಲ್ಯಾಂಡ್ ಬ್ರೋಕರ್ ಒಬ್ಬನನ್ನು ಕೊಂದು ಮತ್ತೆ ಜೈಲು ಸೇರಿದ. ವರ್ಷದ ನಂತರ ಜೈಲಿಂದ ಹೊರಬದ್ದವನನ್ನು ಚಂದ್ರಾಲೇಔಟಿನ ಇನ್ಸ್‌ಪೆಕ್ಟರ್ ಓಂಕಾರಯ್ಯ ಹಿಡಿದು ಗೋಪಾಲಯ್ಯನಿಗೆ ಸ್ಕೆಚ್ ಹಾಕಿದ ಆರೋಪದ ಮೇಲೆ ಮತ್ತೆ ಜೈಲಿಗೆ ಸಾಗಿಸಿದ್ದಾರೆ. ಇಲ್ಲಿಗೆ ಒಂಭತ್ತು ತಿಂಗಳ ಹಿಂದೆ ಕೊನೆಯ ಬಾರಿ ಜೈಲಿಂದ ಹೊರಬದ್ದ ಹಂಡೆಕುಮಾರನಿಗೇ ಅಚ್ಚರಿಯಾಗುವಂತೆ ಮಂಜುನಾಥ ಬೆಳೆದುಬಿಟ್ಟಿದ್ದ. ಅದೂ ಯಾವ ಪರಿಯೆಂದರೆ ಒಂದೇ ವರ್ಷಕ್ಕೆ ಲ್ಯಾಂಡ್ ಡೀಲಿನಲ್ಲೇ ಕೋಟಿಗಟ್ಟಲೇ ಸಂಪಾದಿಸಿದ್ದ!

ಇದೇ ಹಂಡೇಕುಮಾರನಿಗೆ ಮುಳುವಾಯಿತೆ? ಏಕೆಂದರೆ ಇಡೀ ಮಚ್ಚನ ಟೀಮಿಗೆ ಜೈಲಿನ ಹೊರಗೆ ನಾಯಕನಂತಿದ್ದವನು

ಹಂಡೆ ಕುಮಾರನ ನಿಗೂಢ ಅಂತ್ಯ




ಕೊಲೆಯಾದ ಹಂಡೆ ಕುಮಾರ



ಹಂಡೆ

ಹಂಡೆಕುಮಾರ ಮಾಗಡಿ ರಸ್ತೆಯ ಸುಂಕದಕಟ್ಟೆ, ಬ್ಯಾಡರಹಳ್ಳಿ, ಗೊಲ್ಲರಹಟ್ಟಿ, ತಾವರೆಕೆರೆಯಿಂದ ಹಿಡಿದು ಕಾಮಾಕ್ಷಿಪಾಳ್ಯದತನಕ ಮೆರೆದ, ಸದ್ಯ ಬದುಕುಳಿದಿದ್ದ ಗೋಪಾಲಯ್ಯನ ಅಂತ್ಯ ಕ್ಕೆಂದೇ ಪಣತೊಟ್ಟಿದ್ದ ಹಳೇಕಾಲದ ರೌಡಿ. ಪಾಯ್ಸನ್ ರಾಮನ ಕಡುವೈರಿ. ಹಾಗೇ ಮುಲಾಮನಿಗೂ ಪಕ್ಕಾ ಎದುರಾಳಿ. ಒಂದಾ ನೊಂದು ಕಾಲಕ್ಕೆ ತನ್ನ ಶಿಷ್ಯನಾಗಿದ್ದ ಮಚ್ಚನನ್ನು ಮುಲಾಮ, ಪಾಯ್ಸನ್ ರಾಮ ಮತ್ತು ಗೂಳಿ ಬಸವನ ಗ್ಯಾಂಗ್ ಮುಗಿಸಿದ ಮೇಲೆ ಅದರ ಪ್ರತೀಕಾರಕ್ಕೆಂದೇ ನಿಂತವನು ಹಂಡೆಕುಮಾರ. ಸ್ವಭಾವತಃ ಹುಂಬ. ಕುಡಿತವಿತ್ತು. ತಲೆಕೆಟ್ಟಿತೆಂದರೆ ಒಬ್ಬೊಬ್ಬನೇ ಲಾಂಗ್ ಕೈಗೆತ್ತಿಕೊಂಡಿದ್ದೇ ಹೊತ್ತಿಲ್ಲದ ಹೊತ್ತಲ್ಲಿ ಎಲ್ಲಿಗಾದರೂ ನುಗ್ಗುತ್ತಿದ್ದ. ಹಾಗೇ 2006 ರ ಜೂನ್ 7 ರಂದು ರಾತ್ರಿ ತನ್ನ ಸಹಚರ ಕಲಗಚ್ಚು ಸೀನನನ್ನೂ ಆತನ ಪ್ರೇಯಸಿಯನ್ನೂ ಸುಮೋ ಒಂದಕ್ಕೆ ಕೂರಿಸಿಕೊಂಡಿದ್ದೇ ಮುತ್ತೂರಾಯ ಸ್ವಾಮಿ ಬಡಾವಣೆಯ ಸಿದ್ದೇಶ್ವರ ಹೋಟೆಲಿಗೆ ಗಾಡಿ ನುಗ್ಗಿಸಿಬಿಟ್ಟ.

ಆವತ್ತು ಸುಂಕದಕಟ್ಟೆಯ ಮಹಿಳಾ ನಾಯಕಿ ಸುಮಿತ್ರಮ್ಮನ ಮಗ ಮಂಜುನಾಥನ ಅದೃಷ್ಟ ಚೆನ್ನಾಗಿತ್ತೇನೊ, ಹಂಡೆಕುಮಾರ ಬೀಸಿದ ಲಾಂಗ್ ಆತನ ಬೆರಳನ್ನಷ್ಟೇ ತುಂಡು ಮಾಡಿತ್ತು. ಬಚಾವಾದ ಮಂಜುನಾಥ ಆತನಕ ಕದ್ದೂಮುಚ್ಚಿ ರಾಮ-ಲಕ್ಷ್ಮಣರ ಜೊತೆ ಸುತ್ತುತ್ತಿದ್ದವನು ಕ್ರಮೇಣ ಬಹಿರಂಗವಾಗೇ ಮುಲಾಮನ ಜೊತೆ ಗುರುತಿಸಿಕೊಂಡ. ಬೇಕಾಬಿಟ್ಟಿ ಲ್ಯಾಂಡ್ ಡೀಲುಗಳಿಗೆ ಕೈಯಿಟ್ಟ.



ಗೋಪಾಲಯ್ಯ

ಒಂದಾನೊಂದು ಕಾಲಕ್ಕೆ ತನಗೆ ಬೀಡಿ ಸಿಗರೇಟು ತಂದುಕೊಡುತ್ತಿದ್ದ ಮಂಜುನಾಥ ತನ್ನ ದುಷ್ಮನ್‌ಗಳ ಜೊತೆ ಕೈಜೋಡಿಸಿದ್ದು ಹಂಡೆ ಕುಮಾರನ ಆಕ್ರೋಶಕ್ಕೆ ಕಾರಣವಾಗಿತ್ತು. ಅದು ಸುಂಕದಕಟ್ಟೆಯ ಜಾಯಮಾನ ಕೂಡ. ಮಚ್ಚನ ಕೊಲೆಯಾಗಿ ಮುಲಾಮನ ಕೈ ಬಲಿಯುತ್ತಿದ್ದಂತೆ ಮಂಜುನಾಥ ತನ್ನ ನಿಷ್ಠೆ ಬದಲಾಯಿಸಿದ್ದ. ಆತ ಪಕ್ಕಾ ವ್ಯವಹಾರಸ್ಥ, ವೈಯಕ್ತಿಕ ನಿಯತ್ತಿಗಿಂತಲೂ ತನ್ನ ಲ್ಯಾಂಡ್ ಡೀಲುಗಳೇ ಆತನಿಗೆ ಮುಖ್ಯ.

ಒಂದೋ ಎರಡೋ ತಿಂಗಳಷ್ಟೇ ಹೊರಗೆ ಓಡಾಡಿಕೊಂಡಿದ್ದು ಸಣ್ಣಪುಟ್ಟ ಗಲಾಟೆಗೆ ಬದ್ದು ಯಡವಟ್ಟು ಮಾಡಿಕೊಳ್ಳುತ್ತಿದ್ದ ಹುಂಬ ಹಂಡೆಕುಮಾರ ತನ್ನ ಜೀವಿತದ ಬಹುಕಾಲವನ್ನೆಲ್ಲ ಜೈಲಲ್ಲೇ ಕಳೆಯುತ್ತಿದ್ದ. ಹೀಗೇ ಮಂಜುನಾಥ

ಹಂಡೆ ಒಬ್ಬನೇ. ಕೋತಿರಾಮ, ಬೈಚಕುಪ್ಪೆ ಜಾನಿ, ಕಲಗಚ್ಚು ಸೀನ, ಪೆದ್ದಗುಂಡ, ಕಳ್ಳಾಜಗ್ಗ ದಿನೇಶ ಇತ್ಯಾದಿಗಳೆಲ್ಲ ಒಂದಲ್ಲಾ ಒಂದು ಕೊಲೆ ಕೇಸಲ್ಲಿ ಜೈಲು ಪಾಲಾದರು. ಕೊನೆಕೊನೆಗೆ ಸುಂಕದಕಟ್ಟೆಯ ಕುರಿಕೃಷ್ಣನಂಥವರೂ ಜೈಲು ಸೇರಿಕೊಂಡ ನಂತರ ಹೊರಗೆ ಉಳಿದದ್ದು ಹಂಡೆ ಒಬ್ಬನೇ.

ಆದರೆ ಹಂಡೆ ಕುಮಾರನಿಗೆ ಹುಂಬತನ ವಿತ್ತಲ್ಲ. ಆಗಸ್ಟ್ 22 ರ ರಾತ್ರಿ ತಿಗಳರಪಾಳ್ಯಕ್ಕೆ ಬೈಕಲ್ಲಿ ಬಂದವನು ಅಲ್ಲಿ ಆಯಿಲ್ ವೆಂಕಟೇಶನ ಜೊತೆ ಕಂಠಮಟ್ಟ ಕುಡಿದಿದ್ದಾನೆ. ರಾತ್ರಿ ಏಳೂವರೆಯ ಹೊತ್ತಿಗೆ ವೆಂಕಟೇಶನ ಜೊತೆ ಗೊಲ್ಲರಹಟ್ಟಿಗೆ ಬಂದವನು ಏಕಾಂಗಿಯಾಗಿ ತನ್ನ ಬೈಕನ್ನು ನೈಸ್ ರಿಂಗ್ ರಸ್ತೆಯತ್ತ ಓಡಿಸಿದ್ದಾನೆ. ಬಹುಶಃ ರಾಜರಾಜೇಶ್ವರಿ ನಗರದಲ್ಲಿದ್ದ ತನ್ನ ಪ್ರೇಯಸಿಯ ಮನೆಗೆ ಹೊರಟಿರಬೇಕು. ತಾನೂ ಜೊತೆ ಬರುತ್ತೇನೆಂದು ವೆಂಕಟೇಶ ಅದೆಷ್ಟೇ ಗೋಗರೆದರೂ ಹಂಡೆ ಕೇಳಲಿಲ್ಲ. "ನನ್ನನ್ನೇನೂ ಗಾಂಡು ಅಂದ್ಕೊಂಡಿದೀಯಾ? ನನ್ನನ್ನ ಮುಟ್ಟೋ ಧೈರ್ಯ ಯಾವ ನನ್ ಮಗನಿಗೈತೆ?" ಎಂದು ಹೂಂಕರಿಸಿದ್ದೇ ಕೆಂಗೇರಿಯತ್ತ ಮರೆಯಾಗಿದ್ದಾನೆ.

ಅಷ್ಟೇ, ಮತ್ತೆ ಹಂಡೆಕುಮಾರ ಕಣ್ಣಿಗೆ ಬಿದ್ದಿದ್ದು ಹೆಣವಾಗಿಯೇ. ನೈಸ್ ರಿಂಗ್ ರಸ್ತೆಯಲ್ಲಿ ಸತ್ತುಬಿದ್ದಿದ್ದ ಹಂಡೆಕುಮಾರನ ಪಕ್ಕದಲ್ಲೇ ಆತನ ಬೈಕು ಬಿದ್ದಿತ್ತು. ಆಕ್ಸಿಡೆಂಟೇ ಆಗಿದ್ದರೆ ಬೈಕಿಗೆ ಪೆಟ್ಟಾಗಬೇಕಿತ್ತು. ಹಣೆ ಮತ್ತು ಭುಜಕ್ಕೆ ರಾಡಿನಲ್ಲಿ ಹೊಡೆದಂತೆ ಗಾಯವಾಗಿದ್ದು ಬಿಟ್ಟರೆ ಕುಮಾರನ ಮೈಮೇಲೆ ಬಿದ್ದ ಪೆಟ್ಟಾಗಲಿ ತರುಚಿದ ಗಾಯಗಳಾಗಲಿ ಇರಲಿಲ್ಲ. ಅಂದರೆ ಕೊಂದ ನಂತರ ಹೆಣವನ್ನು ರಸ್ತೆಗೆಸೆದಿರಬಹುದೆ?

ಹಂಡೆಕುಮಾರನಿಗೆ ಅರಿವಿಲ್ಲದೆಯೇ ಆತನ ಚಲನವಲನಗಳ ಮೇಲೆ ಮುಲಾಮನ ಗ್ಯಾಂಗ್ ಕಣ್ಣಿಟ್ಟಿತ್ತಾ? ಏಕಾಂಗಿಯಾಗಿ ಹೊರಟಿದ್ದೇ ಮುಳುವಾಯಿತಾ? ಸುಮಿತ್ರಮ್ಮನ ಮಗ ಮಂಜುನಾಥ ಮತ್ತು ಆತನ ತಮ್ಮ ಪಿಂಟೂ ಮಹೇಶ ನಾಲ್ಕು ಟಾಟಾ ಸುಮೋಗಳನ್ನು ಹಂಡೆಕುಮಾರನ ಹತ್ಯೆಗೆಂದೇ ಬಿಟ್ಟಿದ್ದು ಎಷ್ಟು ಸತ್ಯ? ಸದ್ಯ ಮಂಡ್ಯ ಜೈಲಲ್ಲಿರುವ ರಾಮ ಮತ್ತು ಕಡಬಗೆರೆಯ ಪಾಯ್ಸನ್ ರಾಮ ಸೇರಿಕೊಂಡೇ ಮುಹೂರ್ತವಿಟ್ಟರಾ? ಅದನ್ನು ಹೊರಗಿರುವ ಲಕ್ಷ್ಮಣ ಮತ್ತು ಹನುಮಂತ ಜಾರಿಗೊಳಿಸಿದರಾ?


ದುರಂತವೆಂದರೆ ಹಂಡೆಕುಮಾರ ಆಕ್ಸಿಡೆಂಟ್ ಆಗಿಯೇ ಸತ್ತಿದ್ದಾನೆಂದು ತಾವರೆಕೆರೆ ಪೊಲೀಸರು ಕೇಸು ಮುಚ್ಚಿದ್ದಾರೆ. ಸ್ವಂತ ಪತ್ನಿಯ ಪಾಲಿಗೆ ಹಂಡೆ ಯಾವತ್ತೋ ಸತ್ತುಹೋಗಿದ್ದ, ಅಣ್ಣ ತಮ್ಮಂದಿರಿಗೆ ಪೊಲೀಸರನ್ನು ಕೇಳುವ ಧೈರ್ಯವಿಲ್ಲ, ಇನ್ನು ಪ್ರೇಯಸಿ ದೂರು ಕೊಡಹೋದರೆ ಪೊಲೀಸರೇ ಗದರುತ್ತಾರೆ. ಉಳಿದಂತೆ ಶಿಷ್ಯರು, ಸಹಚರರೆಲ್ಲ ಸದ್ಯ ಜೈಲೊಳಗಿದ್ದಾರೆ. ಓರ್ವ ರೌಡಿಯ ಸಾವಿಗೆ ಕಣ್ಣೀರಿಡುವವರೂ ಉಳಿದಿಲ್ಲ, ಕೊಂದವರಿಗೆ ಶಿಕ್ಷೆಯ ಭಯವೇ ಇಲ್ಲ!

■ ರಾ. ಸೋಮನಾಥ್

ಆಚಾರವಿಲ್ಲದ ನಾಲಿಗೆಗೆ ನೀತಿ ಹೇಳಬೇಕಲ್ಲಾ!

ನಮ್ಮ ಯಡವಟ್ ಮುಖ್ಯಮಂತ್ರಿಗೆ ಅವರ ಮಾವ ರೈಸ್‌ಮಿಲ್ ಸಹೋಕ ಸಮಸ್ತ ಆಸ್ತಿಯನ್ನು ಬಿಟ್ಟುಕೊಟ್ಟಷ್ಟೇ ಸುಲಭವಾಗಿ ಗೋಕರ್ಣದ ದೇವಸ್ಥಾನ ಮತ್ತು ಅಮೃತಮಹಲ್ ಗೋಸಂಪತ್ತನ್ನು ಕಾವಿ ಖದೀಮನೊಬ್ಬನಿಗೆ ವಹಿಸಿಕೊಟ್ಟರಂತಲ್ಲಾ, ಆ ಕೂಡಲೇ ಕಾವಿ ಖದೀಮನ ಗೂಂಡಾಪಡೆ ಹಾಡುಹಗಲೇ ಗೋಕರ್ಣ ದೇವಸ್ಥಾನದ ಹುಂಡಿ ದೋಚಿಕೊಂಡು ಬಂದು ರಾಮಚಂದ್ರಾಪುರದ ಮಠಕ್ಕೆ ಸುರಿದು, ಅಮೃತ್‌ಮಹಲ್ ದನ ಹುಡುಕುತ್ತ ಹೊರಟವಂತಲ್ಲಾ, ಅಮೃತ್‌ಮಹಲ್ ಕೇಂದ್ರವಿರುವುದು ತರೀಕೆರೆ ಸಮೀಪದ ಅಜ್ಜಂಪುರದಲ್ಲಿ ಎಂಬ ಅಡ್ರೆಸ್ ಹಿಡಿದು ಬಂದ ಪುರೋಹಿತ ಪಿಂಡಗಳು ಗೋಕರ್ಣದಂತಹ ಹುಂಡಿಯನ್ನು ಅಲ್ಲೆಲ್ಲಾ ಹುಡುಕಿದವಂತಲ್ಲಾ, ಆದರೆ ಅಮೃತ್‌ಮಹಲ್ ಕರುಗಳನ್ನು ಮಾರಿದ ಹಣವನ್ನು ಆಗಾಗ್ಗೆ ಸರ್ಕಾರದ ಖಜಾನೆಗೆ ಕಟ್ಟುವ ವಿಷಯ ತಿಳಿದ ಗೂಂಡಾಪಡೆ, ಅಮೃತ್‌ಮಹಲ್ ತಳಿಯ ಹಾಲಿನ ರುಚಿ ನೆನೆಯುತ್ತ ವಾಪಸಾಯ್ತಂತಲ್ಲಾ, ಥೂತ್ತೇರಿ!

******



ಗೋಕರ್ಣ ಮತ್ತು ಅಮೃತ್‌ಮಹಲ್ ಹಸ್ತಾಂತರದಿಂದ ಹಸ್ತ ಹೊಸೆಯುವುದನ್ನು ನಿಲ್ಲಿಸಿದ ರಾಘವೇಶ, "ಗೋಕರ್ಣದ ಲಿಂಗವನ್ನು ಸಾಮಾನ್ಯರು ಮುಟ್ಟಿ ಪೂಜಿಸುವುದಕ್ಕೆ ನಾವು ಯಾವ ಅಡ್ಡಿಯನ್ನು ಮಾಡುವುದಿಲ್ಲ, ಆದರೆ ನಮ್ಮ ಲಿಂಗವನ್ನು ಮುಟ್ಟುವ ಅಧಿಕಾರ ನಮ್ಮವರಿಗೆ ಮಾತ್ರವಿದೆ. ಅದೂ ಸಾಗರ ಸಮೀಪದ ಜನರಿಗೆ ಮಾತ್ರ" ಎಂದು ಇನ್ನೂ ಹೇಳಿಲ್ಲವಂತಲ್ಲಾ. ಪುಣ್ಯಕ್ಷೇತ್ರವಾಗಿ ರೂಪುಗೊಳ್ಳಬೇಕಾದರೆ ಮಠಕ್ಕಾಗಲಿ, ದೇವಸ್ಥಾನಕ್ಕಾಗಲಿ ಒಂದು ಪ್ರಭೆಯಿರುತ್ತದೆ. ಅಂತಹ ಪ್ರಭೆ ಸೃಷ್ಟಿಸಲು ಹೆಣಗಿ, ಯಜ್ಞ ಯಾಗ ಮಾಡಿ, ಡೋಂಗಿ ವೈದ್ಯರನ್ನು ಕರೆಸಿ "ಈ ಪ್ರದೇಶದಲ್ಲಿನ ಮಾನವರಿಗೆ ಬಿ.ಪಿ. ಕಡಿಮೆಯಾಗಿದೆ. ಶುಗರ್ ನಾರ್ಮಲ್ಲಾಗಿದೆ. ವಾತಾವರಣ ತಂಪಾಗಿದೆ" ಎಂದು ಎಷ್ಟೇ ಸುದ್ದಿ ಹಬ್ಬಿಸಿದರೂ, ಜನಸಾಮಾನ್ಯರು ಮಾತ್ರ ರಾಘವನ ಕಡೆ ರವಷ್ಟೂ ತಿರುಗುನೋಡಲಿಲ್ಲವಂತಲ್ಲಾ. ಬದಲಿಗೆ "ಡೋಂಗಿ ವೈದ್ಯರ ಹೇಳಿಕೆ ನಿಜವಿರಬಹುದು ಅಥವಾ ಸುಳ್ಳಿರಬಹುದು. ಆದರೆ ಮಠದ ಆವರಣದಲ್ಲಿ ವಿಚಿತ್ರ ವೇಷಗಳಿಂದ ಓಡಾಡುವ ವಿಪ್ರವಟುಗಳ ತಲೆಯಂತೂ ನಾರ್ಮಲ್ಲಾಗಿಲ್ಲ ಎಂಬುದು ಅವರನ್ನು ನೋಡಿದ ಕೂಡಲೆ ಹೊಳೆಯುತ್ತದೆ" ಎಂದರಂತಲ್ಲಾ, ಥೂತ್ತೇರಿ!!

******

ಥೂತ್ತೇರಿ

■ ಯಾಹೂ

ಬಿಜೆಪಿ ಮಂತ್ರಿ ಶಾಸಕರಿಗೆ ಆಡಳಿತದ ಅನುಭವವಿಲ್ಲದಿದ್ದರೂ ಅದನ್ನು ತುಂಬಿಕೊಳ್ಳಲೋಸ್ಕರ ಅಹಂಕಾರವನ್ನು ಮೈಗೂಡಿಸಿಕೊಂಡಿವೆಯಂತಲ್ಲಾ, ಇದಕ್ಕೆ ಉದಾಹರಣೆ ಎಂದರೆ ಸಾಗರದ ತಿಮ್ಮಪ್ಪನ ಜಾಗಕ್ಕೆ ಬಂದಿರುವ ಬೇಳೂರು ಗೋಪಾಲನೆಂಬ ಅವಿವೇಕಿ. ಈತನಿಗೆ ತಾನು ಹೆಚ್ಚೊ ಅಥವಾ ತಾಲ್ಲೂಕಿನ ತಹಸೀಲ್ದಾರ ಹೆಚ್ಚೋ ಎಂಬ ಜಿಜ್ಞಾಸೆ ಬಹಳ ದಿನ ಕಾಡಿಸಿ ಅದನ್ನು ಪತ್ತೆಹಚ್ಚಲು ತಾನಿರುವಲ್ಲಿಗೆ ತಹಸೀಲ್ದಾರರು ತಮ್ಮ ಸಿಬ್ಬಂದಿ ಜೊತೆಗೆ ಬಂದು ಪರಿಚಯ ಮಾಡಿಕೊಳ್ಳಬೇಕೆಂದು ಹುಕುಂ ಹೊರಡಿಸಿದನಂತಲ್ಲಾ, ಇದನ್ನು ಕೇಳಿ ನಕ್ಕ ತಹಸೀಲ್ದಾರರು "ಆಫೀಸು ಬಿಟ್ಟು ಬರಲಾಗುವುದಿಲ್ಲ, ನೀವೇ ಬನ್ನಿ" ಎಂದರಂತಲ್ಲಾ. "ಓಹ್ ಓ, ತಹಸೀಲ್ದಾರರಿಗಿಂತಲೂ ನಾನು ಕಡಿಮೆಯವನು" ಎಂಬುದನ್ನು ಮನದಟ್ಟು ಮಾಡಿಕೊಂಡ ಶಾಸಕ "ಈ ಕೂಡಲೇ ನಿಮ್ಮನ್ನು ವರ್ಗಾಯಿಸಿ ನಾನೇ ಹೆಚ್ಚೆಂದು ಒಪ್ಪಿಕೊಳ್ಳುವ ತಹಶೀಲ್ದಾರರನ್ನು ತರಿಸುತ್ತೇನೆ" ಎಂದನಂತಲ್ಲಾ, "ಈ ಬೇಳೂರಿಗಿಂತ ನಾನೇನು ಕಡಿಮೆ" ಎಂದು ಚಿಂತಿಸಿರುವ ಸಾರಿಗೆ ಸಚಿವ ಅಶೋಕ್ ಎಲ್ಲೇ ಹೋದರೂ "ಯಾವನ್ರಿ ಅವ್ನು ಡಿ.ಸಿ? ನೀನೇ ಏನೊ ಡಿ.ಸಿ.?" ಎನ್ನುತ್ತಿದ್ದಾನಂತಲ್ಲಾ. ಇದನ್ನೆಲ್ಲಾ ನೋಡಿದ ಜನಸಾಮಾನ್ಯರೆ ಆಚಾರವಿಲ್ಲದ ಈ ನಾಲಿಗೆಗೆ ನೀತಿ ಹೇಳಿಕೊಡಬೇಕೆಂದು ಚಿಂತಿಸುತ್ತಿದ್ದಾರಂತಲ್ಲಾ, ಥೂತ್ತೇರಿ!!!

******

ಬಿಜೆಪಿ ಸರ್ಕಾರದ ಅಹಂಕಾರಿಗಳು ಹೀಗೆ ಅಲ್ಪತನದಲ್ಲಿ ಮೆರೆಯುತ್ತಿರಬೇಕಾದರೆ, ಅತ್ತ ಅಧಿಕಾರವಿಲ್ಲದಾಗ ಅಪರೂಪದ ರಾಜಕಾರಣಿಯಾಗಿ ಕಂಗೊಳಿಸುವ ಮಣ್ಣಿನ ಮಗ ದೇವೇಗೌಡರು, ಹಾಸನದ ಆಲೂಗೆಡ್ಡೆ ಹೊಲದಲ್ಲಿ ಅಡ್ಡಾಡುತ್ತಾ, ರೋಗಗ್ರಸ್ತ ಗಿಡಗಳನ್ನು ಕಿತ್ತು ನೋಡುತ್ತ ಮಣ್ಣಿನ ಗುಣವನ್ನು ಪರೀಕ್ಷೆ ಮಾಡುತ್ತಿದ್ದರಂತಲ್ಲಾ, ಇದನ್ನು ಕಂಡ ಆತ್ಮಹತ್ಯೆ ದಾರಿಯ ರೈತಮಕ್ಕಳು "ನಮ್ಮ ಗೌಡರಿಗೆ ಆಲೂಗೆಡ್ಡೆ ರೈತರೆಂದರೆ ಅಷ್ಟೊಂದು ಪ್ರೀತಿ. ಅದಕ್ಕೆ ನೋಡಿ ಅಲ್ಲಿಂದ ಇಲ್ಲಿವರಿಗೂ ಬಂದು ಆಲೂಕಿತ್ತು ಹುಳ ನೋಡುತ್ತಿದ್ದಾರೆ" ಎಂದುಕೊಂಡಾಡಿದರಂತಲ್ಲಾ, ಇದನ್ನು ತಿಳಿದ ಗಂಡಸಿ ಶಿವರಾಂ "ರೀ ದೇವೇಗೌಡ ಪರೀಕ್ಷೆ ಮಾಡಿದ್ದು ಆಲೂಗೆಡ್ಡೆಯನ್ನಲ್ಲಾ ಕಂಡ್ರಿ. ಹಾಸನ ಜಿಲ್ಲಾ ಮಣ್ಣಿನ ರಾಜಕಾರಣವನ್ನು. ಯಾಕೆ ಅಂದ್ರೆ ಆತ ಪ್ರಧಾನಿಯಾಗಿದ್ದಾಗಲೇ ಸೋಲಿಸಿ ಕಳಿಸಿದ ಜನ ಹಾಸನದವರು. ಅಂತವರ ಅಂತರಾಳ ಹೇಗಿದೆ ಎಂದು ಪರೀಕ್ಷೆ ಮಾಡಿದ ದೇವೇಗೌಡನಿಗಾಗಲೇ ಹಾಸನದ ಮಣ್ಣಿನ ಹದ ಅರ್ಥವಾಗಿದೆ. ಅದಕ್ಕೆ ನೋಡಿ ಮುಂದಿನ ಲೋಕಸಭಾ ಚುನಾವಣೆಗೆ ಮಂಡ್ಯದಿಂದ ನಿಲ್ಲುವ ತಯಾರಿ ನಡೆಸಿರುವುದು" ಎಂದರಂತಲ್ಲಾ, ಥೂತ್ತೇರಿ!!! ■

ಬಿಜಾಪುರ: ಪೊಲೀಸರ ಹೆದ್ದಾರಿ ದರೋಡೆ



ಅರುಣ್ ಚಕ್ರವರ್ತಿ

ಬಿಜಾಪುರ ಜಿಲ್ಲೆಯ ಪೊಲೀಸರು ಯಕಶ್ಚಿತ್ ಹೆದ್ದಾರಿ ದರೋಡೆಗೆ ಇಳಿದಿದ್ದಾರೆ ಎಂದರೆ ನೀವು ನಂಬಲಾರಿರಿ. ಆದರೆ ಅದು ಸತ್ಯ. ಈ ದರೋಡೆಯಲ್ಲಿ ಅವರು ಅಸ್ತ್ರವನ್ನಾಗಿಸಿ ಕೊಂಡಿರುವುದು ಒಂದು ಪತ್ರದ ಜೆರಾಕ್ಸ್ ಪ್ರತಿಯನ್ನು ಮತ್ತು ಬಂಡವಾಳವನ್ನಾಗಿಸಿಕೊಂಡಿರುವುದು ನಾಲ್ಕೈದು ರೂಪಾಯಿ ಬೆಲೆಬಾಳುವ ಪ್ರತಿಫಲಿಸುವ ಕೆಂಪು ಸ್ಟಿಕ್ಕರ್ ಅನ್ನು. ಆದರೆ ಈ ಯೋಜನೆಯಿಂದ ಅವರು ಪ್ರತಿ ತಿಂಗಳಿಗೆ ಕಮಾಯಿಸುತ್ತಿರುವುದು ಮಾತ್ರ ಲಕ್ಷಾಂತರ ರೂಪಾಯಿಗಳನ್ನು!

ಈ ಹೊಸ ದಂಧೆಯ ಕಾರ್ಯಸ್ಥಾನ ಆಲಮಟ್ಟಿ ಡ್ಯಾಂ ಸೈಟ್. ಇದರ ತಂತ್ರಾಂಶ ಇಷ್ಟೇ: ಹೆದ್ದಾರಿಯಲ್ಲಿ ಓಡಾಡುವ ವಾಹನಗಳಿಗೆ ಪ್ರತಿಫಲಿಸುವ ರೇಡಿಯಂ ಸ್ಟಿಕರ್‌ಗಳನ್ನು ಅಂಟಿಸಿ ವಾಹನ ಚಾಲಕ/ಮಾಲಿಕರಿಂದ ಸಾಧ್ಯವಾದಷ್ಟು ದುಡ್ಡು ಕಿತ್ತುಕೊಳ್ಳುವುದು. ಅಕಸ್ಮಾತ್ ಯಾರಾದರು ಪ್ರತಿಭಟಿಸಿದರೆ ಅವರಿಗೆ ಟ್ರಾಫಿಕ್ ನಿಯಮಗಳನ್ನು, ಕಾನೂನುಗಳನ್ನು ತೋರಿಸುವುದು. ಇಂತಹ ಸ್ಟಿಕ್ಕರ್‌ಗಳನ್ನು ಕಡ್ಡಾಯವಾಗಿ ವಾಹನದ ಮೇಲೆ ಅಂಟಿಸಿರಬೇಕೆಂಬ ಜಿಲ್ಲಾ ಎಸ್‌ಪಿ ಅರುಣ್ ಚಕ್ರವರ್ತಿಯವರ ಸಹಿ ಇರುವ ಪತ್ರದ ಜೆರಾಕ್ಸ್ ಪ್ರತಿಯನ್ನು ತೋರಿಸಿ ಧಮಕಿ ಹಾಕುವುದು!

ಈ ಇಡೀ ದಂಧೆಗೆ ಚಾಲನೆ ನೀಡಿದ್ದೇ ದಿನೇಶ್ ಕುಮಾರ್ ಶರ್ಮ ಎಂಬಾತ. ಆದರೆ ಈತ ಯಾರು, ಎಲ್ಲಿಯವನು ಎಂಬುದೆಲ್ಲಾ ಮಾತ್ರ ನಿಗೂಢವಾಗಿದೆ. ದೆಹಲಿ ಮೂಲದ ಈ ದಿನೇಶ್ ಬಿಜಾಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾದ ಅರುಣ್ ಚಕ್ರವರ್ತಿಗೆ ಒಂದು ಪತ್ರ ಬರೆಯುತ್ತಾನೆ. ಆ ಪತ್ರದಲ್ಲಿ ಪ್ರತಿಫಲಿಸುವ ರೇಡಿಯಂ ಸ್ಟಿಕರ್‌ಗಳನ್ನು ಅಂಟಿಸುವುದರಿಂದ ಹೇಗೆ ರಸ್ತೆ ಅಪಘಾತಗಳನ್ನು ತಡೆಗಟ್ಟಬಹುದೆಂದೂ, ರೇಡಿಯಂ ಸ್ಟಿಕರ್‌ಗಳನ್ನು ಅಂಟಿಸುವುದಕ್ಕೆ ಸಂಚಾರಿ ನಿಯಮ/ಕಾನೂನಿನಲ್ಲಿ ಇರುವ ಅವಕಾಶಗಳನ್ನೂ ಉದ್ಧರಿಸಿ, ಉತ್ತರ ಪ್ರದೇಶ, ಹರಿಯಾಣ, ಉತ್ತರಾಂಚಲ, ಪಶ್ಚಿಮ ಬಂಗಾಳ, ಮಹಾರಾಷ್ಟ್ರಗಳ ಕೆಲವು ಜಿಲ್ಲೆಗಳಲ್ಲಿ ಇದನ್ನು ಹೇಗೆ ಯಶಸ್ವಿಯಾಗಿ ನಿರ್ವಹಿಸಲಾಗಿದೆ ಎಂಬುದನ್ನೂ ವಿವರಿಸಿ ಬಿಜಾಪುರ ಜಿಲ್ಲೆಯಲ್ಲಿ ಸ್ಟಿಕರ್ ಅಂಟಿಸುವ ಕೆಲಸವನ್ನು ತನಗೆ ವಹಿಸಬೇಕೆಂದು ಮನವಿ ಮಾಡಿಕೊಳ್ಳುತ್ತಾನೆ.



ಸಬ್‌ಇನ್ಸ್‌ಪೆಕ್ಟರ್ ಹಟ್ಟಿ

ಅಸಲಿಗೆ ಈ ಪತ್ರವನ್ನು ಬರೆದಿದ್ದಾನೆನ್ನಲಾದ ದಿನೇಶ್ ಕುಮಾರ್ ಶರ್ಮ ತನ್ನ ಸಂಪೂರ್ಣ ವಿಳಾಸವನ್ನೂ ಪತ್ರದಲ್ಲಿ ನಮೂದಿಸಿಲ್ಲ, ಕೇವಲ ಪೊಟಾಪಲ್ ಗಂಜ್, ದೆಹಲಿ-33 ಎಂದಷ್ಟೇ ಇದೆ. ಈ ದಿನೇಶ್ ಕುಮಾರ್ ಬರೆದಿರುವ ಪತ್ರವನ್ನೇ ಆಧಾರವಾಗಿಟ್ಟುಕೊಂಡು ಅರುಣ್ ಚಕ್ರವರ್ತಿ ಬಸವನಬಾಗೇವಾಡಿ ಪೊಲೀಸರಿಗೆ ಒಂದು ಮೆಮೋ ಹೊರಡಿಸಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಓಡಾಡುವ ವಾಹನಗಳಿಗೆ ರೇಡಿಯಂ ಸ್ಟಿಕರ್ ಅಂಟಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಆದೇಶಿಸುತ್ತಾರೆ.

ಅಲ್ಲಿಂದಾಚೆಗೆ ರೇಡಿಯಂ ಸ್ಟಿಕರ್ ಹೆಸರಿನಲ್ಲಿ ಸುಲಿಗೆ ಪ್ರಾರಂಭವಾಗುತ್ತದೆ. ಆಲಮಟ್ಟಿ ಸರ್ಕಲ್ ಇನ್ಸ್‌ಪೆಕ್ಟರ್ ಮಡಿವಾಳರ್, ಕೊಲಾರ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಹಟ್ಟಿ ಹಾಗೂ ಹವಾಲ್ದಾರ್ ಹಡಪದ್ ಎಂಬುವವರೇ ಈ ಕಾರ್ಯಾಚರಣೆಯನ್ನು ನಡೆಸುತ್ತಿರುವವರು. ವಾಹನಗಳಿಗೆ ಎರಡು ರೂಪಾಯಿ ಬೆಲೆಬಾಳುವ ಸ್ಟಿಕರ್ ಅಂಟಿಸಿ ಅದಕ್ಕೊಂದು ಸಾವಿರ ರೂಪಾಯಿಗಳನ್ನು ಇವರು ಜನರಿಂದ ಕಕ್ಕಿಸುತ್ತಿದ್ದಾರೆ.

ಆಲಮಟ್ಟಿ ನ್ಯಾಷನಲ್ ಹೈವೇಯಲ್ಲಿ ಉತ್ತರ ಭಾರತದಿಂದ ಹಿಡಿದು ನಮ್ಮ ಅಕ್ಕ ಪಕ್ಕದ ರಾಜ್ಯಗಳ ತನಕ ಪ್ರತಿದಿನ ಸಾವಿರಾರು ವಾಹನಗಳು ಓಡಾಡುತ್ತಿರುತ್ತವೆ. ಈ ಪೊಲೀಸ್ ಗ್ಯಾಂಗ್ ಆಯ್ಕೆ ಮಾಡಿಕೊಳ್ಳುವುದು ಕೂಡ ಇವೇ ವಾಹನಗಳನ್ನು. ಏಕೆಂದರೆ ಬೇರೆ ರಾಜ್ಯದಿಂದ ಬಂದ ವಾಹನಗಳ ಚಾಲಕರಿಗೆ, ಮಾಲಿಕರಿಗೆ ತಾವು ಪರರಾಜ್ಯದಲ್ಲಿದ್ದೇವೆಂಬ ಒಂದು ರೀತಿಯ ಆತಂಕವಿರುತ್ತದೆ, ಹೆಚ್ಚೇನೂ ವಿಚಾರಿಸದೆ ಪೊಲೀಸರು ಕೇಳಿದಷ್ಟು ಕೊಟ್ಟು ಹೋಗುತ್ತಾರೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಇಲ್ಲಿನ ಪೊಲೀಸರ ಗ್ಯಾಂಗ್ ದಿನವೊಂದಕ್ಕೆ ಏನಿಲ್ಲವೆಂದರೂ ಎಪ್ಪತ್ತು-ಎಂಭತ್ತು ಸಾವಿರ ರೂಪಾಯಿಯನ್ನು ಈ ಹೊರರಾಜ್ಯದ ಪ್ರವಾಸಿಗರಿಂದ ಪೀಕುತ್ತದೆ.

ಇದೇ ರಸ್ತೆಯಲ್ಲಿಯೇ ಬಾಗಲಕೋಟೆಯ ವಾಹನಗಳೂ ಓಡಾಡುತ್ತವೆ. ಅದೇ ರೀತಿಯಲ್ಲಿ ಕೆಎಸ್‌ಆರ್‌ಟಿಸಿ ಬಸ್ಸುಗಳೂ ಚಲಿಸುತ್ತವೆ. ಆದರೆ ಅವುಗಳನ್ನು ಮುಟ್ಟುವ ತಾಪತ್ರಯವನ್ನು ಈ ಗ್ಯಾಂಗ್ ತೆಗೆದು ಕೊಳ್ಳುವುದಿಲ್ಲ.

ಹಾಗೊಂದು ವೇಳೆ ಯಾರಾದರೂ ಪ್ರಶ್ನಿಸಿದರೆ ಎಸ್ಪಿ ಅರುಣ್ ಚಕ್ರವರ್ತಿ ಕಳುಹಿಸಿದ ಮೆಮೋದ ಜೆರಾಕ್ಸ್ ಪ್ರತಿಯನ್ನೇ ರಾಜಾಜ್ಞೆ ಎಂಬಂತೆ ತೋರಿಸಿ ಬಿಡುತ್ತಾರೆ. ಅದಕ್ಕೂ ಮೀರಿ ಪ್ರತಿಭಟಿಸಿದರೆ 'ನಿಮ್ಮ ವಾಹನ ಸಮೇತವಾಗಿ ನಿಮ್ಮನ್ನು ಪೊಲೀಸ್ ಸ್ಟೇಷನ್‌ಗೆ ಎಳೆದೊಯ್ಯಲಾಗುತ್ತದೆ' ಎಂದು ಬೆದರಿಸುತ್ತಾರೆ. ಇಷ್ಟೆಲ್ಲಾ ತಾಪತ್ರಯವೇಕೆ ಎಂದು ಅವರು ಕೇಳಿದಷ್ಟು ದುಡ್ಡು ಕೊಟ್ಟು ಹೋಗುವವರ ಸಂಖ್ಯೆಯೇ ಜಾಸ್ತಿ, ಅದೇ ಈ ಗ್ಯಾಂಗ್‌ಗೆ ಬಂಡವಾಳವಾಗಿಬಿಟ್ಟಿದೆ.


ಇನ್ನೊಂದು ವಿಚಾರವೇನೆಂದರೆ, ಅರುಣ್ ಚಕ್ರವರ್ತಿ ಕಳಿಸಿದ ಮೆಮೋದಲ್ಲಿ ಸ್ಟಿಕರ್ ಅಂಟಿಸುವ ಕೆಲಸ ಒಂದು ತಿಂಗಳು ಮಾತ್ರ ಇರುತ್ತದೆ ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ. ಆದರೆ ಈ ಒಂದು ತಿಂಗಳಲ್ಲೇ ಭರಬೂರಿ ಕಮಾಯಿ ಸಿಕ್ಕಿದ್ದರಿಂದ ಈ ದರೋಡೆ ಗ್ಯಾಂಗ್‌ಗೆ ಹಣದ ರುಚಿ ಸಿಕ್ಕಂತಾಗಿಬಿಟ್ಟಿದೆ. ಹಾಗಾಗಿ ಇಂದಿಗೂ ಈ ದಂಧೆಯನ್ನು ಮುಂದುವರೆಸುತ್ತಿದ್ದಾರೆ.


ಜಿಲ್ಲಾಧಿಕಾರಿ ಸಿ.ಎಮ್ ಶಿರೋಳನನ್ನು ಈ ಬಗ್ಗೆ ಕೇಳಿದರೆ ಈ ಕುರಿತು ತನಿಖೆ ಮಾಡಲು ಮುದ್ದೇಬಿಹಾಳ ತಹಶೀಲ್ದಾರ್ ಇಲಿಯಾಸ್‌ಗೆ ಒಂದು ನೋಟೀಸ್ ಕೊಟ್ಟು ಕೈತೊಳೆದು ಕೊಳ್ಳುತ್ತಾನೆ. ಇನ್ನು ಆರ್‌ಟಿಓ ಅನ್ವರ್ ಪಾಶಾನನ್ನು ಪ್ರಶ್ನಿಸಿದರೆ 'ಅದರ ಬಗ್ಗೆ ಯಾಕ್ರಿ ತಲೆಕೆಡಿಸಿಕೊಳ್ತಿರಾ?' ಅಂತ ಹರಿಹಾಯುತ್ತಾನೆ. ತನ್ನ ಕೈಕೆಳಗಿರುವ ಮೂವತ್ತು ಇನ್ಸ್‌ಪೆಕ್ಟರ್‌ಗಳಿಂದ ಎಷ್ಟೆಷ್ಟು ವಸೂಲಿ ಮಾಡಬೇಕು ಎಂಬ ಗುಂಗಿನಲ್ಲೇ ಇರುವ ಈತನಿಗೆ ಇದರ ಬಗ್ಗೆ ಯೋಚಿಸಲು ಸಮಯವಾದರೂ ಎಲ್ಲಿರುತ್ತೆ ಬಿಡಿ.


ನಿಜ, ವಾಹನಗಳ ಹಿಂದೆ ಪ್ರತಿಫಲಿಸುವ ಸ್ಟಿಕ್ಕರ್‌ಗಳಿದ್ದರೆ ಅವು ಅಪಘಾತಗಳನ್ನು ತಪ್ಪಿಸುತ್ತವೆ. ಆದರೆ ಅದನ್ನೇ ಪೊಲೀಸರು ದಂಧೆ ಮಾಡಿಕೊಂಡರೆ ಸುಮ್ಮನಿರಲಾದೀತೆ?

■ ಮೇಘರಾಜ್

ನರ್ಸ್ ರೇಣುಕಾ ಫಿಟ್ಟಿಂಗ್ ಇಟ್ಟಿದ್ದು







ವಿರೂಪಾಕ್ಷಪ್ಪ


ನರ್ಸ್ ರೇಣುಕಾಚಾರಿ ಬಿಜೆಪಿಯೊಳಗೇ ತನಗಾಗದವರಿಗೆ ಫಿಟ್ಟಿಂಗ್ ಇಡಲು ಶುರು ಮಾಡಿದ್ದಾನೆ.

ಪಾಪ, ಮೊನ್ನೆ ಚೆನ್ನಗಿರಿಯ ಬಿಜೆಪಿ ಶಾಸಕ ವಿರೂಪಾಕ್ಷಪ್ಪ ಈ ರೇಣುಕ ಹಬ್ಬಿಸಿದ ತರಲೆ ಸುದ್ದಿಯಿಂದ ವಿಲವಿಲ ಒದ್ದಾಡಿಬಿಟ್ಟಿದ್ದಾರೆ.

ಬೆಳ್ಳುಬ್ಬಿ ರಾಜೀನಾಮೆ ಪ್ರಹಸನ ನಡೆಯುತ್ತಿದ್ದಾಗಲೇ ವಲಸಿಗ ಉಮೇಶ್ ಕತ್ತಿಯನ್ನು ಕರೆಸಿ ಯಾವಾಗ ಸಚಿವನನ್ನಾಗಿ ಯಡ್ಡಿ ಪ್ರತಿಷ್ಠಾಪಿಸಿದರೋ ಚೆಡ್ಡಿ ನರ್ಸ್ ರೇಣುಕನ ಚೆಡ್ಡಿ ಒದ್ದೆಯಾಗಲಾರಂಭಿಸಿತು. ಮಿನಿಸ್ಟರ್ ಆಗಲೂ ಬಹಳ ಕಾಲದಿಂದ ಕಾದಿರುವ ರೇಣುಕನಿಗೆ ಯಡ್ಡಿ ವಿರುದ್ಧ ಅಪರೂಪಕ್ಕೆ ಬಂಡಾಯವೆದ್ದ ಹಿರಿಯ ಶಾಸಕರಾದ ತುಮಕೂರಿನ ಸೊಗಡು ಶಿವಣ್ಣ, ಅಭಯ ಪಾಟೀಲ್ ಸೇರಿದಂತೆ ಎಂಟು ಬಿಜೆಪಿ ಶಾಸಕರ ಬೆಂಬಲ ಸಿಕ್ಕಿದೆ. ಅವರೆಲ್ಲ ಸಭೆ ನಡೆಸಿ 'ವಲಸಿಗರಿಂದ ನಮ್ಮ ಭವಿಷ್ಯ ಹಾಳಾಗ್ತಿದೆ. ನಡೀರಿ ರಾಜೀನಾಮೆ ಬಿಸಾಕೋಣ' ಎಂದು ತೀರ್ಮಾನಿಸಿಕೊಂಡಿದ್ದಾರೆ. ಅದೇ ರೀತಿ ತಪ್ಪು ತಪ್ಪಾದ ಒಂದು ರಾಜೀನಾಮೆ ಪತ್ರ ಬರಕೊಂಡು ಸ್ಪೀಕರ್ ಶೆಟ್ಟರ್ ಹತ್ತಿರ ಹೋಗಿಯೂಬಿಟ್ಟಿದ್ದಾರೆ. ಆದರೆ ಶೆಟ್ಟರ್ ಒಪ್ಪದೆ ವಾಪಸ್ ಕಳಿಸಿ ಸುದ್ದಿಯನ್ನು ಯಡ್ಡಿ ಹಾಗೂ 35 ಹಲ್ಲುಗಳ ವೀರ ಸದಾನಂದ ಗೌಡರಿಗೆ ರವಾನಿಸಿದರಂತೆ. ಆಗ ಯಡ್ಡಿಗೆ ಶರಂಪರ ಸಿಟ್ಟು ಬಂದು "ಯಾರಲ್ಲಿ, ನರ್ಸ್ ರೇಣುಕ ಎಲ್ಲಿದ್ದರೂ ಎಳೆತನ್ನಿ" ಎಂದು ಭಟ್ಟರನ್ನು ಅಟ್ಟಲಾಗಿ ಈ ರೇಣುಕ ತನ್ನ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ರಹಸ್ಯ ಸ್ಥಳದಲ್ಲಿ ಕೆಲಕಾಲವಿದ್ದು ಯಡ್ಡಿಗೇ ಆಟವಾಡಿಸಿದ್ದಾನೆ.

ಕೊನೆಗೂ ಯಡ್ಡಿಯೆದುರು ಬಂದು ನಿಂತ ರೇಣುಕಾ 'ಸಾರ್ ಚೆನ್ನಗಿರಿ ಎಂಎಲ್‌ಎ ವಿರೂಪಾಕ್ಷಪ್ಪನೇ ಈ ಭಿನ್ನಮತೀಯರ ಲೀಡರ್' ಎಂದು ಸುಳ್ಳುಸುಳ್ಳೇ ಚಾಡಿ ಹೇಳಿ ಪಾರಾಗಿದ್ದಾನೆ. ಇದನ್ನು ಕೇಳಿ ಗಾಬರಿಯಾದ ವಿರೂಪಾಕ್ಷಪ್ಪ ಸತ್ತೆನೋ ಕೆಟ್ಟೆನೊ ಎಂದು ಓಡಿಬಂದು ನರ್ಸ್ ರೇಣುಕನ ಅಸಲಿ ಬಣ್ಣ ಏನೆಂದು ವಿವರಿಸಿದರಂತೆ. ಯಡ್ಡಿ ಅಮೆರಿಕಾದಿಂದ ಬಂದ ಮೇಲೆ ನರ್ಸ್ ರೇಣುಕನಿಗೆ ಗಾಯವಾದರೆ ಅವನೇ ಟಿಂಚರ್ ಹಚ್ಚಿಕೊಂಡು ಬ್ಯಾಂಡೇಜ್ ಹಾಕಿಕೊಳ್ಳಬೇಕಾಗಬಹುದು.

ಮುಖ್ಯಮಂತ್ರಿ ಚಂದ್ರುಗೆ ಮುಜುಗರ



ಇಂಗ್ಲೆಂಡಿನ ಚೆಸ್ಟರ್‌ನ ಕನ್ನಡ ಸಂಘದ ಬೆಳ್ಳಿಹಬ್ಬ ಸಮಾರಂಭದಲ್ಲಿ ಮುಖ್ಯಮಂತ್ರಿ ಚಂದ್ರುಗೆ ಮುಜುಗರ ಉಂಟಾದ ಪ್ರಹಸನ ನಡೆದಿದೆ.


ಯಡ್ಡಿ ಉದ್ಘಾಟಿಸಬೇಕಿದ್ದ ಈ ಪ್ರೋಗ್ರಾಂ ಕೊನೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮುಖ್ಯಮಂತ್ರಿ ಚಂದ್ರು ಪಾಲಾಗಿತ್ತು. ಹಾಗಂತ ಚಂದ್ರೂನೇ ಪ್ರೆಸ್‌ಮೀಟ್ ಮಾಡಿ 'ಗುರುವಾರ ಬೆಳಗ್ಗೆ ನಾನು, ನನ್ನ ಹೆಂಡತಿ ಪದ್ಮಾ ಮತ್ತು ಪರ್ಸನಲ್ ಸೆಕ್ರೆಟರಿ ಡಾ. ವಿಶ್ವನಾಥ್ ಇಂಗ್ಲೆಂಡಿಗೆ ಹೋಗ್ತಿದ್ದೀವಿ' ಎಂದು ಖುಷ್‌ಖುಷಿಯಾಗಿ ಹೇಳಿಕೊಂಡಿದ್ದರು.

ಆಮೇಲೆನಾಗಿದೆ ನೋಡಿ.

ಚೆಸ್ಟರ್‌ನಲ್ಲಿ ಪ್ರೋಗ್ರಾಂ ಏನೋ ನಡೆಯಿತು. ಆದರೆ ಇನ್ವಿಟೇಷನ್‌ನಲ್ಲಿ ಚಂದ್ರು ಹೆಸರೇ ಇರಲಿಲ್ಲ. ಕೊನೆಗೆ ವೇದಿಕೆ ಮೇಲೂ ಚಂದ್ರೂಗೆ ಜಾಗ ಸಿಗಲಿಲ್ಲ. ಅಷ್ಟು ದೂರ ಹೋದರೂ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನೆಂಬ ಸ್ಥಾನಮಾನವಿದ್ದಾಗಲೂ ಚಂದ್ರು ಸಭಿಕರ ನಡುವೆ ಕುಳಿತೆದ್ದು ಬಂದಿದ್ದಾರೆ.

ತೆರೆಮರೆಯಲ್ಲಿ ನಡೆದಿದ್ದೇನೆಂದರೆ ಖಾಯಂ ಮುಖ್ಯಮಂತ್ರಿ ಚಂದ್ರೂಗೆ ಹೀಗೆ ಅವಮಾನ ಮಾಡಲು ತತ್ಕಾಲದ ಸಿಎಂರಿಂದ ಆದೇಶವಿತ್ತಂತೆ!

'ಶೋಭಾ'ಯಮಾನ ದಸರಾ



ಶಂಕರಲಿಂಗೇಗೌಡ ಇಷ್ಟು ಘಾಟಿ ಅಂತ ಯಾರಿಗೂ ಗೊತ್ತಿರಲಿಲ್ಲ ಬಿಡಿ.


ಮೈಸೂರು ದಸರಾ ತಯಾರಿ ಬಗ್ಗೆ ಮೊನ್ನೆ ನಡೆದ ಸಭೆಯೊಂದರಲ್ಲಿ ಕೂತಿದ್ದ ಗೌಡರು ಎಲ್ಲಾ ಚರ್ಚೆ ಮುಗಿದ ಮೇಲೆ ಪ್ರೆಸ್‌ನವರ ಜೊತೆ ಮಾತಿಗೆ ಕುಳಿತಿದ್ದರು. ಆ ಮಾತು ಈ ಮಾತೆಲ್ಲಾ ಆಡುತ್ತಾ 'ಈ ಬಾರಿ ದಸರಾ ಹೇಗಿರುತ್ತೆ ಏನು ವಿಶೇಷ' ಅಂತ ಯಾರೋ ಕೇಳಿದಾಗ



ಶಂಕರಲಿಂಗೇಗೌಡರಿಗೆ ಅದೆಲಿತ್ತೋ ಸಿಟ್ಟು, ಅಸಹನೆ. "ಎಲ್ಲಾ 'ಶೋಭಾ'ಯಮಾನವಾಗಿರುತ್ತೆ ನೋಡ್ತಿರಿ" ಎಂದು ಒಂದು ಚುಚ್ಚು ಮಾತಿನ ಬಾಣ ಹಾರಿಸೇಬಿಟ್ಟರು.

ಮೈಸೂರು ದಸರಾದ ಪಟ್ಟದಾನೆ ಬಲರಾಮನಿಗಿಂತಲೂ, ಪಟ್ಟದರಸು ಒಡೆಯರ್‌ಗಿಂತಲೂ ಹೆಚ್ಚು ಮಿಂಚಲು ಹೊರಟಿರುವ ಜಿಲ್ಲಾ ಸಚಿವೆ ಶೋಭಾ ಕರಂದ್ಲಾಜೆ ಸ್ಥಳೀಯ ಶಾಸಕ, ಮೇಯರ್‌ಗಳನ್ನು ಕ್ಯಾರೆ ಅನ್ನದೆ ನಿರ್ಲಕ್ಷಿಸಿರುವುದು ಶಂಕರಲಿಂಗೇಗೌಡರನ್ನು ಈಗ ಕೆರಳಿಸಿಬಿಟ್ಟಿದೆ.

ಗದಗ: ಗಣಿ ಮಾಫಿಯಾಕ್ಕೆ ಕಪ್ಪತಗುಡ್ಡ ಬಲಿ!





■ ಹುರುಳಿಕುಪ್ಪಿ ವಿನಯ್

ಉತ್ತರ ಕರ್ನಾಟಕದ ಔಷಧೀಯ ಸಸ್ಯವನ ಕಪ್ಪತಗುಡ್ಡ ಕಣ್ಮರೆಯಾಗುತ್ತಿದೆ. ಅಂಕಿಸಂಖ್ಯೆಗಳ ಲೆಕ್ಕಾಚಾರಕ್ಕೆ ನಿಲುಕದ ಗಿಡಮೂಲಿಕೆಗಳ ತಾಣವಾಗಿದ್ದ ಈ ಗುಡ್ಡವೀಗ ಕೆಂಧೂಳು ಕಾರುತ್ತಿದೆ. ಗದಗ ಜಿಲ್ಲೆಗೆ ಮಳೆಮೋಡಗಳನ್ನು ಕರಗಿಸಿ ಮಳೆಸುರಿಸುತ್ತಿದ್ದ ಈ ಗುಡ್ಡ ಖುದ್ದು ತಾನೇ ಕರಗುತ್ತಿದೆ.

ಇದೆಲ್ಲಾ ಗಣಿ ಧಣಿ ರೆಡ್ಡಿ ಗ್ಯಾಂಗ್‌ನ ಮೈನಿಂಗ್ ಫಲಶ್ರುತಿ. ಬಳ್ಳಾರಿಯ ಭೂಗರ್ಭ ಲೂಟಿ ಈಗ ಗದಗಕ್ಕೂ ಕಾಲಿಟ್ಟಿದೆ. ಕಪ್ಪತಗುಡ್ಡದ ಒಡಲೊಳಗೆ ಹುದುಗಿದ್ದ ಅಪಾರ ಪ್ರಮಾಣದ ಖನಿಜ ಸಂಪತ್ತನ್ನು ಬಗೆಯುತ್ತಿರುವ ಈ ಗ್ಯಾಂಗ್ ಇಡೀ ಗುಡ್ಡವನ್ನೇ ಸರ್ವನಾಶ ಮಾಡಲು ಹೊರಟಿದೆ. ಇದೇ ಸ್ಥಿತಿ ಹೀಗೇ ಮುಂದುವರೆದರೆ ಇಲ್ಲೊಂದು ಇಂಥ ಗುಡ್ಡ ಇತ್ತು ಎಂಬ ಕುರುಹೇ ಇಲ್ಲದ ದಿನ ಬಂದರೆ ಆಶ್ಚರ್ಯವೇನಿಲ್ಲ.

ಜನಾರ್ದನ ರೆಡ್ಡಿಯ ಬಾಡಿಗಾರ್ಡ್ ಶ್ರೀರಾಮುಲು ಎಂಬ ರೌಡಿ ಕುಮಾರ ಸ್ವಾಮಿ ಆಡಳಿತದಲ್ಲಿ ಯಾವಾಗ ಗದಗ ಜಿಲ್ಲೆಯ ಉಸ್ತುವಾರಿ ಹೊತ್ತುಕೊಂಡನೋ ಆಗಲೇ ಗದಗಕ್ಕೆ ಕಾದಿರುವ ಆಪತ್ತಿನ ಅರಿವಾಗಿತ್ತು. ಈಗ ಯಡ್ಡಿ ಸರ್ಕಾರದಲ್ಲಿ ಗದಗ ಜಿಲ್ಲಾ ಉಸ್ತುವಾರಿ ಮಂತ್ರಿಯಾದ ಮೇಲಂತೂ ಗದಗದ ಪರಿಸ್ಥಿತಿ ಹೇಳತೀರ ದಷ್ಟು ಹದಗೆಟ್ಟು ಹೋಗಿದೆ. ಶ್ರೀರಾಮುಲುನ ಬಳ್ಳಾರಿಯ ಹೊಲಸು ರಾಜಕಾರಣ, ತುಘಲಕ್ ದರ್ಬಾರ್, ತೀರದ ಲೂಟಿ ಎಲ್ಲಾ ಸೇರಿ ಇಡೀ ಗದಗವನ್ನು ಮತ್ತೊಂದು ಮಿನಿ ಬಳ್ಳಾರಿಯನ್ನಾಗಿ ಮಾಡಿಬಿಟ್ಟಿವೆ.

ಕಪ್ಪತಗುಡ್ಡ ಬೃಹದಾಕಾರದ ಒಂದು ಬೆಟ್ಟ. ತನ್ನ ಮೇಲ್ಮೈಯಲ್ಲಿ ಅಮೋಘ ರೀತಿಯ ಔಷಧೀಯ ಸಸ್ಯಗಳನ್ನು ಬೆಳೆಸಿಕೊಂಡಿದ್ದರೆ ಒಡಲೊಳಗೆ ಅಗಾಧ ಪ್ರಮಾಣದ ಖನಿಜಸಂಪತ್ತನ್ನು ಹಿಡಿದಿಟ್ಟುಕೊಂಡಿರುವ ಸಂಪದ್ಭರಿತ ಗುಡ್ಡ. ಈ ಗುಡ್ಡದ ಸಂಪತ್ತು ಬಹಳ ದಿನಗಳಿಂದ ಅನೇಕ ಬಂಡವಾಳಿಗರ ಕಣ್ಣು ಕುಕ್ಕಿಸುತ್ತಿತ್ತು.

ಈ ಗುಡ್ಡಕ್ಕೆ ಮೊದಲ ಕೈಯಿಟ್ಟಿದ್ದು ಎನಾರ್ಕನ್ ಎಂಬ ಬಹುರಾಷ್ಟ್ರೀಯ ವಿಂಡ್ ಪವರ್ ಕಂಪೆನಿ. ಮುಂಡರಗಿ ರಾಜಕಾರಣಿ ಎಸ್.ಎಸ್.ಪಾಟೀಲ ಎನಾರ್ಕನ್ ಕೊಡುವ ಎಂಜಲು ಕಮೀಷನ್ನಿಗೆ ನಾಲಿಗೆ ಚಾಚಿ ಇಡೀ ಗುಡ್ಡವನ್ನು ಆ ವಿದೇಶಿ ಕಂಪೆನಿಗೆ ಅರ್ಪಿಸಿದ್ದ. ಎನಾರ್ಕನ್ ಕಂಪೆನಿ ವಿಂಡ್ ಪವರ್ ಯಂತ್ರಗಳನ್ನು ಗುಡ್ಡದ ನೆತ್ತಿಯಲ್ಲಿ ನೆಡುವುದಕ್ಕಾಗಿ ಯರ್‍ರಾಬಿರ್‍ರಿ ಬುಲ್ಡೋಜರ್ ಹೊಡೆದು ರಸ್ತೆ ತೋಡಿ ಗುಡ್ಡವನ್ನು ಅರ್ಧ ನಾಶ ಮಾಡಿತು. ವಿಂಡ್ ಪವರ್ ಹೆಸರಿನಲ್ಲಿ ಈ ಕಂಪೆನಿಯು ಗುಡ್ಡದ ಒಡಲೊಳಗಿರುವ ಖನಿಜ ಸಂಪತ್ತಿನ ಸರ್ವೇಕ್ಷಣೆಯನ್ನೂ ಕೈಗೊಂಡು ಕಬ್ಬಿಣದ ಅದಿರು ಮತ್ತು ಅದಕ್ಕಿಂತ ಅಮೂಲ್ಯವಾದ ಪ್ಲಾಟಿನಂ ಅದಿರು ಹೇರಳವಾಗಿರುವುದನ್ನು ಬಹಿರಂಗಪಡಿಸಿತು.



ಗದಗ ಜಿಲ್ಲೆಗೆ ಕಪ್ಪತಗುಡ್ಡದ ಪ್ರಾಮುಖ್ಯತೆ ಪ್ರಸ್ತಾತೀತವಾದದ್ದು. ಏಶಿಯಾ ಖಂಡದ ಎರಡನೇ ಹಿಮಾಲಯವೆಂದೇ ಇತಿಹಾಸಜ್ಞರಿಂದ ಹೊಗಳಿಸಿಕೊಂಡಿರುವ ಈ ಗುಡ್ಡ ಗದಗ ಜಿಲ್ಲೆಗೆ ಮಾತ್ರವಲ್ಲ ಇಡೀ ರಾಜ್ಯಕ್ಕೆ ಅಮೂಲ್ಯ ಕೊಡುಗೆ ಕೊಟ್ಟಿದೆ. ಹಿಮಾಲಯ ಪರ್ವತ ಶ್ರೇಣಿಗಳಲ್ಲಿ ಕಾಣಸಿಗುವ ಅಮೂಲ್ಯ ವನಸ್ಪತಿ ಈ ಗುಡ್ಡದಲ್ಲೂ ದೊರೆಯುತ್ತವೆ. ಗಣಿರೆಡ್ಡಿಗಳು, ಶ್ರೀರಾಮುಲು ಈ ಗುಡ್ಡಕ್ಕೆ ಲಗ್ಗೆಯಿಡುವ ಮುನ್ನ ಮೊನ್ನೆಮೊನ್ನೆಯ ತನಕ ಗಿಡಮೂಲಿಕೆ ತಜ್ಞರು ಈ ಗುಡ್ಡದಲ್ಲಿ ಠೇರೆ ಹಾಕಿಕೊಂಡು ವನಸ್ಪತಿ ಸಂಗ್ರಹಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಅಲ್ಲದೇ ಮಳೆ ಮೋಡಗಳನ್ನು ಕರಗಿಸಿ ಮಳೆ ತರುತ್ತಿದ್ದ ಈ ಗುಡ್ಡ ಜಿಲ್ಲೆಯ ರೈತನಿಗೆ ದೈವಸಮಾನವಾಗಿತ್ತು. ಮಳೆಯ ನೀರನ್ನು ತನ್ನ ಒಡಲೊಳಗೆ ಇಂಗಿಸಿಕೊಂಡು ಅಂತರ್ಜಲ ಪ್ರಮಾಣ ವೃದ್ಧಿಸುವುದಕ್ಕೂ ಈ ಗುಡ್ಡದ ಕೊಡುಗೆ ಅಪಾರವಾದದ್ದು. ಹೀಗೆ ಕಪ್ಪತಗುಡ್ಡ ಗದಗ ಜಿಲ್ಲೆಯ ಜನರ ಬದುಕಿನಲ್ಲಿ ಹಾಸುಹೊಕ್ಕಿದೆ.

ಕಪ್ಪತಗುಡ್ಡವನ್ನು ಕಾಪಾಡಬೇಕಾದದ್ದು, ಅದನ್ನು ಮುಂದಿನ ಪೀಳಿಗೆಗೂ ಉಳಿಸಬೇಕಾದದ್ದು ಚುನಾಯಿತ ಸರ್ಕಾರಗಳ ಕರ್ತವ್ಯ. ಒಂದು ಸಂವೇದನಾಶೀಲ ಸರ್ಕಾರವಿದ್ದಿದ್ದರೆ ಹಾಗೆ ಯೋಚಿಸುತ್ತಿತ್ತು. ಆದರೆ ಇವತ್ತು ರಾಜ್ಯದಲ್ಲಿರುವುದು ಬಿಜೆಪಿ ಎಂಬ ಲೂಟಿಕೋರರ ಪಕ್ಷ. ತಾವು ಅಧಿಕಾರದಲ್ಲಿರುವಾಗ ಸಾಧ್ಯವಾದಷ್ಟನ್ನು ಮೇಯ್ದುಕೊಳ್ಳಬೇಕೆಂದಿರುವ ಚಡ್ಡಿಗಳು ಕಪ್ಪತಗುಡ್ಡದಂತಹ ಅಮೂಲ್ಯ ಸಂಪತ್ತಿನ ಲೂಟಿಗಿಳಿದಿದ್ದಾರೆ. ಅದಿರನ್ನು ಬಗೆಯುವುದಕ್ಕೆ ಯಾವ ಪರವಾನಗಿ ಇಲ್ಲದಿದ್ದರೂ ಕಾನೂನು, ನೀತಿ, ನಿಯಮ ಎಲ್ಲವನ್ನೂ ಗಾಳಿಗೆ ತೂರಿ ಲೂಟಿ ನಡೆಸುತ್ತಿದ್ದಾರೆ.

ಈ ಗಣಿಲೂಟಿಯಲ್ಲಿ ಪಕ್ಷಭೇದಗಳಿಲ್ಲ. ಎಲ್ಲರೂ ಬಹು ಅನ್ಯೋನ್ಯವಾಗಿ ಒಗ್ಗಟ್ಟಿನಿಂದ ಲೂಟಿಹೊಡೆಯುತ್ತಿದ್ದಾರೆ. ಉದಾಹರಣೆಗೆ, ಗದಗ ಜಿಲ್ಲಾ ಜೆಡಿಎಸ್ ಅಧ್ಯಕ್ಷನಾಗಿದ್ದ ವಿಶ್ವನಾಥ್ ಕಪ್ಪತನವರ್, ಚೆಡ್ಡಿ ಚತುರ ರವಿ ಶಿದ್ಲಿಂಗ, ವಿಜಯ್‌ಕುಮಾರ್ ಗಡ್ಡಿ, ಸುನೀಲ್ ಅಗರವಾಲ್ ಮುಂತಾದವರೆಲ್ಲರೂ ಬೇರೆ ಬೇರೆ ಪಕ್ಷಗಳ ಬೆಂಬಲಿಗರಾಗಿದ್ದರೂ ಗಣಿಲೂಟಿಯಲ್ಲಿ ಮಾತ್ರ ಒಗ್ಗಟ್ಟಾಗಿ ನಿಂತಿದ್ದಾರೆ.

ಅತ್ಯಮೂಲ್ಯ ಕಪ್ಪತಗುಡ್ಡ ಉಳಿಯಬೇಕೆಂದರೆ, ಜಿಲ್ಲೆಯ ರೈತ ಅಬ್ಬೇಪಾರಿಯಾಗುವುದನ್ನು ತಪ್ಪಿಸಬೇಕೆಂದರೆ, ಎಲ್ಲಕ್ಕಿಂತ ಮುಖ್ಯವಾಗಿ ಗದಗ ಎಂಬ ಶಾಂತಿಪ್ರಿಯ ಜಿಲ್ಲೆ ಮತ್ತೊಂದು ಬಳ್ಳಾರಿಯಾಗಬಾರದೆಂದರೆ ಜನರಿಗಿರುವುದು ಒಂದೇ ದಾರಿ - ಬಳ್ಳಾರಿ ಗಣಿಧಣಿಗಳನ್ನು ಮತ್ತವರ ಬಾಡಿಗಾರ್ಡ್ ಶ್ರೀರಾಮುಲುವನ್ನು ಜಿಲ್ಲೆಯಿಂದ ಒದ್ದೋಡಿಸುವುದು. ಅಂಥ ಒಂದು ಯುದ್ಧಕ್ಕೆ ಗದಗದ ಜನ ಸಿದ್ಧರಾಗಬೇಕಷ್ಟೆ. ■

ಕಪ್ಪತಗಿರಿಯ ಸೆರಗಿನಲ್ಲಿರುವ ಮುಂಡರಗಿ, ಅತ್ತಿಕಟ್ಟಿ, ವಿರುಪಾಕ್ಷಪುರ, ಹಾರೂಗೇರಿ, ಮುಷ್ಕಿಕೊಪ್ಪ, ಬಿಡನಾಳ, ಕೆಲೂರ, ಜಾಲವಾಡಗಿ ಮುಂತಾದ ಹಳ್ಳಿಗಳಲ್ಲೂ ಅದಿರಿನ ಕಳ್ಳಸಾಗಾಣಿಕೆ ನಿರಂತರವಾಗಿದೆ. ಇಂತಹ ಪ್ರದೇಶದಲ್ಲಿ ನಡೆಯುತ್ತಿರುವ ಕಳ್ಳಗಣಿಗಾರಿಕೆಗೆ ಸಮರ್ಥನೆ ಕೊಡುವುದಕ್ಕಾಗಿಯೆ ಪಟ್ಟಾ ಗಣಿಗಾರಿಕೆ ಎಂಬ ಹೊಸ ಹೆಸರನ್ನೂ ಕೊಡಲಾಗಿದೆ. ಅಂದರೆ ರೈತರ ವಶದಲ್ಲಿರುವ ಬೆಳೆ ಬೆಳೆಯುವ ಜಮೀನನ್ನು ಗಣಿಧಣಿಗಳು ಮೂರ್‍ನಾಲ್ಕು ವರ್ಷಗಳಿಗೆ ಲೀಸ್ ಪಡೆದುಕೊಂಡು ಅಲ್ಲಿಯೂ ಭೂಗರ್ಭವನ್ನು ಬಗೆಯುತ್ತಿದ್ದಾರೆ.

ಈಗಾಗಲೇ ಬೆಳೆದ ಬೆಳೆಗೆ ಸರಿಯಾದ ಬೆಲೆಯಿಲ್ಲದೆ, ನೀರಾವರಿ ಸೌಲಭ್ಯವಿಲ್ಲದೆ, ಗಗನಕ್ಕೇರುತ್ತಿರುವ ಕೃಷಿ ಇನ್‌ಪುಟ್‌ಗಳನ್ನು ಕೊಳ್ಳಲಾರದೆ ಬಸವಳಿದಿರುವ ರೈತ ಸಿಕ್ಕಷ್ಟು ಸಿಗಲಿ ಎಂದು ತನ್ನ ಭೂಮಿಯನ್ನು ಈ ಧಗಾಕೋರರಿಗೆ ಧಾರೆಯೆರೆಯುತ್ತಿದ್ದಾನೆ. ಈ ಭೂಮಿಯನ್ನು ಕೊಂಡುಕೊಳ್ಳುತ್ತಿಲ್ಲ ಕೇವಲ ಗುತ್ತಿಗೆಯ ಮೇರೆಗೆ ಒಂದೆರಡು ವರ್ಷ ಮಾತ್ರ ತೆಗೆದುಕೊಂಡಿದ್ದೇವೆ ಎಂದು ಗಣಿಲೂಟಿಕೋರರು ರೈತರನ್ನು ನಂಬಿಸುತ್ತಿದ್ದಾರೆ. ಆದರೆ ಮೂರ್‍ನಾಲ್ಕು ವರ್ಷ ರೈತರ ಫಲವತ್ತಾದ ಭೂಮಿಯನ್ನು ಬಗೆದು ಆಳವಾದ ಗುಂಡಿಗಳನ್ನು ತೋಡಿ ಗಣಿಗಾರಿಕೆ ನಡೆಸಿದ ಮೇಲೆ ಆ ಭೂಮಿಯನ್ನು ರೈತರಿಗೆ ಮರಳಿಸಿದರೂ ಅಲ್ಲಿ ಬೆಳೆ ಬೆಳೆಯಲಾಗುವುದಿಲ್ಲ. ಸಾರಾಂಶದಲ್ಲಿ ತುಂಡು ಭೂಮಿ ಹೊಂದಿದ ರೈತ ಇನ್ನುಮುಂದೆ ಅದನ್ನೂ ಕಳೆದುಕೊಂಡು ಅಬ್ಬೇಪಾರಿಯಾಗಲಿದ್ದಾನೆ.




ಉಕ್ಕಿನ ಇಕ್ಕಳ!



ಕಪ್ಪತಗುಡ್ಡದ ಖನಿಜ ಸಮೃದ್ಧತೆಯನ್ನು ಲೂಟಿ ಹೊಡೆಯುವುದಕ್ಕೆ ಮುಂದಾಗಿರುವ ಶ್ರೀರಾಮುಲು ಇಲ್ಲೊಂದು ಉಕ್ಕು ತಯಾರಿಕಾ ಘಟಕ ಸ್ಥಾಪಿಸುವುದಾಗಿ ಕಂಡಕಂಡಲ್ಲಿ ಬೊಬ್ಬಿಡುತ್ತಿದ್ದಾನೆ. ಆದರರ್ಥ ಇಷ್ಟೇ: ನೋಡುನೋಡುತ್ತಿದ್ದಂತೆ ಕಪ್ಪತಗಿರಿ ಕಣ್ಮರೆಯಾಗಿ ಶ್ರೀರಾಮುಲುವಿನ ತಿಜೋರಿ ಭರ್ತಿಯಾಗುತ್ತದೆ. ಇತ್ತೀಚೆಗಂತೂ ತನ್ನ ಉಕ್ಕು ಘಟಕದ ಯೋಜನೆಯನ್ನು ಜಾರಿಗೊಳಿಸುವುದಕ್ಕಾಗಿ ಆತ ತೋರುತ್ತಿರುವ ಕಾಳಜಿ, ಅವಸರ ಜಾಸ್ತಿಯಾಗಿಬಿಟ್ಟಿದೆ. ಮೊನ್ನೆಯ ಕೆಡಿಪಿ ಸಭೆಯಲ್ಲೂ ಯಾರೊಂದಿಗೂ ಚರ್ಚಿಸದೇ "ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶ ಮೂಲದ ಎರಡು ಕಂಪೆನಿಗಳು ತಲಾ ಒಂದು ಸಾವಿರ ಕೋಟಿ ಹೂಡಿ ಉಕ್ಕಿನ ಕಾರ್ಖಾನೆ ಸ್ಥಾಪಿಸಲು ಮುಂದಾಗಿವೆ. ಅವರಿಗೆ ಧನ್ಯವಾದಗಳು" ಎಂದು ಪ್ರಕಟಿಸಿದ್ದಾನೆ. ಇದರಿಂದ ಸಾವಿರಾರು ಉದ್ಯೋಗಗಳು ಸೃಷ್ಟಿಯಾಗಿ ಗದಗ ಜಿಲ್ಲೆ ಸಮಗ್ರವಾಗಿ ಅಭಿವೃದ್ಧಿಯಾಗುತ್ತದೆ ಎಂದು ಆತ ಹೇಳುತ್ತಿದ್ದಾನಾದರೂ ಅದು ಆತನ ಲೂಟಿಗೆ ಹಾಕಿರುವ ಮುಖವಾಡ ಮಾತ್ರ.

ಗದಗ ಜನರು ಇವನು ಊದಿದ ಪುಂಗಿಗೆಲ್ಲಾ ತಲೆಯಲ್ಲಾಡಿಸುವಷ್ಟು ಹುಂಬರೇನಲ್ಲ. ರಾಮುಲುಗೆ ಜಿಲ್ಲೆಯನ್ನು ಅಭಿವೃದ್ಧಿಪಡಿಸುವುದೇ ಗುರಿಯಾಗಿದ್ದರೆ ಜಿಲ್ಲೆಯ ಜೀವನಾಡಿಯಂತಿರುವ ಆದರೆ ಅವಸಾನದ ಅಂಚಿಗೆ ಬಂದಿರುವ ನೇಕಾರ ಉದ್ಯಮವನ್ನು ಅಭಿವೃದ್ಧಿಪಡಿಸಲಿ ಎಂದು ಅವರೆಲ್ಲ ಸವಾಲು ಹಾಕುತ್ತಿದ್ದಾರೆ. ಆದರೆ ಅದಕ್ಕೆ ಉತ್ತರಿಸುವಷ್ಟು ವ್ಯವಧಾನ ಈ ಲೂಟಿಕೋರನಿಗೆಲ್ಲಿದೆ?



ಬಾಬಾಬುಡನ್ ಸ್ವಾಮಿ ಎಂಬ ಶತ್ರು

ಹಿಂದೂ-ಮುಸ್ಲಿಮರ ಸೌಹಾರ್ದ ಕೇಂದ್ರವಾಗಿ ಉಳಿಯಬೇಕಿದ್ದ ಸೂಫಿ ಪರಂಪರೆಯ ಶ್ರೀ ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾದಲ್ಲಿ ಈ ಹೊತ್ತು ಸೌಹಾರ್ದತೆಯ ಸುಳಿವಿಲ್ಲ. ಅದೀಗ ಸಂಪೂರ್ಣವಾಗಿ ಕೋಮುವಾದಿಗಳ ಆಕ್ರಮಣಕ್ಕೆ ಒಳಗಾಗಿದೆ. ಯಾವ ಧರ್ಮವನ್ನೂ ದ್ವೇಷಿಸದೆ ಬೆಂಕಿಯಾಗದ ಬೆಳಕಿನಂತಿದ್ದ ಸೂಫಿ ಪರಂಪರೆಯ ಮೇಲೆ ಮನುವಾದಿ ಪರಂಪರೆಯ ಬಲಪ್ರಯೋಗ ನಡೆದಿದೆ.

"ಸೂಫಿಗಳೆಂದರೆ ಮುಸ್ಲಿಮರು. ಮುಸ್ಲಿಮರೆಂದರೆ ಮನುಷ್ಯರಲ್ಲ, ರಾಕ್ಷಸರು, ಭಯೋತ್ಪಾದಕರು" ಎಂಬಂತೆ ಚಿತ್ರಿಸುತ್ತಲೇ ಜನಾಂಗೀಯ ದ್ವೇಷ ಹರಡುವಲ್ಲಿ ಕೋಮುವಾದಿಗಳು ಯಶಸ್ವಿಯಾಗಿದ್ದಾರೆಯೇ ಹೊರತು, ಇವರಿಂದ ಇನ್ಯಾವ ಮಹತ್ಕಾರ್ಯವೂ ಆಗಿಲ್ಲ.

ದೇಶಭಕ್ತಿ... ದೇಶಭಕ್ತಿ.. ಎಂದು ಅರಚಾಡುವ ಇವರು ನಿಜವಾದ ದೇಶಭಕ್ತರೇ ಆಗಿದ್ದರೆ ಈ ದೇಶದ ಸಂಪತ್ತು ಕಬಳಿಸುತ್ತಿರುವ ಗಣಿಗಾರಿಕೆಗಳ ವಿರುದ್ಧ, ಎಸ್.ಇ.ಝೆಡ್‌ನಂತಹ ಭೂಮಿ ಆಕ್ರಮಣಗಳ ವಿರುದ್ಧ, ದೇಶದ ಎಲ್ಲಾ ಬಹುರಾಷ್ಟ್ರೀಯ ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ಪ್ರತಿಭಟಿಸುತ್ತಿದ್ದರೇ ಹೊರತು ಫ್ಯಾಸಿಸ್ಟ್ ಶಕ್ತಿಗಳಾಗಿ ದೇಶ ವಿಭಜನೆ ಮಾಡುವಂತ ಕೆಲಸಗಳಲ್ಲಿ ತೊಡಗುತ್ತಿರಲಿಲ್ಲ.

ಬಾಬಾಬುಡನ್‌ಗಿರಿ ಮತ್ತು ಮಲೆನಾಡಿನ ವಿಚಾರವಾಗಿ ಹೇಳಬೇಕಾದ ವಿಷಯವೊಂದಿದೆ. ಮಲೆನಾಡಿನ ಮಣ್ಣಿಗೆ ಕಾಫಿ ಬೆಳೆಯನ್ನು ತಂದು ರೈತರಿಗೆ ಮಾರ್ಗದರ್ಶಕನಾಗಿದ್ದು ಬಾಬಾಬುಡನ್ ಸೂಫಿ ಸಂತ. ಈತ ಅರೇಬಿಯಾದಿಂದ ಕೆಲವು ಕಾಫೀ ಬೀಜಗಳನ್ನು ತಂದು ಚಿಕ್ಕಮಗಳೂರಿನ ಗಿರಿಯಲ್ಲಿ ಬಿತ್ತಿ ಬೆಳೆದು ಕಾಫಿಯ ತವರೂರಾಗಲು ಕಾರಣನಾಗಿದ್ದು ಇತಿಹಾಸದ ಪುಟಗಳಲ್ಲಿದೆ.

ಆದರೆ ಇಂದು ಅದೇ ಕಾಫೀತೋಟಗಳು ಟಾಟಾ, ರಿಲಾಯನ್ಸ್‌ಗಳ ಪಾಲಾಗಿವೆ. ಆತುರಗೊಂಡಂತೆ ತಮ್ಮ ಭೂಮಿಯನ್ನು ಅಂಬಾನಿಗಳ ಕೈಗೊಪ್ಪಿಸುತ್ತಿರುವ ರೈತರು ತಮಗಿದ್ದ ನೆಲೆಯನ್ನು ತಾವೇ ಕಳೆದುಕೊಳ್ಳತೊಡಗಿದ್ದಾರೆ. ಮುಂದೊಂದು ದಿನ ಇದೇ ರೈತಾಪಿ ವರ್ಗ ಅಂಬಾನಿ ತೋಟಗಳ ಕಾವಲುಗಾರಿಕೆ ಮಾಡಬೇಕಾಗಿ ಬರಬಹುದು.

ವಿಚಿತ್ರವೆಂದರೆ ಈ ಹಿಂದೂತ್ವ ಕೋಮುವಾದಿಗಳಿಗೆ ಈ ದೇಶದ ನೆಲವನ್ನು ಹಂತಹಂತವಾಗಿ ತಮ್ಮದಾಗಿಸಿಕೊಳ್ಳುತ್ತಿರುವ ಬಂಡವಾಳಿಗರು ಶತ್ರುಗಳಲ್ಲ. ಬದಲಾಗಿ ಅಂದು ಮಲೆನಾಡಿನ ರೈತರಿಗೆ ಕಾಫಿ ಬೆಳೆಯನ್ನು ಪರಿಚಯಿಸಿ ಈ ಹೊತ್ತು ಗುಹೆಯೊಂದರ ಗೋರಿಯಲ್ಲಿ ನಿಶ್ಚಲವಾಗಿ ಮಲಗಿರುವ ಬಾಬಾಬುಡನ್ ಸ್ವಾಮಿ ಅತಿದೊಡ್ಡ ಶತ್ರುವಾಗಿದ್ದಾನೆ.

- ಸಿರುಗುಂದ ರಫೀಕ್, ಮೂಡಿಗೆರೆ

ಜೀಡಗಾ ಮಠದಲ್ಲೊಬ್ಬ ಧೂಮ್ ಮಚಾಲೆ ಸ್ವಾಮಿ





ಮೊದಮೊದಲು ಕೆಳವರ್ಗಕ್ಕೆ ಸೇರಿದ ಕುರುಬ ಜನಾಂಗದವರೇ ಈ ಮಠದ ಮೂಲ ವಾರಸುದಾರರಾಗಿದ್ದರು. ಆದರೆ ಯಾವಾಗ ಈ ಮಠ ಪ್ರಭುದ್ಧ ಸ್ಥಿತಿಗೆ ಕಾಲಿಡತೊಡಗಿತೋ ಆಗ ಪುರೋಹಿತರ ಪಳಿಯುಳಿಕೆಗಳಾದ ಜಂಗಮರು ಅದನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾದರು. ಕೋಟ್ಯಂತರ ರೂಪಾಯಿಗಳ ಆಸ್ತಿಹೊಂದಿರುವ ಈ ಮಠಕ್ಕೆ ಈಗ 20ರ ಹರೆಯದ ಹುಡುಗನೊಬ್ಬ ಪೀಠಾಧಿಪತಿಯಾಗಿದ್ದಾರೆ. ಒಂದು ಗಲ್ಲದಲ್ಲಿ ಹಾಲು ಇನ್ನೊಂದು ಗಲ್ಲದಲ್ಲಿ ನೀರು ಎಂದು ಹೇಳುತ್ತಾರಲ್ಲ, ಅಂಥ ವಯಸ್ಸಿನ ಅಪಕ್ವ ಬುದ್ಧಿಯ ಈ ಮಠಾಧಿಪತಿ ಒಮ್ಮೆ ಕೃಷ್ಣನ ವೇಶ ಧರಿಸಿ, ಇನ್ನೊಮ್ಮೆ ಬಸವಣ್ಣನವರಂತೆ ಡ್ರೆಸ್ ತೊಟ್ಟು ಫ್ಯಾನ್ಸಿ ಡ್ರೆಸ್ ಶೋ ನಡೆಸುತ್ತಾ, ತನ್ನ ಹುಟ್ಟುಹಬ್ಬವನ್ನು ಹಿಂದಿ ಹಾಡುಗಳ ಅರ್ಭಟದ ನಡುವೆ ಆಚರಿಸಿಕೊಳ್ಳುತ್ತಿದ್ದಾರೆ. ಇದರ ಸುತ್ತ ಒಂದು ರೋಚಕ ವರದಿ ಇಲ್ಲಿದೆ....

.....ಧೂಮ್ ಮಚಾಲೆ... ಧೂಮ್ ಮಚಾಲೆ.... ಓ ಹೀಗೊಂದು ಹಾಡು ಬೀದಿಯಲ್ಲಿ ಕೇಳಿಬಂದರೆ ನೀವೇನೆಂದುಕೊಳ್ಳುತ್ತೀರಿ?

ಯಾರೋ ಪಡ್ಡೆ ಹುಡುಗರು ಏನೋ ಮೆರವಣಿಗೆ ತೆಗೀತಿರಬಹುದೆಂದು.. ಅಲ್ಲವೆ!

ಆದರೆ ಒಬ್ಬ ಮಠಾಧೀಶನೇ ಅಂತಾ ಗುಂಪಿನೊಳಗೆ ಸೇರಿಕೊಂಡು ವಾಲಾಡಿಕೊಂಡು ಹೋಗುತ್ತಾನೆಂದರೆ!

ಅವನು ಜೀಡಗ್ಯಾ ಮುತ್ಯಾ

ಗುಲ್ಬರ್ಗಾದ ಆಳಂದ ತಾಲ್ಲೂಕಿನ ಲೋಕಪ್ರಸಿದ್ಧ ಜೀಡಗಾ ಮಠಕ್ಕೆ ಯಾವಾಗ ಹುಡುಗು ಮಠಾಧೀಶನಾಗಿ ನವನವೀನ ಮುರುಘಾರಾಜೇಂದ್ರ ಶಿವಯೋಗಿ ಬಂದು ಕುಳಿತನೋ ಆ ಘಳಿಗೆಯಲ್ಲೇ ಶಿವಭಕ್ತಿ, ಧ್ಯಾನ, ಯೋಗಗಳೆಲ್ಲಾ ನಿನ್ನೆಯ ಕತೆ ಯೆಂಬಂತೆ ನಾಪತ್ತೆಯಾಗಿದೆ.



ಇವತ್ತು 'ಧೂಮ್ ಮಚಾಲೆ' ಚಾಲೂ ಆಗಿದೆ.

ಬಹುಶಃ ನಾಳಿನ ದಿನಗಳಲ್ಲಿ 'ಕಿಂಚಾಲೋ ಮಂಚಾಲೋ ಎಂಗವ್ರಲಾ ನಿನ್ ಡವ್‌ಗಳು' ಕೇಳಿ ಬಂದರೂ ಅಚ್ಚರಿಯಿಲ್ಲ.

ಬಸವಣ್ಣನವರ ನೆಲೆವೀಡಾದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಯಾವುದೂ ಮುಚ್ಚುಮರೆ ಎಂಬುದಿಲ್ಲ. ಅಲ್ಲಿ ಎಲ್ಲವೂ ಪಾರದರ್ಶಕವೆ. ಬದುಕಿನ ಯಾವೊಂದೂ ಘಟನೆಯೂ ಇಲ್ಲಿ ಪವಾಡ ಅಲ್ಲವೇ ಅಲ್ಲ. ಇಡೀ ಬದುಕೆ ಒಂದು ಪವಾಡ. ಅದೇ ರೀತಿ ಜೀಡಗಾ ಮಠವೂ ಜನಮಾನಸದಲ್ಲಿ ನೆಲೆಸಿತ್ತು.

ಹೊಸ ಮನ್ವಂತರವನ್ನು ಸೃಷ್ಟಿಸಿಹೋದ ಈ ನೆಲದಲ್ಲಿ ಇಂದು ಶರಣರ ಹೆಸರು ಹೇಳಿಕೊಂಡು ತಿರುಪೆ ತಿರುಗುವ ಸ್ವಾಮಿ, ಮಹಾಸ್ವಾಮಿ, ಜಗದ್ಗುರು ಮುಂತಾದ ಬಿರುದುಗಳನ್ನು ಹೊಂದಿದ 'ತಿರುಬೋಕಿ'ಗಳೆ ನಿಮಗೆ ಹೆಜ್ಜೆ ಹೆಜ್ಜೆಗೂ ಕಾಣಸಿಗುತ್ತಾರೆ. ತಮ್ಮ ಸುತ್ತಮುತ್ತ ಮೈಗಳ್ಳರ ಗುಂಪನ್ನು ಕಟ್ಟಿಕೊಂಡು ತಾವು ಮಾಡದ ಕಾರ್ಯವನ್ನು ಮಾಡಿದಂತೆ ಬೋಂಗು ಬಿಡಿಸಿ, ಜನತೆಯನ್ನು ಹಾಡು ಹಗಲೇ 'ದಿಶಾಬೂಲ್' ಮಾಡುತ್ತಿದ್ದಾರೆ.

ಅಂತಹ ಮಠಗಳಲ್ಲಿ ಆಳಂದ ತಾಲೂಕಿನಿಂದ ಸುಮಾರು ಹದಿನೆಂಟು ಕಿಲೋಮೀಟರ್ ದೂರ ಇರುವ ಜೀಡಗಾ ಮಠವೂ ಒಂದು. ಈ ಹಿಂದೆ ಈ ಮಠದಲ್ಲಿದ್ದ ಸಿದ್ಧರಾಮಸ್ವಾಮಿ ಎಂಬ ಪಾಕಡಾ ಆಸಾಮಿಯ ಡೋಂಗಿ ನಡವಳಿಕೆಗೆ, ವಿಚಿತ್ರವಾದ ಮ್ಯಾನರಿಸಂಗೆ ಜನ ಮರುಳಾಗಿ ತಮ್ಮ ಹೊಟ್ಟೆಯನ್ನು ಅಡವಿಟ್ಟು ದುಡ್ಡು ತಂದು ಇವರ ಪಾದದ ಕೆಳಗೆ ಸುರಿದಿದ್ದರು. ಆ ಹಣದಿಂದ 35 ರಿಂದ 40 ಎಕರೆ ಜಮೀನಿನಲ್ಲಿ ಕಟ್ಟಲಾಗಿರುವ ಒಂದೊಂದು ಕಟ್ಟಡವೂ ಭಕ್ತರ ರಕ್ತವ ಹೀರಿ ಕಟ್ಟಿಸಿದ ಬಂಗಲೆಗಳೇ ಆಗಿವೆ. ಇಲ್ಲಿರುವ ಪ್ರತಿ ಯೊಂದು ಕಟ್ಟಡಕ್ಕೆ ಲಕ್ಷಗಟ್ಟಲೆ ಹಣ ವೆಚ್ಚವಾಗಿದ್ದರೆ ತೀರಾ ಇತ್ತೀಚೆಗೆ 8 ಎಕರೆ ಹೊಲದಲ್ಲಿ ಕಟ್ಟಲಾದ ಕಟ್ಟಡಗಳಿಗೆ ನಾಲ್ಕು ಕೋಟಿಗಳಷ್ಟು ಖರ್ಚಾಗಿದೆ ಎಂದರೆ ಯಾರಿಗಾದರೂ ಅಚ್ಚರಿಯಾಗದೆ ಇರದು.

ಅದರಲ್ಲೂ 'ಯೋಗಾಶ್ರಮ' ಎಂಬ ಭವ್ಯವಾದ ಭವನ ಗಾಜಿನಿಂದ ಫಳಫಳ ಹೊಳೆಯುತ್ತದೆ. ಅದರೊಳಗಿನ ಗಾಜಿನ ಕಪಾಟುಗಳಲ್ಲಿ ಸಿದ್ಧರಾಮಸ್ವಾಮಿಗಳು ಧರಿಸುತ್ತಿದ್ದ ಬಟ್ಟೆ, ಚಷ್ಮಾ, ಟೂಥ್‌ಬ್ರಶ್ ಹಾಗೂ ಚಪ್ಪಲಿಗಳನ್ನು ಐತಿಹಾಸಿಕ ವಸ್ತುಗಳೆಂಬಂತೆ ಜೋಡಿಸಿ ಜೋಪಾನವಾಗಿಡಲಾಗಿದೆ. ಅದೇ ಕಟ್ಟಡದಲ್ಲಿ ಒಂದು ಬೆಳ್ಳಿಯ ಸಿಂಹಾಸನವೂ ಇದೆ. ಸಂಪೂರ್ಣ ಹವಾನಿಯಂತ್ರಿತವಾಗಿರುವ ಈ ಕಟ್ಟಡ ಅರ್ಧ ಕೋಟಿಗೂ ಹೆಚ್ಚಿನ ಕಿಮ್ಮತ್ತಿನದಾಗಿದೆ. ಇದರೊಳಗೆ ಹೋಗಿ ಬರುವುದೆ ಒಂದು ದೊಡ್ಡ ಭಾಗ್ಯ ಎಂಬಂತೆ ಬಿಂಬಿಸುವ ಮಠದ ಪುಡಿ ಗಣಂಗಳು ನಿಮ್ಮ ಹಿಂದೆ ತಿರುಗಾಡುತ್ತ ಶಂಖ ಊದುತ್ತಲೇ ಇರುತ್ತಾರೆ.

ಕರ್ನಾಟಕ ಮಾತ್ರವಲ್ಲದೆ ಆಂಧ್ರಾ, ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲೂ ಇಂತಹದ್ದೇ ಸುಮಾರು 360 ಶಾಖಾ ಮಠಗಳನ್ನು ಹೊಂದಿರುವ ಜೀಡಗಾ ಮಠ ಎಲ್ಲಾ ಕಡೆ ಆರ್ಥಿಕ ಸಂಪತ್ತಿನಿಂದ ತುಂಬಿ ತುಳುಕುತ್ತಿದೆ. ಆದರೆ ವೈಚಾರಿಕತೆ ಎಂಬುದು ಮಾತ್ರ ಈ ಮಠದಲ್ಲಿ ಇಲ್ಲವೇ ಇಲ್ಲ ಎಂದು ಹೇಳಬಹುದು.

ಸ್ವಾಮಿಗಳ ಉಗುಳಿಗೂ ಅರ್ಥ

ಇಲ್ಲಿನ ಸ್ವಾಮಿಗಳು ಮಾತಾಡಿದ್ದೇ ಒಂದೊಂದು ಪವಾಡ ಎಂಬಂತೆ ಮಠದ ಪುಡಿ ಚೇಲಾಗಳು ಚಿತ್ರಿಸುತ್ತಿರುತ್ತಾರೆ. ಎಲೆ ಅಡಿಕೆ ತಿಂದು ಉಗುಳಿದರೆ, ಬಯ್ದರೆ, ಒದ್ದರೆ, ಸೀನು ಹಾಕಿದರೆ, ಕೆಮ್ಮಿದರೆ, ಮಾತಾಡಿಸದೆ ಮೌನವಾಗಿದ್ದರೆ, ಮಾತನಾಡಿದರೆ ಒಂದೊಂದು ರೀತಿಯ ಅರ್ಥ ಹಚ್ಚಿ ಹೇಳುತ್ತಾರೆ. ನೀರಿನಲ್ಲಿ ದೀಪ ಉರಿಸಿದ್ದು, ಡ್ರೈವರ್ ಮಲಗಿದಾಗಲೂ ಕಾರು ತಂತಾನೆ ಚಲಿಸಿದ್ದು, ಸ್ವಾಮಿಗಳು ಬೇಡ ಅಂದು ಹೇಳಿದ ದಿನ ಯಾರಾದರೂ ಅವರ ಮಾತನ್ನು ಮೀರಿ ಹೋದರೆ ಅವರು ಹೋಗ ಹೋಗುತ್ತಲೆ 'ಗೋತಾ' ಹೊಡೆದದ್ದು, ಮಕ್ಕಳಿಲ್ಲದವರಿಗೆ ಮಕ್ಕಳ ಭಾಗ್ಯ ಕರುಣಿಸಿದ್ದು... ಮುಂತಾಗಿ ಮಾಮೂಲಿ ಗೊಳ್ಳು ಪುರಾಣದ ತೌಡು ಕುಟ್ಟುತ್ತಾರೆ. "ಕಾಗೆ ಕುಳಿತುಕೊಳ್ಳುವುದಕ್ಕೂ ಕೊಲ್ಯಾ ಮುರಿಯುವುದಕ್ಕೂ ಸಮನಾಯ್ತು" ಎಂಬುದನ್ನೂ ಅರಿಯದ ಮುಗ್ಧ ಜನ ಇದನ್ನೆಲ್ಲ ನಂಬಿದ್ದಾರೆ.



ಮೂಲತಃ ಇಂಡಿ ತಾಲೂಕಿನ ಲಚ್ಯಾಣದ ಸಿದ್ದಲಿಂಗು ಎಂಬ ವ್ಯಕ್ತಿ ಹಚ್ಚಿದ ಈ ಹಣತೆ, ತರುವಾಯ ಮುಗಳಖೋಡದ ಕುರುಬ ಜನಾಂಗದ ಯಲ್ಲಾರಲಿಂಗ ಮಹಾರಾಜರಿಂದ ಬೆಳೆಯುತ್ತಿರುವಂತೆ (ಕರ್ಮಠ ಜಂಗಮರ ಕೈನಾಡದಿಂದ) ಈ ಮಠ ಮತ್ತೆ ಜಂಗಮರ ಬುಟ್ಟಿಗೆ ಬಿದ್ದಿದೆ. ಯಾವಾಗ ಈ ಮಠಕ್ಕೆ ಜಂಗಮ ಜಾತಿಯ ಸಿದ್ಧರಾಮ ಶಿವಯೋಗಿ ಎಂಬ ಆಸಾಮಿ ಬಂದು ಕುಳಿತುಕೊಂಡನೋ ಆವಾಗ ಇದರ ಖ್ಯಾತಿ ಉತ್ತುಂಗಕ್ಕೆ ಮುಟ್ಟಿತು. ಸಿದ್ದರಾಮ ಶಿವಯೋಗಿ ಸ್ವಾಮಿ ನಾನಾರೀತಿಯ ಗಿಮಿಕ್‌ಗಳನ್ನು ಮಾಡುತ್ತ ಮಠದ ಸಂಪತ್ತನ್ನು ಅದೆಷ್ಟು ಹೆಚ್ಚಿಸಿದರೆಂದರೆ ಅದನ್ನು ಎಣಿಸುವುದೇ ಅಸಾಧ್ಯ ಎಂಬಂತಾಯಿತು. ಸಿದ್ದರಾಮ ಶಿವಯೋಗಿ ಸ್ವಾಮಿಯು ತಾನು ಸತ್ತ ತರುವಾಯ ತನ್ನ ಜಾಗಕ್ಕೆ ತನ್ನ ಅಣ್ಣನ ಮಗನ ಮಗ - ಅಂದರೆ ಮೊಮ್ಮಗನನ್ನೇ - ಆ ಪಟ್ಟಕ್ಕೆ ಕುಳಿತುಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾದ.

ಈ ಮಠಕ್ಕೆ ಮಂತ್ರಿ ಮಹೋದಯರು ಮಾತ್ರವಲ್ಲ, ದೊಡ್ಡ ದೊಡ್ಡ ಉನ್ನತ ಹುದ್ದೆ ಹೊಂದಿರುವ ಅಧಿಕಾರಿ ವರ್ಗದವರೂ ನೀರಿನಂತೆ ಹರಿದು ಬರುತ್ತಾರೆ. ಧರ್ಮಸಿಂಗ್ ಎಂಬ ಮಾಜಿ ಮುಖ್ಯಮಂತ್ರಿಯಂತೂ ಈ ಮಠದ ಊಳಿಗಕ್ಕೆ ನಿಂತವರಂತೆ ಸದಾ ನಿಂತಿರುತ್ತಾರೆ. ಕೇಂದ್ರದ ಸಚಿವ ಶಿವರಾಜ ಪಾಟೀಲರು, ಮಾಜಿ ಸಚಿವ ಬಸವರಾಜ ಪಾಟೀಲ ಅನ್ವರಿ, ಮಾಜಿ ಮುಖ್ಯ ಮಂತ್ರಿ ಎಸ್.ಎಂ.ಕೃಷ್ಣ, ಮಾಜಿ ಪ್ರಧಾನಿ ದೇವೇಗೌಡ ಮುಂತಾದವರೆಲ್ಲ ಈ ಮಠದ ಅಂಗಳದಲ್ಲಿ ಉರುಳಾಡಿ ಹೋದವರೇ. ಅಷ್ಟೇ ಅಲ್ಲ, ನೆರೆಯ ರಾಜ್ಯ ಮಹಾರಾಷ್ಟ್ರದ ನಟೋರಿಯಸ್ ಮಂತ್ರಿ ಸಿದ್ರಾಮಪ್ಪ ಮೇತ್ರಿ ಮತ್ತು ಈ ಮಠದ್ದು ಗಳಸ್ಯಕಂಠಸ್ಯ ಸಂಬಂಧ.

ಮಂತ್ರಿ ಮಹೋದಯರು ಇಲ್ಲಿಗೆ ಬಂದು ಮಠಕ್ಕೆ ಏನನ್ನಾದರೂ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ, ಆದರೆ ಹೋಗುವಾಗ ಮಾತ್ರ ಅವರೆಲ್ಲ ಬಂಗಾರದ ಉಂಗುರಗಳನ್ನು ಈಸಿಕೊಂಡು, ಶಾಲು ಹೊದ್ದುಕೊಂಡು, ಹೂ ಹಾರಗಳನ್ನು ಹಾಕಿಕೊಂಡು ಹೋಗುವುದಂತೂ ಖರೆ. ಧರ್ಮಸಿಂಗ್‌ರಂತೂ ಮಠಕ್ಕೆ ಬಂದಾಗಲೆಲ್ಲ ಬಂಗಾರದ ಉಂಗುರ ಪಡೆದುಕೊಂಡು ಹೋಗುವುದು ಅನುಗಾಲದಿಂದಲೂ ಬಂದಿರುವ ರೂಢಿ. ಹೀಗೆ ದೊಡ್ಡ ದೊಡ್ಡವರೇ ಬರುವಾಗ ಇನ್ನು ಜನಸಾಮಾನ್ಯರು ಬಾರದೆ ಇರುತ್ತಾರೆಯೇ? ಅವರು ಕೂಡ ದಿಂಡುರುಳಿ ಹೋಗುತ್ತಿದ್ದಾರೆ.

ಫ್ಯಾನ್ಸಿ ಡ್ರೆಸ್ ಸ್ವಾಮಿ


ಇಂಥ ಐತಿಹಾಸಿಕ (!?) ಪರಂಪರೆ ಹೊಂದಿರುವ ಮಠಕ್ಕೆ ಕೇವಲ 20 ರ ಹರೆಯದ ಬಾಲಯೋಗಿ ಮುರುಘಾರಾಜೇಂದ್ರಶಿವಯೋಗಿ ಎಂಬ ವಿದ್ಯಾಭ್ಯಾಸವನ್ನೇ ಮಾಡದ ಉಂಡಾಡಿಗುಂಡನನ್ನು ತಂದು ಪಟ್ಟಕ್ಕೆ ಕುಳ್ಳಿರಿಸಿದರೆ ಏನಾಗುತ್ತದೋ ಅದೆಲ್ಲವೂ ಈಗ ಮಠದಲ್ಲಿ ನಡೆದಿವೆ. ತನ್ನ ಹುಟ್ಟುಹಬ್ಬ ಬಹುದೊಡ್ಡ ಸಂಭ್ರಮದ ದಿನ ಎಂದು ತಿಳಕೊಂಡಿರುವ ಈ 'ಎಬಡ' ಪ್ರತಿ ವರ್ಷ ಅದಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಆಚರಿಸಿಕೊಳ್ಳುತ್ತಿದ್ದಾನೆ. ಆತನ ಹುಟ್ಟುಹಬ್ಬದಂದು ಹೊರಡುವ ಮೆರವಣಿಗೆಯನ್ನು ಜಿಲ್ಲೆಯ ಪ್ರಮುಖ ಬೀದಿಗಳಲ್ಲಿ ಮೈಕ್ ಮೂಲಕ ಇವತ್ತಿನ 'ಧೂಮ್ ಮಚಾಲೆ' ಹಾಡುಗಳು ಆಹ್ವಾನಿಸಿಕೊಳ್ಳುವುದನ್ನು ಕೇಳಿಸಿಕೊಳ್ಳಬೇಕು, ನೋಡಿ ಅಚ್ಚರಿಪಡಬೇಕು!

▶▶▶

ನಿನ್ನ ಇಲ್ಲಾ ಅನಿಸೋದು ದೊಡ್ಡದಲ್ಲ

ಅಚಲೇರಿ ಸ್ವಾಮಿಗೆ ಸಿದ್ಧರಾಮ ಮೇತ್ರಿಯ ಧಮಕಿ

ನಿಜಕ್ಕೂ ಈ ಜಿಡಗಾ ಮಠಕ್ಕೆ ಅಧಿಪತಿಯಾಗಿ ಪಟ್ಟಾಧಿಕಾರ ಪಡೆಯಬೇಕಿದ್ದವರು ಈಗ ಅಚಲೇರಿ (ಮಹಾರಾಷ್ಟ್ರ ಜಿಲ್ಲೆಯ ಉಮರ್ಗಾ ತಾಲ್ಲೂಕಿನ ಉಸ್ಮಾನಾಬಾದ್ ಜಿಲ್ಲೆಯ) ಮಠವನ್ನು ಮಾತ್ರ ನಡೆಸಿಕೊಂಡು ಹೋಗುತ್ತಿರುವ ಬಸವಕುಮಾರಸ್ವಾಮಿಗಳು. ಹಿಂದೊಮ್ಮೆ ಬಸವಕುಮಾರಸ್ವಾಮಿಗಳು ಇನ್ನೂ ಚಿಕ್ಕವರಾಗಿದ್ದಾಗಲೆ ಅವರನ್ನು ಮಠಕ್ಕೆ ಸೇರಿಸಿಕೊಂಡು ಅವರಿಗೆ ಎಲ್ಲಾ ರೀತಿಯ ವಿದ್ಯೆಯನ್ನು ಕಲಿಸಲಾಗಿತ್ತು. ಚಿತ್ರದುರ್ಗದ ಬೃಹನ್ಮಠದಲ್ಲೂ ಅವರನ್ನು ತರಬೇತುಗೊಳಿಸಲಾಗಿತ್ತು. ಇವರು ಎಲ್ಲ ರೀತಿಯಿಂದಲೂ ಜಿಡಗಾ ಮಠಕ್ಕೆ ಸಮರ್ಥ ಉತ್ತರಾಧಿಕಾರಿಯಾಗಿದ್ದರು.




ಆದರೆ ಲಿಂಗೈಕ್ಯರಾಗಿರುವ ಸಿದ್ದರಾಮಸ್ವಾಮಿಗಳಿಗೆ ಯಾವಾಗ ರಕ್ತಸಂಬಂಧದ ಕಡೆ ಒಲವು ಹೆಚ್ಚುತ್ತಾ ಹೋಯಿತೋ ಆವಾಗ ಅವರ ಕಣ್ಣಿಗೆ ಬಿದ್ದವನೇ ಅವರ ಅಣ್ಣನ ಮಗನ ಮಗ. ಆಗ ಅವರು ಬಸವಕುಮಾರಸ್ವಾಮಿಗಳ ಕೈಬಿಟ್ಟು ತನ್ನ ರಕ್ತ ಸಂಬಂಧಿಯನ್ನೇ ಪೀಠಕ್ಕೇರಿಸಲು ಹುನ್ನಾರ ನಡೆಸಲಾರಂಭಿಸಿದರು. ಅದರ ವಿರುದ್ಧ ಸ್ವತಃ ಸಿದ್ಧರಾಮಸ್ವಾಮಿಗಳು ಪ್ರತಿಭಟಿಸಿದ್ದರಲ್ಲದೆ ಮಠದ ಅಪಾರ ಭಕ್ತವರ್ಗವೂ ಸಾಕಷ್ಟು ಪ್ರತಿರೋಧವನ್ನು ವ್ಯಕ್ತಪಡಿಸಿತು.

ಆಗ ಎಂತಹ ವಾತಾವರಣ ಸೃಷ್ಟಿಯಾಗಿತ್ತೆಂದರೆ ಕೆಲವು ಸಲ ಜೀಡಗಾ ಮಠಕ್ಕೆ ಸ್ವತಃ ಸಿದ್ಧರಾಮಸ್ವಾಮಿಗಳೂ ಬರುವುದೇ ಕಷ್ಟ ಎನ್ನುವಂತಾಗಿತ್ತು. ಅವರು ತಮ್ಮ ಕಾರಿನಲ್ಲಿ ತಮ್ಮ ಮಠದತ್ತ ಹೊರಟರೆ ಜೀಡಗಾದ ಜನಗಳೇ ಕಲ್ಲು ಹಿಡಕೊಂಡು ನಿಲ್ಲುತ್ತಿದ್ದರು. ಬಹಳಷ್ಟು ದಾಂಧಲೆಗಳೂ ನಡೆದವು. ಕೊನೆಗೆ ಮಹಾರಾಷ್ಟ್ರದಲ್ಲಿ ಮಂತ್ರಿಯಾಗಿರುವ ಮಟ್ಯಾ ದೊರೆ ಸಿದ್ಧರಾಮಪ್ಪ ಮೇತ್ರಿ ಮಧ್ಯ ಪ್ರವೇಶಿಸದೇ ಹೋಗಿದ್ದರೆ ಈ ಜಗಳ ಇನ್ನೂ ಬೆಳೆಯುತ್ತಿತ್ತು.

"ನಾನು ಏನೇನೋ ಮಾಡಿ ದಕ್ಕಿಸಿಕೊಂಡಿನಿ. ನಿನ್ನನ್ನ ಇಲ್ಲ ಅನ್ನಿಸಿಬಿಡೋದು ನನಗೇನು ದೊಡ್ಡದಲ್ಲ, ಸುಮ್ನ ಕುಂಡಿ ಬಾಯಿ ಮುಚ್ಚಗೊಂಡು ಅಚಲೇರಿ ಮಠ ಒಪ್ಪಿಕೋ. ಇಲ್ಲದೇ ಹೋದ್ರೆ ನಿನ್ನನ್ನ ಜೀವ ಸಹಿತ ಉಳಸೋದಿಲ್ಲ, ನನ್ನನ್ನ ಏನಂತ ತಿಳಕೊಂಡಿದ್ದಿ" ಎಂಬ ಮೇತ್ರೆಯ ಧಮಕಿಯಿಂದ ಬಸವಕುಮಾರ ಸ್ವಾಮಿ ವಿಧಿ ಇಲ್ಲದೆ ಹಿಂದೆ ಸರಿಯಬೇಕಾಯಿತು. ಜನಗಳೂ ಜಿಡಗಾದ ಇಂದಿನ ಮುರುಘಾರಾಜೇಂದ್ರ ಶಿವಯೋಗಿಗಳ ಹಿಂದೆ ಇರುವ ಇಂಥ ಪಟಾಲಂ ನೋಡಿ ಕೊನೆಕೊನೆಗೆ ತೆಪ್ಪಗಾಗಬೇಕಾಯಿತು. ■

...ಕುಬೇರರ ಖಜಾನೆ ಹಾಗೂ ...ಭ್ರಮಾಧೀನ ಮಠಾಧೀಶ



...ವಣ್ಣ ವೇಷದಲ್ಲಿ... ...ರುಘಾ ಮಠಾಲೇ ಸ್ವಾಮಿ

ಇಂದಿನ ಮುರುಘಾರಾಜೇಂದ್ರ ಸ್ವಾಮಿಗಳಿಗೆ ಈಗಿನ್ನೂ ಕೇವಲ 22 (ಇವರು ...2 ಡಿಸೆಂಬರ್ 1985ರಂದು ಹುಟ್ಟಿದ್ದು)ರ ಹರೆಯ. ಆದರೆ ಅವರ ಕೊರಳಿಗೆ ...ಇರುವ ಜವಾಬ್ದಾರಿ ಮಾತ್ರ ಅತ್ಯಂತ ದೊಡ್ಡವು. ಸುಮಾರು 360 ಶಾಖಾ ...ಮಠಗಳನ್ನು ನಿಭಾಯಿಸುವುದು ಒತ್ತಟ್ಟಿಗಿರಲಿ, ಪ್ರತಿಯೊಂದು ಮಠಕ್ಕೆ ಭೇಟಿ ಕೊಡುವುದೆ ...ದುಸ್ಸಾಧ್ಯ ಎನ್ನುವಂತಹ ಪರಿಸ್ಥಿತಿ ಇದೆ. ಈ ಕಾರಣಕ್ಕೇ ಕೆಲ ಶಾಖಾ ಮಠಗಳ ...ಮ್ಯಾನೇಜರುಗಳು ಭಕ್ತರು ತಂದಿಕ್ಕುವ ಬೋನಕ್ಕೆ ಕನ್ನವಿಕ್ಕಿದ್ದಾರೆ ಎಂದರೆ ಸುಳ್ಳಾಗಲಾರದು.

ಅದರೂ ಶಾಖಾ ಮಠಗಳ ಪ್ರತಿಯೊಬ್ಬ ಮ್ಯಾನೇಜರ್‌ನ ವೈಯಕ್ತಿಕ ಖರ್ಚನ್ನಷ್ಟೇ ಅಲ್ಲದೆ ಅವನ ಸಾಂಸಾರಿಕ ...ಖರ್ಚು, ಲಗ್ನ ಮುಹೂರ್ತ ಮುಂತಾದ್ದಕ್ಕೆಲ್ಲ ಮಠದ ಹಣ ಧಾರಾಳವಾಗಿ ಹರಿದುಹೋಗುತ್ತಿದೆ. ಆದ್ದರಿಂದ ...ಅವರಲ್ಲಿ ಹೆಚ್ಚು ಜನ ಅನಿವಾರ್ಯವಾಗಿ ಸ್ವಾಮಿಯ ನಿಷ್ಠ ಪರಿಪಾಲಕರಾಗಿಯೇ ಬದುಕುತ್ತಾರೆ. ಸಾಕುನಾಯಿಯಂತೆ ...ಸ್ವಾಮಿಯ ಹಿಂದೆ ಮುಂದೆ ಸುಳಿದಾಡುತ್ತಾರೆ. ಇದೆಲ್ಲಕ್ಕಿಂತ ಮುಖ್ಯವಾಗಿ ಈ ಮಠದ ಸ್ವಾಮಿಗಳ ದುಡ್ಡು ...ಲಪಟಾಯಿಸಿದರೆ ಕೇಡುಗಾಲ ಖಂಡಿತವಾಗಿ ಬರುತ್ತದೆ ಎಂಬ ನಂಬಿಕೆಯೂ ಇರುವುದರಿಂದ ಮಠದ ಸಂಪತ್ತು ...ಒಂದು ರೀತಿಯಲ್ಲಿ ಸುರಕ್ಷಿತವಾಗಿದೆ!

ಕುಬೇರನ ಖಜಾನೆಯನ್ನೇ ತಮ್ಮ ಮಠಗಳಲ್ಲಿ ಇಟ್ಟುಕೊಂಡಿರುವ ಸದರಿ ಸ್ವಾಮಿಗಳು ಜನಸಾಮಾನ್ಯ ...ತಂದುಕೊಡುವ ಹಣವನ್ನು ಸದ್ಬಳಕೆ ಮಾಡಿಕೊಂಡಿದ್ದೇ ಆದರೆ ಅವರು ಉತ್ತರ ಕರ್ನಾಟಕದ ಭಾಗದಲ್ಲಿ ಒಂದು ...ಹೊಸ ಮನ್ವಂತರವನ್ನೇ ಹುಟ್ಟುಹಾಕಬಹುದು. ಆದರೆ ಬರೀ ಬಾಲಂಗೋಚಿಗಳು, ಹೊಗಳು ಭಟ್ಟರು, ...ಬುದ್ಧಿಹೀನರನ್ನೇ ನೆಚ್ಚಿಕೊಂಡಿರುವ, ತನಗೆ ದೇವಾಧಿದೇವತೆಗಳ ಕೃಪೆ ಇದೆ ಎಂದು ಭ್ರಮಿಸಿರುವ, ಇನ್ನೂ ...ಬುದ್ಧಿಯೇ ಬಲಿಯದ ಸ್ವಾಮಿಗಳಿಂದ ಇದೆಲ್ಲ ಸಾಧ್ಯವೇ?

ಶ್ರಾವಣ ಮಾಸದ ದಿನಗಳಲ್ಲಂತೂ ತನ್ನ ಎದೆಎತ್ತರಕ್ಕೆ ...ಬ್ಬಿಪತ್ರೆ ಮತ್ತು ಹೂಗಳ ರಾಶಿಯನ್ನು ಹಾಕಿಸಿಕೊಂಡು ...ತ ಬಂಗಾರದ ಕರಡಗಿಯಿಂದ ಲಿಂಗವನ್ನು ತೆಗೆದು ...ಳ್ಳಿಯ ಲೋಟದ ನೀರಿನಲ್ಲಿ ಅಭಿಷೇಕಗೊಳ್ಳುವ ಲಿಂಗ ...ದಕ್ಕೂ ಪಾವನ! "ಬಂಡೆ ಬಂಡೆ ಪತ್ರೆಯ ತಂದು ...ಡಕುಂಡಲ್ಲಿ ಮಜ್ಜನಕ್ಕೆರೆವಿರಿ. ತಾಪತ್ರಯವ ಲಿಂಗನೊಲ್ಲ!" ...ಬ ಬಸವಣ್ಣನವರ ಮಾತು ಇಲ್ಲಿ ಅರ್ಥ ...ದುಕೊಂಡಿದೆ. ಶ್ರಾವಣದ ಮಾಸ ...ಲ್ಲಿ 'ಶ್ರಾವಣದ ಮೋಸ'ವಾಗಿ ನಡೆಯು ...ದೆ.



ಅದಕ್ಕಿಂತ ಮಜಾ ಕೊಡುವ ವಿಚಾರ ...ನ್ನೊಂದಿದೆ. 'ಇವತ್ತು ಸ್ವಾಮಿಗಳು ಕೃಷ್ಣನ ...ವತಾರದಲ್ಲಿ ಕಾಣಿಸಿಕೊಳ್ಳುತ್ತಾರೆ' ಎಂದು ...ಠದ ಪುಡಿ ಗಣಂಗಳು ಜನರಿಗೆ ...ಳುವುದಕ್ಕೂ, ಅದಕ್ಕೆ ಸರಿಯಾಗಿ ಸ್ವಾಮಿ ...ಷ್ಣನ ವೇಷ ಉಟ್ಟುಕೊಳ್ಳುವುದಕ್ಕೂ ...ಯಾಗಿದೆ. ಮಗದೊಂದು ಸಲ ಇದೇ ...ಮಿ ಥೇಟ ಬಸಣ್ಣನವರಂತೆ ರಾಜ ಪೋಷಾಕು ಹಾಕಿ ...ಂಡು ತಲೆಯ ಮೇಲೆ ಬಂಗಾರದ ಕಿರೀಟ ಇಟ್ಟು ...ಂಡು ಫೋಟೋಗೆ ಪೋಜು ನೀಡುವುದೂ ಇಲ್ಲಿ ...ಮಾನ್ಯವಾಗಿ ನಡೆಯುತ್ತಿರುತ್ತವೆ. ಫ್ಯಾನ್ಸಿ ಡ್ರೆಸ್ ಬಗ್ಗೆ ...ಥೆಲ್ಲ ತೆವಲುಳ್ಳ ಈ ಸ್ವಾಮಿ ಸರ್ಕಸ್ ಕಂಪನಿಗೋ, ...ಟಕ ಕಂಪನಿಗೋ ಮಾಲೀಕನಾದರೆ ಒಳ್ಳೆಯದಾಗುತ್ತಿತ್ತು ...ದು ಇಲ್ಲಿನ ಚಿಂತಕರು ಲೇವಡಿ ಮಾಡುತ್ತಿರುತ್ತಾರೆ.


ಗುಲಬರ್ಗಾದ ಕೋಟನೂರನಲ್ಲಿ, ಬೆಳಗಾಂವ ಜಿಲ್ಲೆಯ ...ುಗಳಖೋಡದಲ್ಲಿ, ಮಹಾರಾಷ್ಟ್ರದ ಹಲವಾರು ಕಡೆಗಳಲ್ಲಿ ...ುವ ಈ ಮಠದ ಶಾಖಾ ಮಠಗಳಲ್ಲಿ ಬಂಗಾರದ ...ೀಟಗಳು, ಬೆಳ್ಳಿಯ ಕುರ್ಚಿಗಳು, ಬೆಳ್ಳಿಯ ತಂಬಿಗೆ, ...ಟ್ಟಿಲು ಮುಂತಾದವು ಕಣ್ಣು ಕೋರೈಸುವಷ್ಟು ಬಿದ್ದಿದೆ. ...ದರೆ "ನಾಯಿ ಮೊಲೆಯಲ್ಲಿ ಗಂಡುಗ ಹಾಲಿದ್ದರೇನು? ...ೇವರಿಗಲ್ಲ, ದಿಂಡ್ರಿಗಲ್ಲ" ಎಂಬ ಉಕ್ತಿ ಇಲ್ಲಿ ನೆನಪಾಗುತ್ತದೆ. ಯಾವುದೆ ತತ್ವ ಸಿದ್ಧಾಂತಕ್ಕೆ ಅಂಟಿಕೊಳ್ಳದ ಇಲ್ಲಿನ ಸ್ವಾಮಿ ಪಕ್ಕಾ ಬಣಜಿಗನಂತೆ ವ್ಯವಹರಿಸುತ್ತಾನೆ.

ಈ ಮಠಕ್ಕೆ ಪಂಚಾಚಾರ್ಯ ಗುರುಗಳಾದ ಪಂಚ ಪೀಠಾ(ಢಾ) ಧೀಶ್ವರರೇ ಬರಲಿ, ಬಸವ ತತ್ವ ಹೇಳುವ ಚಿತ್ರದುರ್ಗದ ಮುರುಘರಾಜೇಂದ್ರ ಶರಣರೇ ಆಗಮಿಸಲಿ, ಇಲ್ಲಿಗೆ ಯಾರು ಬಂದರೂ ಅವರಿಗೂ ಸೈ, ಇವರಿಗೂ ಸೈ ಎಂಬ ಧೋರಣೆ ಈ ಮಠದ್ದು. ಯಾಕೆಂದರೆ ಯಾರಿಗಾದರೂ ಒಂದೆ ಕಡೆ ಒತ್ತೆ ಬಿದ್ದರೆ ತಮ್ಮ ಮಠಕ್ಕೆ ಹರಿದುಬರುವ ಭಕ್ತರ ಸಂಖ್ಯೆ ಕಟ್ ಆಗುತ್ತದೆ ಎಂಬ ಭಯ ಈ ಮಠಕ್ಕೆ. ಹೋಗಲಿ, ಸಾಗರದಂತೆ ಹರಿದುಬರುವ ಜನಸಾಮಾನ್ಯರಿಗೆ ಈ ಮಠದಿಂದ ಈವರೆಗೂ ಆದ ಉಪಕಾರವೇನು ಎಂದು ನೋಡಿದರೆ ಅವರಿಗೆಲ್ಲ ಈ ಮಠ ಮೌಢ್ಯದ ಬುತ್ತಿಯನ್ನು ನೀಡಿದ್ದೇ ಕಾಣಿಸುತ್ತದೆ. ಭಕ್ತರಿಗಾಗಿ ಮಠ ಶಿಕ್ಷಣ ಕೊಡುವುದು ಬ್ಯಾಡ, ಅಟ್‌ಲೀಸ್ಟ ಅವರ ಆಧ್ಯಾತ್ಮದ ಹಸಿವನ್ನಾದರೂ ಹಿಂಗಿಸಿದ್ದರೆ ಎಷ್ಟೋ ಒಳ್ಳೆಯದಾಗುತ್ತಿತ್ತು.

"ಕಾವಿ ಕಾಶಾಂಭರವ ಹೊದ್ದರೇನು? ಮಂಡೆ ಬೋಳಾದರೇನು ಮನಬೋಳಾಗದನ್ನಕ್ಕರ?" ಎಂದು ಬಸವಾದಿ ಶರಣರು ಹನ್ನೆರಡನೆಯ ಶತಮಾನದಲ್ಲಿಯೆ ಇಂಥ ಖೊಟ್ಟಿ ಜಂಗಮರನ್ನು ಕಂಡು ಉಗಿದಿದ್ದರು. ಧರ್ಮದ ಹೆಸರಿನಲ್ಲಿ ಜನರನ್ನು ಮೋಸ ಮಾಡುವವರ ಬಗ್ಗೆ ಬಸವಣ್ಣನವರು "ಲಾಂಛನಕ್ಕೆ ಶರಣೆಂಬೆ ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ ಕೂಡಲಸಂಗಮನ ಸಾಕ್ಷಿಯಾಗಿ ಛೀ ಎಂಬೆ" ಎಂಬ ಮಾತನ್ನೂ ಆಡಿದ್ದರು.

ಆದರೆ ಇವತ್ತು ಅಂತಹ ಧೈರ್ಯ, ನಿಷ್ಠುರತನ ಎಷ್ಟು ಜನಕ್ಕೆ ಇದೆ?

■ ವಿಶ್ವಾರಾಧ್ಯ ಸತ್ಯಂಪೇಟೆ



...ಕರಿಯ ಕಂಬಳಿ ಮಡಚಿಟ್ಟ ಸಿದ್ಧರಾಮಸ್ವಾಮಿ




ಮೂಲತಃ ತಳವರ್ಗವಾದ ಕುರುಬ ಸಮಾಜದವರಿಂದಲೆ ಸ್ಥಾಪಿತವಾದ ...ಜೇಡಗಾ ಮಠ ಬರುಬರುತ್ತಾ ಯಾವ ಕಾರಣಕ್ಕೋ ಸಂಪೂರ್ಣವಾಗಿ ...ಜಂಗಮಮಯವಾಗಿ ಹೋಯಿತು. ಆರಂಭದಲ್ಲಿ ಕುರುಬ ಸಮಾಜದ ...ಮುಖಂಡರು ಇದನ್ನು ಬಲವಾಗಿ ಖಂಡಿಸಿದ್ದರು. ಅದರಿಂದ ಏನೂ ಆಗದಿದ್ದಾಗ, ...ಈ ಮಠದೊಂದಿಗೆ ತಮ್ಮ ಸಮುದಾಯದ ಸಂಬಂಧವಿದೆ ಎಂದು ...ಸಾಂಕೇತಿಕವಾಗಿಯಾದರೂ ತೋರಿಸಲು ಹಿಂದೆ ಇದ್ದ ಸಿದ್ಧರಾಮ ಸ್ವಾಮಿಗಳ ...ಹೆಗಲು ಮೇಲೆ ಕರಿಯ ಕಂಬಳಿ ಹಾಕಿದ್ದರು.

ಆದರೆ ಸಿದ್ಧರಾಮ ಸ್ವಾಮಿಗಳು ತಮ್ಮ ಹೆಗಲ ಮೇಲಿನ ಕಂಬಳಿಯನ್ನು ...ಮಡಚಿ ಕೆಳಗಿಟ್ಟರು. ಕಾಲಕ್ರಮೇಣ ಕುರುಬ ಸಮಾಜದ ನಿಗಾ ಕೂಡಾ ಈ ...ಮಠದ ಮೇಲೆ ಕಡಿಮೆಯಾಯ್ತು, ಸಾಕಷ್ಟು ಜನ ಪ್ರಭಾವಿತ ರಾಜಕಾರಣಿಗಳು ...ಜೇಡಗಾ ಮಠದ ಅಂಗಳದಲ್ಲಿ ಬಂದು ಹೋಗೋದು ಪ್ರಾರಂಭವಾದಂತೆ ಕುರುಬ ಸಮಾಜದ ಜನರು ...ಅಲ್ಲಿಗೆ ಬರುವುದೇ ನಿಂತುಹೋಯಿತು...

ಈ ದೇಶದ ಅರಣ್ಯ, ಖನಿಜ, ಜಲ, ಭೂ ಮತ್ತು ಇತರೆ ಎಲ್ಲ ಸಂಪತ್ತುಗಳನ್ನು ದೊಡ್ಡ ದೊಡ್ಡ ಬಂಡವಾಳಿಗರು ಕೊಳ್ಳೆ ಹೊಡೆಯುತ್ತಲೇ ಬರುತ್ತಿದ್ದಾರೆ. ಪರಿಸರಕ್ಕೆ, ಮನುಕುಲಕ್ಕೆ ಅಪಾರ ಪ್ರಮಾಣದಲ್ಲಿ ಹಾನಿ ಮಾಡುತ್ತಿರುವ ಈ ಲೂಟಿಯ ವಿರುದ್ಧ ಯಾರಾದರೂ ಪ್ರತಿಭಟಿಸಿದರೆ ಅದನ್ನು ಲಾಠಿ ಬೂಟುಗಳಿಂದಲೋ, ಕಾನೂನಿನ ಕವಚದಿಂದಲೋ ಹತ್ತಿಕ್ಕಲಾಗುತ್ತಿರುವುದು ನಮಗೆಲ್ಲಾ ಗೊತ್ತಿರುವ ವಿಚಾರ. ಅದಕ್ಕೂ ಜಗ್ಗದೇ ಹೋರಾಟ ಮುಂದುವರೆದರೆ ಅದನ್ನು ಮಣಿಸುವುದಕ್ಕೆ ಈ ಬಂಡವಾಳಿಗರು ಎಂತೆಂಥಾ ತಂತ್ರಗಳನ್ನು ಉಪಯೋಗಿಸುತ್ತಾರೆ ಎಂದರೆ ಈ ದೇಶದ ಕೋರ್ಟುಗಳನ್ನೂ ಅವರು ಬಳಸಿಕೊಳ್ಳುತ್ತಾರೆ. ಆದರೆ, ದೇಶ ಮತ್ತು ಪರಿಸರದ ಉಳಿವಿಗಾಗಿ ಹೋರಾಡಬೇಕೆಂಬ ಅದಮ್ಯ ಛಲ ಇದ್ದರೆ ಎಲ್ಲಾ ಅಡೆತಡೆಗಳನ್ನು ಮೀರಿಯೂ ▼

ಗ್ರೀನ್ ಪೀಸ್

ಟಾಟಾನಿಗೆ ತಿರುಗುಬಾಣ!



ರತನ್

ಹೊಸ ಹೊಸ ಸೃಜನಶೀಲ ಹೋರಾಟ ಮಾರ್ಗಗಳನ್ನು ಕಂಡುಕೊಳ್ಳಬಹುದು ಎಂಬುದಕ್ಕೆ ಇತ್ತೀಚೆಗೆ ಬಾಂಬೆಯಲ್ಲಿ ಗ್ರೀನ್‌ಪೀಸ್ (ಹಸಿರು ಶಾಂತಿ) ಎಂಬ ಸಂಘಟನೆ ಟಾಟಾನ ಪರಿಸರ ಲೂಟಿಯ ವಿರುದ್ಧ ನಡೆಸಿದ ಹೋರಾಟ ಒಂದು ಜೀವಂತ ಉದಾಹರಣೆ.

ದುರದೃಷ್ಟ ಎಂದರೆ ಇಂತಹ ಒಂದು ಹೋರಾಟವನ್ನು ಮಾಧ್ಯಮಗಳು ಹೊರಜಗತ್ತಿಗೆ ತರಲೇ ಇಲ್ಲ. ಅದಕ್ಕೆ ಕಾರಣ ಈ ಮಾಧ್ಯಮಗಳು ಜಾಹಿರಾತುಗಳಿಗಾಗಿ ಟಾಟಾನಂತಹ ದೈತ್ಯ ಬಂಡವಾಳಿಗರನ್ನೇ ನೆಚ್ಚಿಕೊಂಡಿರುವುದು!

ಯಾಕೀ ಹೋರಾಟ?

ಕೋರಸ್ ಎಂಬ ಪ್ರಖ್ಯಾತ ಉಕ್ಕು ಕಂಪೆನಿಯನ್ನು ಖರೀದಿಸಿದ ಮೇಲೆ ವಿಶ್ವದ ಐದನೇ ಅತಿದೊಡ್ಡ ಉಕ್ಕು ಕಂಪೆನಿಯಾಗಿ ಹೊರಹೊಮ್ಮಿದ ಟಾಟಾ ಉಕ್ಕು ಕಂಪೆನಿಯು ಒರಿಸ್ಸಾದ ಕಡಲ ತಡಿಯ ಧರ್ಮ ಎಂಬಲ್ಲಿ ಒಂದು ಬೃಹತ್ ಬಂದರನ್ನು ನಿರ್ಮಿಸಲು ಹೊರಟಿದೆ. ಆದರೆ ಈ ಯೋಜನೆಯಿಂದ ಪರಿಸರಕ್ಕೆ ಮತ್ತು ಪ್ರಾಣಿ ಸಂಕುಲಕ್ಕೆ ಹೇಳತೀರದ ಹಾನಿಯಾಗಲಿದೆ. ಏಕೆಂದರೆ, ಈ ಜಾಗದ ಪಕ್ಕದಲ್ಲಿಯೇ ಗಹಿರ್ಮಾತ ಕಡಲ ಪ್ರಾಣಿ ಧಾಮವಿದೆ. ಇದು ವಿಶ್ವದಲ್ಲಿಯೇ ಎರಡನೇ ಅತಿದೊಡ್ಡ ಕಡಲಾಮೆಯ ಸಂತಾನೋತ್ಪತ್ತಿಯ ಜಾಗ. ಜೊತೆಗೆ, ಇದೇ ಪ್ರದೇಶದಲ್ಲಿ ಬಿತರ್ಕಾನಿಕ ರಾಷ್ಟ್ರೀಯ ಉದ್ಯಾನವಿದೆ. ಇದು ಭಾರತದ ಎರಡನೇ ಅತಿದೊಡ್ಡ ಮ್ಯಾಂಗ್ರೋವ್. ಇಲ್ಲಿ ಮರಗಳ ಅರಣ್ಯವಿದ್ದು ಇದು ಉಪ್ಪುನೀರು ಮೊಸಳೆಗಳ ವಾಸಸ್ಥಾನವಾಗಿದೆ. ಇಂತಹ ಸೂಕ್ಷ್ಮ ಪ್ರದೇಶವೊಂದರಲ್ಲಿ ಟಾಟಾನಂತಹ ಬಂಡವಾಳಿಗನ ಬಂದರು ಅಸ್ತಿತ್ವಕ್ಕೆ ಬಂದರೆ ಇಲ್ಲಿನ ಜೈವಿಕ ವೈವಿಧ್ಯತೆಯು ಸಂಪೂರ್ಣವಾಗಿ ನಾಶವಾಗುತ್ತದೆ ಎಂದು ನೂರಾರು ಪರಿಸರವಾದಿಗಳು, ಕಡಲಾಮೆ ತಜ್ಞರು, ವನ್ಯಜೀವಿ ಪ್ರೇಮಿಗಳು ಆತಂಕಗೊಂಡಿದ್ದಾರೆ. ಈ ಕಾರಣಕ್ಕಾಗಿ ಅವರೆಲ್ಲರೂ ಟಾಟಾ ತನ್ನ ಬಂದರು ಯೋಜನೆಯನ್ನು ಪ್ರಕಟಿಸಿದಂದಿನಿಂದ ಅದಕ್ಕೆ ವಿರೋಧ ವ್ಯಕ್ತಪಡಿಸುತ್ತಲೇ ಇದ್ದಾರೆ. ಅವರಲ್ಲಿ ಗ್ರೀನ್‌ಪೀಸ್ ಎಂಬ ಪರಿಸರ ಸಂಘಟನೆಯೂ ಒಂದು.



ಆದರೆ ನ್ಯಾಯಸಮ್ಮತ ಪ್ರತಿಭಟನೆಗೆ ಈ ದೇಶದಲ್ಲಿ ಯಾವ ಬೆಲೆ ಸಿಗುತ್ತದೆ ಹೇಳಿ? ಶಾಂತಿಯುತ ಪ್ರತಿಭಟನೆಗಳಾದವು, ಮೆರವಣಿಗೆಗಳಾದವು, ಪ್ರದರ್ಶನಗಳಾದವು - ಇದ್ಯಾವುದಕ್ಕೂ ಟಾಟಾ ಆಗಲೀ ಅಥವಾ ಆತನ ಬೆಂಬಲಕ್ಕೆ ನಿಂತಿರುವ ಒರಿಸ್ಸಾ ಮತ್ತು ಕೇಂದ್ರ ಸರ್ಕಾರಗಳಾಗಲೀ ಕ್ಯಾರೆ ಎನ್ನಲಿಲ್ಲ. ನಂತರ ಈ ವಿಚಾರವಾಗಿ ಜನಾಭಿಪ್ರಾಯ ಸಂಗ್ರಹಿಸುವುದಕ್ಕಾಗಿ ಗ್ರೀನ್‌ಪೀಸ್ ಸಂಘಟನೆಯು ಒಂದು ಆನ್‌ಲೈನ್ ಅಭಿಯಾನವನ್ನು ಆರಂಭಿಸಿತು. ಅದಕ್ಕೆ 90,000ಕ್ಕಿಂತ ಹೆಚ್ಚು ಜನರು ಅವಿರೋಧವಾಗಿ ಸ್ಪಂದಿಸಿ ಟಾಟಾ ತನ್ನ ಉದ್ದೇಶಿತ ಬಂದರು ಯೋಜನೆಯ ಸ್ಥಳವನ್ನು ಬದಲಾಯಿಸಬೇಕೆಂದು ಒತ್ತಾಯಿಸಿದರು. ಆಗಲೂ ಸರ್ಕಾರಗಳು ಇಂತಹ ರಾಷ್ಟ್ರೀಯ ಹಿತಾಸಕ್ತಿಯ ಸೂಕ್ಷ್ಮ ವಿಚಾರದ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ.

ಈ ಸಲದ ಟಾಟಾ ಕಂಪೆನಿಯ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯುವುದಿತ್ತು. ಪ್ರತಿಭಟನಾಕಾರರು ಇಲ್ಲಿಗೂ ಬಂದು ಪ್ರತಿಭಟನೆ ನಡೆಸಬಹುದೆಂಬ ಭಯ ಟಾಟಾಗೆ ಇದ್ದೇ ಇತ್ತು. ಅದ್ದರಿಂದಲೇ ಆತ ಕೋರ್ಟಿನ ಮೊರೆ ಹೊಕ್ಕು, ರಕ್ಷಣೆ ಪಡೆದಿದ್ದ. ನ್ಯಾಯಾಲಯವು ಗ್ರೀನ್‌ಪೀಸ್‌ನ ಪ್ರತಿಭಟನೆಗೆ ಅವಕಾಶ ಕೊಡಲಿಲ್ಲ.

ಆದರೆ ಹೇಗಾದರೂ ಮಾಡಿ ತಮ್ಮ ಧ್ಯೇಯದಲ್ಲಿ ▲ ಯಶಸ್ಸು ಕಾಣಲೇಬೇಕೆಂದು ಹಠತೊಟ್ಟಂತಿದ್ದ ಗ್ರೀನ್ ಪೀಸ್ ಕಾರ್ಯಕರ್ತರು ಬೇರೊಂದು ಉಪಾಯ ಮಾಡಿದರು. ಹಲವು ಕಾರ್ಯಕರ್ತರು ಟಾಟಾ ಕಂಪೆನಿಯ ನೂರು, ಐನೂರು, ಸಾವಿರ, ಎರಡು ಸಾವಿರ ರೂಪಾಯಿಗಳ ಷೇರುಗಳನ್ನು ಕೊಂಡುಕೊಂಡು ಅಧಿಕೃತವಾಗಿ ಕಂಪೆನಿಯ ಹೂಡಿಕೆದಾರರಾದರು. ಅಂದರೆ, ಟಾಟಾ ಕಂಪೆನಿಯ ವಾರ್ಷಿಕ ಸಭೆಯಲ್ಲಿ ಭಾಗವಹಿಸುವುದಕ್ಕೆ ಅವರಿಗೆ ಎಲ್ಲಾ ಕಾನೂನುಬದ್ಧ ಹಕ್ಕು ಸಿಕ್ಕಂತಾಯಿತು. ವಾರ್ಷಿಕ ಸಭೆ ನಡೆಯಬೇಕಾದ ಟಾಟಾ ಕಂಪೆನಿಯ ಕೇಂದ್ರ ಕಚೇರಿ ಬಾಂಬೆಯಲ್ಲಿರುವ 'ಬಾಂಬೆ ಹೌಸ್'ಗೆ ಷೇರುದಾರರ ವೇಷದಲ್ಲಿ ಬಂದ ಕಾರ್ಯಕರ್ತರು ಸಭೆ ಪ್ರಾರಂಭವಾಗುತ್ತಿದ್ದಂತೆ ಒರಿಸ್ಸಾ 'ಧರ್ಮ ಬಂದರು ಪ್ರಾಜೆಕ್ಟಿಗೆ' ವಿರೋಧ ವ್ಯಕ್ತಪಡಿಸಿ ಗದ್ದಲವೆಬ್ಬಿಸಿಬಿಟ್ಟರು. ಸಭೆಯಲ್ಲಿ ಖುದ್ದು ಹಾಜರಿದ್ದ ರತನ್ ಟಾಟಾನಿಗೆ ಇದು ತುಸು 'ಹಿಂಸಾತ್ಮಕ' ಪ್ರತಿಭಟನೆ ಎನ್ನಿಸಿತಾದರೂ ಅವರನ್ನು ಹೊರಹಾಕುವ ಅಥವಾ ಅವರಿಗೆ ಮಾತನಾಡು ಹಕ್ಕನ್ನು ನಿರಾಕರಿಸುವ ಧೈರ್ಯ ಇರಲಿಲ್ಲ. ಏಕೆಂದರೆ ಕಾನೂನಿನ ಪ್ರಕಾರ ಅವರೆಲ್ಲರೂ ಕಂಪೆನಿಯ ಅಧಿಕೃತ ಷೇರುದಾರರೇ!


ಪ್ರತಿಭಟನೆಯಿಂದ ಮುಖಭಂಗಕ್ಕೀಡಾದ ರತನ್ ಟಾಟಾ ಅಂತಿಮವಾಗಿ ಹೋರಾಟಗಾರರ ಒತ್ತಡಕ್ಕೆ ಮಣಿದು ತನ್ನ ಟಾಟಾ ಸ್ಟೀಲ್ ಕಂಪೆನಿಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ಮುಥುರಾಮನ್ ಜೊತೆಗೆ ಗ್ರೀನ್‌ಪೀಸ್ ಸದಸ್ಯರು (ಈಗ ಷೇರುದಾರರು!) ಚರ್ಚಿಸುವುದಕ್ಕೆ ಅವಕಾಶ ಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದಾನೆ.

ಇದು ಹೋರಾಟಕ್ಕೆ ಸಿಕ್ಕ ಒಂದು ಚಿಕ್ಕ ಜಯ ಅಷ್ಟೆ. ಇಷ್ಟು ಮಾಡಿದಾಕ್ಷಣ ಆತ ತನ್ನ ಉದ್ದೇಶಿತ ಯೋಜನೆಯನ್ನು ನಿಲ್ಲಿಸಿಬಿಡುತ್ತಾನೆಂದಾಗಲೀ ಅಥವಾ ಅದನ್ನು ಬೇರೆ ಕಡೆ ವರ್ಗಾಯಿಸುತ್ತಾನೆಂದಾಗಲೀ ಅಲ್ಲ. ಸಂಗೂರಿನಲ್ಲಿ ಜನ ಅಷ್ಟು ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ಮಾಡಿದರೂ ಅದನ್ನು ಸರ್ಕಾರಿ ಪೊಲೀಸರನ್ನು ಉಪಯೋಗಿಸಿಕೊಂಡು ಲಾಠಿ ಬೂಟುಗಳೊಂದಿಗೆ ಎದುರಿಸಿದನೇ ಹೊರತು ತನ್ನ ಯೋಜನೆಯನ್ನು ಹಿಂದಕ್ಕೆ ತೆಗೆದುಕೊಳ್ಳಲಿಲ್ಲ; ಕನಿಷ್ಠ ಅದರ ಜಾಗವನ್ನೂ ಬದಲಿಸಲಿಲ್ಲ. ಅಂಥಾದ್ದರಲ್ಲಿ ಇಲ್ಲಿ ಇಷ್ಟಕ್ಕೇ ಮಣಿದುಬಿಡುತ್ತಾನೆಯೇ?

ಆದರೂ ಹೋರಾಟಗಳನ್ನು ಮಟ್ಟ ಹಾಕುವುದಕ್ಕೆ ಹೇಗೆ ಬಂಡವಾಳಿಗರು, ಸರ್ಕಾರಗಳು ಹೊಸ ಹೊಸ ತಂತ್ರಗಳನ್ನು, ಷಡ್ಯಂತ್ರಗಳನ್ನು ಅನುಸರಿಸುತ್ತಾರೋ ಹಾಗೆಯೇ ಅವರ ತಂತ್ರ-ಷಡ್ಯಂತ್ರಗಳನ್ನು ಅವರಿಗೇ ತಿರುಗುಬಾಣ ಮಾಡುವುದಕ್ಕೂ ಹೇಗೆ ಸಾಧ್ಯವಿದೆ ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೆ.

■ ಕುಮಾರ್ ಬುರಡಿಕಟ್ಟಿ

ಗಣಿ ರೆಡ್ಡಿಯ ಗೂಂಡಾಗಿರಿ



ಗಣಿ ಡಕಾಯಿತ ಜನಾರ್ದನ ರೆಡ್ಡಿಗೆ ಪ್ರವಾಸೋದ್ಯಮ ಖಾತೆ, ಆತನ ಅಣ್ಣ ಕರುಣಾಕರ ರೆಡ್ಡಿಗೆ ಕಂದಾಯ ಇಲಾಖೆ ಮತ್ತು ಅವರ ಸಾಕು ಬಂಟ ರೌಡಿ ಶ್ರೀರಾಮುಲುಗೆ ಆರೋಗ್ಯ ಮಂತ್ರಿಗಿರಿ ಪ್ರಾಪ್ತಿಯಾಗುತ್ತಿದ್ದಂತೆ ಬಳ್ಳಾರಿ-ಸಂಡೂರು ಭಾಗದ ಒಂದೊಂದೇ ಗಣಿಗಳನ್ನೆಲ್ಲ ರೆಡ್ಡಿ ಗ್ಯಾಂಗ್ ಆಕ್ರಮಿಸಲಾರಂಭಿಸಿದೆ. ಆಗಸ್ಟ್ 18 ರ ಮಧ್ಯಾಹ್ನ ಸಂಡೂರು ಗಡಿಯ ತುಮಟಿ ವಿಠಲಾಪುರದ ಟಪಾಲ್ ನಾರಾಯಣ ರೆಡ್ಡಿಯ ಗಣಿಗೆ ನುಗ್ಗಿದ ಜನಾರ್ದನ ರೆಡ್ಡಿಯ ಬಾಡಿಗೆ ಬಂಟರು ನಡೆಸಿದ ಅಮಾನುಷ ದೌರ್ಜನ್ಯ ರೆಡ್ಡಿಗಳ ರಕ್ಕಸಬುದ್ಧಿಯ ಪರಮಾವಧಿಯಷ್ಟೇ.

■ ರಾ. ಸೋಮನಾಥ್


ಏಕಾಬರಂ


ಗಣೇಶ್


ಟಪಾಲ್ ನಾರಾಯಣರೆಡ್ಡಿ

ಕನಿಷ್ಠ ಎಮ್ಮೆಲ್ಲೇಗಿರಿ ಕೂಡ ಇಲ್ಲದಿದ್ದಾಗಲೇ ಅರಣ್ಯಭೂಮಿಗೆ ನುಗ್ಗಿ, ಅರಣ್ಯಾಧಿಕಾರಿಗಳ ಮೇಲೆ ಗೂಂಡಾಗಿರಿ ಮಾಡಿ ನೂರಾರು ಕೋಟಿಯ ಅದಿರು ದೋಚಿದವನಿಗೆ ಆತನದೇ ಸರ್ಕಾರ ಬಂದು ಮಂತ್ರಿಗಿರಿಯೂ ದಕ್ಕಿಬಿಟ್ಟರೆ ಏನು ಗತಿ?

ಈಗ ಅದೇ ನಡೆಯುತ್ತಿದೆ. ಗಣಿ ಡಕಾಯಿತ ಜನಾರ್ದನ ರೆಡ್ಡಿಗೆ ಪ್ರವಾಸೋದ್ಯಮ ಖಾತೆ, ಆತನ ಅಣ್ಣ ಕರುಣಾಕರ ರೆಡ್ಡಿಗೆ ಕಂದಾಯ ಇಲಾಖೆ ಮತ್ತು ಅವರ ಸಾಕು ಬಂಟ ರೌಡಿ ಶ್ರೀರಾಮುಲುಗೆ ಆರೋಗ್ಯ ಮಂತ್ರಿಗಿರಿ ಪ್ರಾಪ್ತಿಯಾಗುತ್ತಿದ್ದಂತೆ ಬಳ್ಳಾರಿ-ಸಂಡೂರು ಭಾಗದ ಒಂದೊಂದೇ ಗಣಿಗಳನ್ನೆಲ್ಲ ರೆಡ್ಡಿ ಗ್ಯಾಂಗ್ ಆಕ್ರಮಿಸಲಾರಂಭಿಸಿದೆ. ಆಗಸ್ಟ್ 18 ರ ಮಧ್ಯಾಹ್ನ ಸಂಡೂರು ಗಡಿಯ ತುಮಟಿ ವಿಠಲಾಪುರದ ಟಪಾಲ್ ನಾರಾಯಣ ರೆಡ್ಡಿಯ ಗಣಿಗೆ ನುಗ್ಗಿದ ಜನಾರ್ದನ ರೆಡ್ಡಿಯ ಬಾಡಿಗೆ ಬಂಟರು ನಡೆಸಿದ ಅಮಾನುಷ ದೌರ್ಜನ್ಯ ರೆಡ್ಡಿಗಳ ರಕ್ಕಸಬುದ್ಧಿಯ ಪರಮಾವಧಿಯಷ್ಟೇ.

ಸದ್ಯ ಜನಾರ್ದನ ರೆಡ್ಡಿಯ ಏಕಾಧಿಪತ್ಯಕ್ಕೆ ಮುಳ್ಳಿನಂತಿದ್ದದ್ದು ಟಪಾಲ್ ನಾರಾಯಣ ರೆಡ್ಡಿಯ ಕಂಪೆನಿಯೊಂದೆ. ಟಪಾಲ್ ನಾರಾಯಣರೆಡ್ಡಿ, ಆತನ ಮಕ್ಕಳಾದ ಗಣೇಶ್ ಮತ್ತು ಏಕಾಂಬರಮ್ ಆಕಾಲದಿಂದಲೂ ಅದಿರು ದಂಧೆಯಲ್ಲಿದ್ದಾರೆ. ತಾತ ಟಪಾಲ್ ತಿಮ್ಮಪ್ಪ 1956 ರಲ್ಲೇ ಆಂಧ್ರದ ಗಡಿಯೊಳಕ್ಕಿರುವ ಮಲ್ಪಂಗುಡಿಯಲ್ಲಿ ಗಣಿಗಾರಿಕೆಗೆ ಪರವಾನಗಿ ಗಿಟ್ಟಿಸಿದ ಹಿರೀಕ. ಆನಂತರ ಅವರ ಮಗ ಟಪಾಲ್ ನಾರಾಯಣರೆಡ್ಡಿ ಕರ್ನಾಟಕ ಸರ್ಕಾರಕ್ಕೆ ಅರ್ಜಿ ಹಾಕಿ ತುಮಟಿ-ವಿಠಲಾಪುರದ ಒಟ್ಟು 27 ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆಗೆ ಲೈಸೆನ್ಸ್ ಪಡೆದಿದ್ದಾರೆ.

1990 ಕ್ಕೂ ಹಿಂದೆ ಅದಿರಿಗೆ ಅಂಥಾ ಬೆಲೆಯಿಲ್ಲವಾದ್ದರಿಂದ ಆಂಧ್ರದ ಗಡಿಯೊಳಕ್ಕಿದ್ದ ಟಪಾಲ್ ತಿಮ್ಮಪ್ಪನವರ ಗಣಿ ಸ್ಥಗಿತಗೊಂಡಿದೆ. ಯಾವತ್ತು ಚೈನಾಕ್ಕೆ ಅದಿರನ ಡಿಮ್ಯಾಂಡ್ ಸೃಷ್ಟಿಯಾಯಿತೋ ಮತ್ತೆ ಮಲ್ಪಂಗುಡಿಗೆ ಕಾಲಿಟ್ಟ ಟಪಾಲ್ ನಾರಾಯಣ ರೆಡ್ಡಿಗೆ ಎಂಥಾ ಆಘಾತ ಕಾದಿತ್ತೆಂದರೆ, ತಂದೆ ಟಪಾಲ್ ತಿಮ್ಮಪ್ಪನವರ ಹೆಸರಿಗೆ ಮಂಜೂರಾಗಿದ್ದ ಇಡೀ ಪ್ರದೇಶವನ್ನು ಗಾಲಿ ಜನಾರ್ದನ ರೆಡ್ಡಿ ಆಕ್ರಮಿಸಿಕೊಂಡಿದ್ದ!

▶ ▶ ▶ 12


ಗಣಿ ಮಾಫಿಯಾ

ಖರ್ಗೆ-ಕುಮಾರಸ್ವಾಮಿಗೆ ಯಾವ ಭೀತಿ?



ಹೀಗೆ ಬಳ್ಳಾರಿ-ಸಂಡೂರು ಭಾಗದ ಒಂದೊಂದೇ ಗಣಿಗಳನ್ನು ರೆಡ್ಡಿ ಆಕ್ರಮಿಸುತ್ತಿರುವುದು ಇದೇ ಮೊದಲಲ್ಲ, ಸದ್ಯ ರೆಡ್ಡಿ ಒಡೆತನದ ಓಬಳಾಪುರಂ ಮೈನಿಂಗ್ ಕಂಪೆನಿಯೇ ದಿನೇಶ್ ಸಿಂಘೀ ಎಂಬಾತನಿಂದ ಕಿತ್ತುಕೊಂಡಿದ್ದು, ಆನಂತರ ಬಳ್ಳಾರಿ ಐರನ್ ಓರ್ ಪ್ರೈ ಲಿ (BIOP) ಎಂಬ ಕಂಪೆನಿಯ ಧಣಿಗೆ ಧಮಕಿ ಹಾಕಿ ಆಂಧ್ರದ ಸಿದ್ಧಾಪುರದ ಆತನ ಗಣಿ ಕಿತ್ತುಕೊಂಡ. ಇದೇ ಮೋದಿಯ ಹೊನ್ನಳ್ಳಿಯ ಬ್ಲ್ಯಾಕ್‌ಗೋಲ್ಡ್ ಮೈನ್ಸ್‌ಗೆ ರೌಡಿ ಶ್ರೀರಾಮುಲುನನ್ನು ನುಗ್ಗಿಸಿದ್ದೇ ಇವತ್ತಿಗೂ ಜಬರ್‌ದಸ್ತಿಯಿಂದ ಅದಿರು ದೋಚುತ್ತಿದ್ದಾನೆ.

ಬಳ್ಳಾರಿ-ಸಂಡೂರು ಭಾಗದ ಯಾರೇ ಗಣಿ ಧಣಿಗಳಾದರೂ ಅವರ ಅದಿರನ್ನು ಜನಾರೆಡ್ಡಿಗೇ ಟ್ರಾನ್ಸ್‌ಪೋರ್ಟ್ ಗುತ್ತಿಗೆ ಕೊಡಬೇಕು. ಇನ್ನೂ ದುರ್ಬಲರಾಗಿದ್ದರೆ ತನಗೇ ರೈಸಿಂಗ್ ಕಾಂಟ್ರ್ಯಾಕ್ಟ್ ಕೊಡಬೇಕು. ಅಂದರೆ ಅದಿರನ್ನು ತನಗೇ ತಾನು ಕೇಳಿದ ರೇಟಿಗೇ ಮಾರಬೇಕು.

ಈಗ ಟಪಾಲ್ ನಾರಾಯಣ ರೆಡ್ಡಿಯ ಗಣಿ ಮೇಲೆ ನಡೆದ ಗೂಂಡಾ ದಾಳಿಯ ವಿರುದ್ಧ ತೋರಣಗಲ್ ಎಸ್.ಐ. ರಮೇಶ್ ದೂರೇನೋ ದಾಖಲಿಸಿದ್ದಾರೆ ನಿಜ. ಆದರೆ ರೆಡ್ಡಿ ಕಂಪೆನಿಯ ಯಾರನ್ನೂ ಈತನಕ ಬಂಧಿಸಿಲ್ಲ, ಬಂದೂಕುಗಳನ್ನೂ ವಶಪಡಿಸಿಕೊಂಡಿಲ್ಲ. ಓರ್ವ ಮಂತ್ರಿಯೇ ಗೂಂಡಾಗಿರಿಗಿಳಿದ ಬಗ್ಗೆ ದೂರು ದಾಖಲಾದರೂ ವಿರೋಧಿ ಸ್ಥಾನಿಕ ಖರ್ಗೆಯಾಗಲಿ, ಜೆಡಿಎಸ್‌ನ ದೇವೇಗೌಡರಾಗಲಿ ಈ ಬಗ್ಗೆ ಚಕಾರವೆತ್ತುತ್ತಿಲ್ಲ ಏಕೆ?

[illegible] ಗಣಿ ರೆಡ್ಡಿಯ ಬಗ್ಗೆ ವಿರೋಧಿ ನಾಯಕರಿಗೇ ಭಯವೇ?

ಅದಿರುಚೋರರ ಕಾನೂನುಬದ್ಧ ಡಕಾಯಿತಿ

ಡಕಾಯಿತನೇ ಪೊಲೀಸ್ ಆಗಿರುವುದಕ್ಕೂ ಅಥವಾ ಪೊಲೀಸರೇ ಡಕಾಯಿತಿ ಮಾಡುವುದಕ್ಕೂ, ಮತ್ತು ಈಗ ಅಕ್ರಮ ಗಣಿಗಾರಿಕೆ ವಿರುದ್ಧ ಬಳ್ಳಾರಿಯ ಜಿಲ್ಲಾಡಳಿತ ಯುದ್ಧ ಘೋಷಿಸಿರುವುದಕ್ಕೂ, ಏನೇನೂ ವ್ಯತ್ಯಾಸವಿಲ್ಲ.

2 ಲಕ್ಷ ಟನ್ ಅದಿರು ವಶ, 150 ಲಾರಿಗಳ ಜಪ್ತಿ, 25 ಕೋಟಿಯ ಮಾಲು ವಶ; ಇತ್ಯಾದಿ ಸುದ್ದಿಗಳು ಪತ್ರಿಕೆಗಳಲ್ಲಿ ಬರುತ್ತಲೇ ಇದೆ. ಬಳ್ಳಾರಿಯ ಉಸ್ತುವಾರಿ ಮಂತ್ರಿ ಜನಾರ್ದನ ರೆಡ್ಡಿಯವರ ಆದೇಶದ ಮೇರೆಗೆ ವಿವಿಧ ಇಲಾಖೆಗಳ 20 ಕ್ಕೂ ಹೆಚ್ಚು ತಂಡಗಳು ಕಾರ್ಯಾಚರಣೆ ನಡೆಸಿ ಅಕ್ರಮ ಗಣಿಗಾರಿಕೆಯ ವಿರುದ್ಧ ಸಮರ ಸಾರಿವೆ ಎಂಬಂತೆ ಪತ್ರಿಕೆಗಳು ಬರೆಯುತ್ತಿವೆ.

ವಾಸ್ತವವೇನೆಂದರೆ ಹೀಗೆ ಬಳ್ಳಾರಿ ಜಿಲ್ಲಾಡಳಿತ ವಶಪಡಿಸಿಕೊಂಡ ಅದಿರೆಲ್ಲವೂ ಪಟ್ಟಾ ಭೂಮಿಯ ರೈತರದ್ದು. ನಿಜಕ್ಕೂ ಅಕ್ರಮ ಗಣಿಗಾರಿಕೆಯ ವಿರುದ್ಧ ಕಾರ್ಯಾಚರಣೆ ಮಾಡುವುದೇ ಆದಲ್ಲಿ ಮೊದಲು ಜನಾರ್ದನ ರೆಡ್ಡಿಯ ಓಬಳಾಪುರಂ ಮೈನಿಂಗ್ ಕಂಪೆನಿ ಸಂಡೂರು, ಬಳ್ಳಾರಿಯ ಆಂಧ್ರದ ಗಡಿಗುಂಟ ಅರಣ್ಯ ಭೂಮಿಯಲ್ಲಿ ನಡೆಸುತ್ತಿರುವ ಹಗಲುದರೋಡೆಯನ್ನು ನಿಲ್ಲಿಸಬೇಕಿತ್ತು. ಆದರೆ ಜಿಲ್ಲಾಡಳಿತ ಹಿಡಿದದ್ದು ಯಾರೆಲ್ಲ ರೆಡ್ಡಿಗೆ ಆತ ಕೇಳಿದ ರೇಟಿಗೆ ಮಾಲು ಕೊಡಲು ಒಪ್ಪಲಿಲ್ಲವೋ, ರೆಡ್ಡಿಯ ಅಧಿಪತ್ಯವನ್ನು ಸಮ್ಮತಿಸಲಿಲ್ಲವೋ ಅಂಥವರನ್ನೇ. ಆಗಸ್ಟ್ 10 ರಿಂದ ಶುರುವಾದ ಕಾರ್ಯಾಚರಣೆ ರೆಡ್ಡಿಯ ಆದೇಶದ ಮೇರೆಗೆ ಆತನ ಎದುರಾಳಿಗಳನ್ನು ಗುರಿಯಾಗಿಟ್ಟೇ ನಡೆದಿದೆ. ಇನ್ನೂ ವಿಚಿತ್ರವೆಂದರೆ ಹೀಗೆ ಜಿಲ್ಲಾಡಳಿತ ವಶಪಡಿಸಿಕೊಂಡ ಅದಿರನ್ನು ಕೋರ್ಟ್ ಆದೇಶಕ್ಕೂ ಕಾಯದೆ ಒಂದೇ ವಾರಕ್ಕೆ ಹರಾಜು ಹಾಕಿ ಅವೆಲ್ಲವನ್ನೂ ಅತೀ ಕಮ್ಮಿ ರೇಟಿಗೆ ರೆಡ್ಡಿಯ ಬಾಮೈದ ಶ್ರೀನಿವಾಸ ರೆಡ್ಡಿಯೇ ಕೊಳ್ಳುವಂತೆ ಮಾಡಲಾಗಿದೆ. ಇಲ್ಲಿ ಕಾಟಾಚಾರಕ್ಕಷ್ಟೇ ಬೇರೆಬೇರೆ ಮೈನಿಂಗ್ ಕಂಪೆನಿಗಳು ಹರಾಜಿನಲ್ಲಿ ಭಾಗವಹಿಸಿದ್ದವೇ ಹೊರತು ಅವೆಲ್ಲವೂ ರೆಡ್ಡಿಯ ಬೇನಾಮಿ ಕಂಪೆನಿಗಳೆ. ಕೆಲ ಕಂಪೆನಿಗಳು ಕಳಪೆ ಮಾಲೆಂದು ಹರಾಜಿನಿಂದ ಹಿಂದೆ ಸರಿದರೆ ಮತ್ತೆ ಕೆಲವು ರೆಡ್ಡಿಯ ಬಾಮೈದ ಕೂಗಿದ ಅರ್ಧ ರೇಟಿಗೆ ಕೂಗಿದವು. ಮಾರುಕಟ್ಟೆ ದರದ ಅರ್ಧ ರೇಟಿಗೆ ರೆಡ್ಡಿಯ ಭಾಮೈದ ಅಷ್ಟೂ ಅದಿರನ್ನು ಲಪಟಾಯಿಸಿಬಿಟ್ಟ.



ಇದೊಂದು ರೀತಿಯಲ್ಲಿ ಗಣಿ ರೆಡ್ಡಿಯ ಸರ್ಕಾರಿ ರಾಬರಿಯಿದ್ದಂತೆ. ಯಾರೆಲ್ಲ ತಾನು ಕೇಳಿದ ರೇಟಿಗೆ ಮಾಲು ಕೊಡುತ್ತಿಲ್ಲವೋ ಅಂಥವರ ಸೊತ್ತನ್ನು ಪೊಲೀಸರ ಮೂಲಕ ಕಿತ್ತುಕೊಳ್ಳುವುದು?

ಆದರೆ ಕರ್ನಾಟಕದ ಗಡಿಯ ನಕಾಶೆಯನ್ನೇ ತಿದ್ದಿ ಆಂಧ್ರದ ಮೂಲಕ ಇವತ್ತಿಗೂ ಕರ್ನಾಟಕದ ಭೂನಿಧಿಯನ್ನು ದೋಚುತ್ತಿರುವ ಜನಾರ್ದನ ರೆಡ್ಡಿಯ ಹಗಲು ದರೋಡೆ ಇವತ್ತಿಗೂ ನಿರಾತಂಕವಾಗಿ ನಡೆಯುತ್ತಲೇ ಇದೆ. ಇತ್ತ ಬಳ್ಳಾರಿ ಜಿಲ್ಲೆಯಲ್ಲಿ ಒಂದೊಂದೇ ಅದಿರು ಲಾರಿಗಳನ್ನು ಹಿಡಿದು ಜಪ್ತಿ ಮಾಡಿಕೊಳ್ಳುತ್ತಿದ್ದರೆ ಮತ್ತೊಂದೆಡೆ ಆಂಧ್ರದ ನಕಲಿ ಪರ್ಮಿಟ್ಟಿನ ಆಧಾರದ ಮೇಲೆ ಆಂಧ್ರದ ರಿಜಿಸ್ಟ್ರೇಷನ್ ನಂಬರಿನ ಲಾರಿಗಳಲ್ಲಿ ಗಣಿರೆಡ್ಡಿಯ ಅದಿರು ಸಾಗಾಣಿಕೆ ಎಗ್ಗಿಲ್ಲದೇ ಸಾಗಿದೆ. ಹೆಸರಿಗಷ್ಟೇ ಆಂಧ್ರದ ಲಾರಿ, ಆಂಧ್ರದ ಪರ್ಮಿಟ್ಟು, ಮಾಲು ಮಾತ್ರ ಕರ್ನಾಟಕದ ಕಾಡು ದೋಚಿದ್ದು!

ಹೀಗೆ ರಾಜಾರೋಷವಾಗಿ ನಡೆಯುತ್ತಿರುವ ಜನಾರ್ದನ ರೆಡ್ಡಿಯ ಅದಿರು ದರೋಡೆಗೆ ಪೂರಕವಾಗೇ ಅನುಕೂಲಸ್ಥ ಅಧಿಕಾರಿಗಳು ಬಳ್ಳಾರಿಗೆ ನೇಮಕಗೊಂಡಿದ್ದಾರೆ. ಪೊಲೀಸ್ ವರಿಷ್ಠಾಧಿಕಾರಿ ಸೀಮಂತ ಕುಮಾರ್ ಸಿಂಗ್ ಹೇಳಿಕೇಳಿ ಗಣಿ ರೆಡ್ಡಿಯ ಪರಮಾಪ್ತ, ಕನ್ಸರ್‌ವೇಟರ್ ಆಫ್ ಫಾರೆಸ್ಟ್ (CF) ಮನೋಜ್‌ಕುಮಾರ್ ಶುಕ್ಲಾ, ಡಿಸಿಎಫ್ ಮುತ್ತಯ್ಯ, ಎಸಿಎಫ್ ಶ್ರೀನಿವಾಸಮೂರ್ತಿ, ರೇಂಜರ್ ಲೋಕನಾಥ್ ರೆಡ್ಡಿ ಎಲ್ಲರೂ ಗಣಿರೆಡ್ಡಿಯ ಕಾಲಿಗೆ ಬಿದ್ದೇ ಬಳ್ಳಾರಿ ಅರಣ್ಯಕ್ಕೆ ವಕ್ಕರಿಸಿದ ಅರಣ್ಯಾಧಿಕಾರಿಗಳೆ. ಹಿಂದಿದ್ದ ಡಿಸಿಎಫ್ ರಾಜಶೇಖರ್‌ರೇ ಸ್ವತಃ ವರದಿ ಬರೆದುಕೊಟ್ಟು ಗಣಿರೆಡ್ಡಿ ಕರ್ನಾಟಕದ ಗಡಿಯನ್ನೇ ಬದಲಿಸಿದ್ದನ್ನು ಬಯಲಿಗೆಳೆದಿದ್ದಾರೆ.

ಆದರೆ ರೆಡ್ಡಿ ಕೃಪಾವಂತ ಅರಣ್ಯಾಧಿಕಾರಿಗಳಿಗೆ ತಮ್ಮದೇ ಇಲಾಖೆಯ ಅಧಿಕಾರಿಯೊಬ್ಬ ಕೊಟ್ಟ ವರದಿಯ ಮೇಲೆ ನಂಬಿಕೆಯಿಲ್ಲ. ನಿಜಕ್ಕೂ ಗಣಿರೆಡ್ಡಿ ಗಡಿಯ ನಕಾಶೆಯನ್ನೇ ತಿದ್ದಿದ್ದಾನಾ ಇಲ್ಲವಾ ಎಂಬುದನ್ನು ಜಂಟಿ ಸರ್ವೆ ಮಾಡಿಯೇ ತಿಳಿದುಕೊಳ್ಳುತ್ತಾರಂತೆ. ಕಂದಾಯ ಇಲಾಖೆಗೆ ಗಣಿ ರೆಡ್ಡಿಯ ಅಣ್ಣನೇ ಮಂತ್ರಿ, ಆತನ ಇಲಾಖೆಯ ಅಧಿಕಾರಿಗಳು ಗಣಿ ರೆಡ್ಡಿ ಮಾಡಿದ ದುರಾಚಾರವನ್ನು ಹೇಗೆ ತಾನೇ ಬಯಲಿಗೆಳೆಯಲು ಸಾಧ್ಯ?

ಇಂಥ ಪರಿಸ್ಥಿತಿಯಲ್ಲೇ ರೆಡ್ಡಿ ಗ್ಯಾಂಗ್ ಟಪಾಲ್ ನಾರಾಯಣ ರೆಡ್ಡಿಯ ಗಣಿ ಮೇಲೆ ದಾಳಿ ನಡೆಸಿದೆ. ರಿವಾಲ್ವರ್, ಬಂದೂಕು ಸಮೇತ ದಂಡೆತ್ತಿ ಹೋದ ರೆಡ್ಡಿ ಬಂಟರು ಟಪಾಲ್ ನಾರಾಯಣ ರೆಡ್ಡಿಯ ಸಿಬ್ಬಂದಿಯ ಹತ್ಯೆಗೆ ಯತ್ನಿಸಿದ್ದಾರೆ. ಹೀಗಿದ್ದೂ ತೆಪ್ಪಗಿರುವ ಜಿಲ್ಲಾಡಳಿತ ಈಗ ಟಪಾಲ್ ನಾರಾಯಣ ರೆಡ್ಡಿ ಮತ್ತು ಆತನ ಮಕ್ಕಳದೇ ತಪ್ಪು, ಅವರು ದುರುದ್ದೇಶದಿಂದ ಗಣಿ ರೆಡ್ಡಿಯ ವಿರುದ್ಧ ದೂರು ಕೊಟ್ಟಿದ್ದಾರೆಂದು ಇಡೀ ಪ್ರಕರಣವನ್ನೇ ಮುಚ್ಚಿಹಾಕಲು ಹವಣಿಸುತ್ತಿದೆ.

ಇನ್ನೂ ದುರಂತವೆಂದರೆ ರೆಡ್ಡಿಯ ಗಣಿ ಲೂಟಿಯ ವಿರುದ್ಧ ದೂರು ಕೊಡಲು ಹೋದ ಗಣೇಶ್ ಮತ್ತು ಏಕಾಂಬರಂಗೆ (ಟಪಾಲ್ ನಾರಾಯಣ ರೆಡ್ಡಿಯ ಮಕ್ಕಳು) ಅರಣ್ಯಾಧಿಕಾರಿಗಳೇ 'ಸುಮ್ಮನೇ ಯಾಕೆ ಗಲಾಟೆ ಮಾಡ್ತೀರಿ ಮಿನಿಸ್ಟರ್ (ಜನಾರ್ದನ್ ರೆಡ್ಡಿ) ಹತ್ರ ಮಾತಾಡಿಕೊಂಡು ಪ್ರಾಬ್ಲಂ ಸರಿ ಮಾಡ್ಕೊಳ್ಳಿ.... ಎಂದು ಧಮಕಿ ಹಾಕುತ್ತಾರೆ.

ಬಳ್ಳಾರಿಯಲ್ಲಿ ಕೋರ್ಟು, ಕಾನೂನು; ಸಂವಿಧಾನಕ್ಕೆ ಏನಾದರೂ ಬೆಲೆಯುಂಟಾ ರೆಡ್ಡಿ ರಕ್ಕಸರ ಆಧಿಪತ್ಯವನ್ನು ಒಪ್ಪಿಕೊಳ್ಳದೇ ಉಳಿಗಾಲವುಂಟಾ? ಏಕೆ ಜೆಡಿಎಸ್ ಮತ್ತು ಕಾಂಗ್ರೆಸ್ ಕಂಡೂಕಾಣದಂತೆ ನಿಷ್ಕ್ರಿಯವಾಗಿವೆ.

ಸಾಕ್ಷಿ ನಾಶ ಮಾಡುವ COD

ಪದ್ಮಪ್ರಿಯಾ ಆತ್ಮಹತ್ಯೆ ಪ್ರಕರಣ ಸಿಬಿಐಗೆ ವಹಿಸುವಂತೆ ವಿನೆಲ್ಲಾ ಒತ್ತಡ ಬಂದರೂ ಜಗ್ಗದ ಯಡ್ಡಿ ಸರ್ಕಾರ ತನಿಖೆಯನ್ನು COD ಗೆ ವಹಿಸಿದೆ. ಆದರೆ ಈ COD ಯನ್ನು ಜನ ಎಷ್ಟರಮಟ್ಟಿಗೆ ನಂಬಬಹುದು?

ಯಾಕೆಂದರೆ ತೀರಾ ಇತ್ತೀಚೆಗೆ ಆದಿ ಉಡುಪಿ ಬೆತ್ತಲೆ ಪ್ರಕರಣದ ತೀರ್ಪು ಬಂತಲ್ಲ, ಅದರಲ್ಲಿ ಆರೋಪಿಗಳಾಗಿದ್ದ ಚೆಡ್ಡಿಗಳೆಲ್ಲಾ ಈಗ ನಿರ್ದೋಷಿಗಳೆಂದು ಬಿಡುಗಡೆಯಾಗಿದ್ದಾರೆ.

ಅದಕ್ಕೆ ಕಾರಣ ಏನು ಗೊತ್ತೆ?

ಸಾಕ್ಷ್ಯಗಳ ಕೊರತೆ!

ಮತ್ತು ಇದರ ತನಿಖೆ ನಡೆಸಿದ್ದೂ COD ಪೊಲೀಸರೆ.

ಹಾಜಬ್ಬ-ಹಸನಬ್ಬಾ ಮೇಲಿನ ಬೆತ್ತಲೆ ದೌರ್ಜನ್ಯದ ತನಿಖೆ ಶುರು ಮಾಡಿದ COD ಗಳು ಅವತ್ತಿನ ಘಟನೆಯ ಫೋಟೋ ನೆಗೆಟಿವ್‌ಗಳನ್ನು ಸ್ಥಳೀಯ ಪತ್ರಕರ್ತರಿಂದಲೂ ಹಾಗೂ ಫೋಟೋಗ್ರಾಫರ್‌ಗಳಿಂದಲೂ ಸಂಗ್ರಹಿಸಿ ತಮ್ಮ ಬಳಿ ಇಟ್ಟುಕೊಂಡಿದ್ದರು. ಆದರೆ ವಿಚಾರಣೆ ನಡೆದಾಗ 'ತಮ್ಮ ಬಳಿ ನೆಗೆಟಿವ್ಸ್ ಇಲ್ಲವೆಂತಲೂ, ಕಳೆದುಹೋದವೆಂದೂ' ಹೇಳಿಕೆ ಕೊಟ್ಟರು. ಆರೋಪಿಗಳ ಖುಲಾಸೆಗೆ COD ಪೊಲೀಸರು ಸಹಕರಿಸಿದ ರೀತಿ ಇದು. ಇಂತಹ ದಕ್ಷತೆ (!) ಇರುವ COD ಈ ತಕ್ಷಣದಲ್ಲಿ ಒಂದು ಸ್ವತಂತ್ರ ತನಿಖಾ ಸಂಸ್ಥೆ ರೀತಿ ಇರದೆ ಆಳುವ ಬಿಜೆಪಿಗಳ ಇಚ್ಛಾನುಸಾರಕ್ಕೆ ತಕ್ಕಂತೆ ವರ್ತಿಸುವ ಅಪಾಯ ಇದ್ದೇ ಇದೆ.

ಪದ್ಮಪ್ರಿಯಾ ಸಾವಿನ ಅಸಲಿ ಹೊಣೆಗಾರರಿಗೆ COD ಬಿಸಿ ತಟ್ಟುವುದು ಸುಲಭ ಸಾಧ್ಯವಾದ ಮಾತಲ್ಲ ಬಿಡಿ.

ಪದ್ಮಪ್ರಿಯಾ ಜೀವ ತ್ಯಜಿಸಿ ಇಂದಿಗೆ 75 ದಿನ ಕಳೆಯಿತು. ಅದಕ್ಕೆ ಆಕೆಯ ಗಂಡ ಉಡುಪಿಯ ಬಿಜೆಪಿ ಶಾಸಕ ರಘುಪತಿ ಭಟ್ ಎಷ್ಟು ಕಾರಣವೆಂಬ ಪ್ರಶ್ನೆಯನ್ನು ಅತ್ಯಂತ ಜಾಣತನದಿಂದ ಬದಿಗೆ ಸರಿಸಿಬಿಡಲಾಗಿದೆ. ಹಾಗೆ ಕುಟುಂಬದ ಗೆಳೆಯ ಅತುಲ್ ರಾವ್ ಪೊಲೀಸ್ ಕಸ್ಟಡಿಯಲ್ಲೇ ಇರುವಂತೆ ಸರ್ಕಾರ ಹಾಗೂ ಪೊಲೀಸರು ನೋಡಿಕೊಳ್ಳುತ್ತಿದ್ದಾರೆ.

ಅದರ ಮುಂದುವರೆದ ಭಾಗವಾಗಿ ಮೊನ್ನೆ ಆಗಸ್ಟ್ 22ರ ಗುರುವಾರ COD ಪೊಲೀಸರು ಉಡುಪಿಯ ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ತರಾತುರಿಯ ಚಾರ್ಜ್‌ಶೀಟ್ ಒಂದನ್ನು ಹಾಕಿದ್ದಾರೆ. ವಿಶೇಷವೆಂದರೆ ಅನಾಮತ್ತು 300 ಪುಟಗಳ 55 ಸಾಕ್ಷಿಗಳನ್ನು ಹೆಸರಿಸಿರುವ ಈ ಚಾರ್ಜ್‌ಶೀಟ್ ಅನ್ನು ಸಿಓಡಿ ಪೊಲೀಸರು ಒಂದು interim chargesheet (ಮಧ್ಯಂತರ ಆರೋಪ ಪಟ್ಟಿ) ಎಂದು ಹೇಳಿ ಮತ್ತೊಂದು ಅಡಿಷನಲ್ ಚಾರ್ಜ್‌ಶೀಟ್ ಹಾಕಲು ಕೋರ್ಟ್ ಸಮಯಾವಕಾಶ ಬೇಕೆಂದು ಕೋರಿರುವುದು. ಆದರೆ ಕೋರ್ಟು ಇದಕ್ಕೆ ವಿಶೇಷ ಸಮ್ಮತಿ ಕೊಡದೆ 'ಕಾನೂನಿನಲ್ಲಿ ಏನು ಅವಕಾಶವಿದೆಯೋ, ಅದರಂತೆ ಮಾಡಿ' ಎಂದಷ್ಟೇ ಹೇಳಿ ಸುಮ್ಮನಾಗಿದೆ.

ಮೇಲ್ನೋಟಕ್ಕೆ ಸಹಜ ಕಾನೂನಿನ ವ್ಯವಹಾರದಂತೆ ಭಾಸವಾಗಿರುವ ಪೊಲೀಸರ ಈ ಕೆಲಸದ ಹಿಂದೆ ಒಂದೆರಡು ದುರುದ್ದೇಶಗಳಿರುವಂತೆ ಕಾಣುತ್ತಿದೆ.

ಜೂನ್ 24 ರಂದು ಅರೆಸ್ಟಾಗಿ ಪೊಲೀಸರ ವಶದಲ್ಲೇ ಇದ್ದ ಅತುಲ್ 60 ದಿನಗಳ ನಂತರ ಅಂದರೆ ಆಗಸ್ಟ್ 24 ರ ನಂತರ ತಂತಾನೇ ಬೇಲ್ ಪಡೆದು ಹೊರಬರುವ ಒಂದು ಛಾನ್ಸಿತ್ತು. ಅಷ್ಟರೊಳಗೆ ಚಾರ್ಜ್‌ಶೀಟ್ ಸಲ್ಲಿಸದಿದ್ದರೆ ಅತುಲ್‌ಗೆ ಸಿಗುತ್ತಿದ್ದ ಅವಕಾಶ ಅದು. ಇನ್ನೊಂದು ವಿಚಾರ ಏನೆಂದರೆ ಅಡಿಷನಲ್ ಚಾರ್ಜ್‌ಶೀಟ್ ಹಾಕಲು ಕಾಲಾವಕಾಶ ಕೇಳಿರುವ ಪೊಲೀಸರ ಮೂಲ ಉದ್ದೇಶವೇ ಹೆಚ್ಚಿನ ತನಿಖೆಯ ನೆಪದಲ್ಲಿ ಅತುಲ್‌ಗೆ ಯಾವುದೇ ರೀತಿಯೂ ಜಾಮೀನು ಸಿಗದಂತೆ ನೋಡಿಕೊಳ್ಳುವುದೇ ಆಗಿತ್ತು.

ಮೊದಲಿಂದಲೂ ರಾಜ್ಯ ಪೊಲೀಸರು ಹಾಗೂ ಸರ್ಕಾರಿ ವಕೀಲರು ಅತುಲ್ ಜಾಮೀನಿನ ಅರ್ಜಿ ವಿಚಾರಣೆಗೆ ಬಂದಾಗಲೆಲ್ಲಾ ಒಂದು ಸಾರಿ "ಅತುಲ್ ಜೀವಕ್ಕೆ ಆಪತ್ತಿದೆ" ಎಂದರೆ ಇನ್ನೊಮ್ಮೆ "ಸಾಕ್ಷನಾಶ ಮಾಡುವ ಸಾಧ್ಯತೆಯಿದೆ" ಎಂದೆಲ್ಲಾ ವಾದಿಸುತ್ತಾ ಬಂದಿದ್ದರು.

ಅಂತಿಮವಾಗಿ ಉಡುಪಿ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ತಿರಸ್ಕೃತವಾದ ನಂತರ ಅತುಲ್ ವಕೀಲರು ಹೈಕೋರ್ಟಿಗೆ ಬಂದರು. ಆದರೆ ಈ ಪ್ರಕರಣ ಇನ್ನೊಂದು ನಾಟಕೀಯ ತಿರುವು ಪಡೆದುಕೊಂಡಿದೆ.

ನ್ಯಾಯಮೂರ್ತಿ ಮೋಹನ ಶಾಂತನ ಗೌಡರರವರ ಬೆಂಚ್ ಮುಂದೆ ಒಂದೆರಡು ಬಾರಿ ಹಿಯರಿಂಗ್ ನಡೆದ ನಂತರ ಮೊನ್ನೆ ಅದೇ ನ್ಯಾಯಮೂರ್ತಿಗಳು 'Not before me' ಎಂದು ಷರಾ ಬರೆದು ಮುಖ್ಯ ನ್ಯಾಯಮೂರ್ತಿಗಳ ಬಳಿಗೆ ಪ್ರಕರಣ ಕಳಿಸಿಬಿಟ್ಟಿದ್ದಾರೆ! ಅಂದರೆ ಈ ಜಾಮೀನು ಅರ್ಜಿಯ ವಿಚಾರಣೆಯನ್ನು ತಾನು ನಡೆಸಲಾರೆ. ಬೇರೊಬ್ಬರಿಗೆ ಒಪ್ಪಿಸಬಹುದು ಎಂಬ ನಿಲುವದು. ಯಾವುದಾದರೂ ರಾಜಕೀಯ ಒತ್ತಡದಿಂದ ನೊಂದು ಮಾನ್ಯ ನ್ಯಾಯಮೂರ್ತಿಗಳು ಈ ನಿಲುವು ತಳೆದುಕೊಂಡಿರಬಹುದಾ ಎಂಬ ಪ್ರಶ್ನೆ ಈಗ ಜನಸಾಮಾನ್ಯರಲ್ಲಿ ಹಾಗೂ ವಕೀಲ ಸಮುದಾಯದ ನಡುವೆ ಕೇಳಿಬರುತ್ತಿದೆ.

ಚಾರ್ಜ್‌ಶೀಟಿನಲ್ಲೇನಿದೆ

ಪದ್ಮಪ್ರಿಯರ ಆತ್ಮಹತ್ಯೆಗೆ ಅತುಲ್‌ರಾವ್ ಪ್ರಚೋದನೆ ಹಾಗೂ ಸಹಕಾರ ನೀಡಿದ್ದಾನೆಂದು ಆರೋಪಿಸಿದ್ದ ಮಣಿಪಾಲ ಪೊಲೀಸರು ಕೊನೆಗೆ ಶಾಸಕ ಭಟ್ಟನಿಂದಲೇ ಒಂದು ಕಂಪ್ಲೆಂಟ್ ಬರೆಸಿಕೊಂಡು ಕಿಡ್ನ್ಯಾಪ್ ಮತ್ತು ಅಬೇಟಿಂಗ್ ಸೆಕ್ಷನ್‌ಗಳಡಿ ಕೇಸು ದಾಖಲಿಸಿಕೊಂಡಿದ್ದರು. ವಿಪರ್ಯಾಸ ಏನೆಂದರೆ ಜೂನ್ 24 ರಂದು ಅತುಲ್‌ನನ್ನು ಬಂಧಿಸುವವರೆಗೂ – ಅಂದರೆ ಜೂನ್ 14 ರಿಂದ ಜೂನ್ 24 ರವರೆಗೂ–ಅತುಲ್ ಪೊಲೀಸರ ಜೊತೆಗೇ ಇದ್ದ. ಮಂಗಳೂರು ಡಿಐಜಿ ಪ್ರಸಾದ್‌ರೇ 'ಅತುಲ್ ತನಿಖೆಯ ಸಹಾಯಕ್ಕಾಗಿ ನಮ್ಮ ಜೊತೆ ಇದ್ದಾನೆ. ಅವನ ಮೇಲೆ ಯಾವ ಆರೋಪಗಳೂ ಇಲ್ಲ' ಎಂದು ಪತ್ರಿಕಾಗೋಷ್ಠಿಯಲ್ಲೇ ಸ್ಪಷ್ಟವಾಗಿ ಹೇಳಿದ್ದರು.

ಹಾಗಿದ್ದ ಮೇಲೆ ಅತುಲ್ ಈಗ ಆರೋಪಿ ಹೇಗಾದ?

ಪದ್ಮಪ್ರಿಯ ಸಂಸಾರ ಮಾಡಿಕೊಂಡಿದ್ದದ್ದು ರಘುಪತಿ ಭಟ್ಟನ ಜೊತೆಗೆ. ಆಕೆಗೆ ಜಗಳವಿದ್ದದ್ದೂ ಭಟ್ಟನೊಂದಿಗೆ ಮಾತ್ರ. ಆಕೆ ಮನೆ ಬಿಟ್ಟು ಹೋದದ್ದು ಕೊನೆಗೆ ಆತ್ಮಹತ್ಯೆಗೆ ಶರಣಾಗಿದ್ದರ ಹಿಂದೆ ಭಟ್ಟನ ನೆರಳಿದೆಯಲ್ಲವೆ? ಸಿಓಡಿ ಪೊಲೀಸರು ಈ ಪ್ರಶ್ನೆಗಳನ್ನು ಹಾಕಿಕೊಂಡರಾ? ಮುಂದೆ ತನಿಖೆಯನ್ನು ಆ ದಿಕ್ಕಿನಲ್ಲೂ ನಡೆಸುತ್ತಾರ ಎಂಬುದನ್ನು ಕಾದು ನೋಡಬೇಕಿದೆ.

ಸದ್ಯಕ್ಕೆ ಸಿಓಡಿ ಹಾಕಿರುವ 300 ಪುಟಗಳ ಚಾರ್ಜ್‌ಶೀಟಿನಲ್ಲಿ ನಾಲ್ಕು ಮುಖ್ಯ ಅಂಶಗಳಿವೆ.

ಐಪಿಸಿ ಸೆಕ್ಷನ್ 417 ರಂತೆ ಚೀಟಿಂಗ್ ಅರ್ಥಾತ್ ವಂಚನೆ, ಸೆಕ್ಷನ್ 465 ರಂತೆ ಫೋರ್ಜರಿ, ಜೊತೆಗೆ 468 ಹಾಗೂ 471 ನ್ನು ಕಾಣಿಸಿದ್ದಾರೆ. ಇದರಲ್ಲಿ 468 ಅಂದರೆ ವಂಚಿಸಲು ಫೋರ್ಜರಿ ಮಾಡಿರುವುದು ಹಾಗೂ 471 ರ ಪ್ರಕಾರ ಫೋರ್ಜರಿ ದಾಖಲೆ ಬಳಕೆ ಮಾಡಿರುವ ಆರೋಪಗಳವು.

ಜೂನ್ 11 ರಂದು ಉಡುಪಿಯಿಂದ ಮೂಲ್ಕಿಯ ತವರುಮನೆಗೆ ಹೊರಟಿದ್ದ ಪದ್ಮಪ್ರಿಯರನ್ನು ಈ ಅತುಲ್ ಕುಂಜೂರುಗಿರಿ ಬಳಿ ಬೇರೊಂದು ಸ್ಕಾರ್ಪಿಯೋ ಕಾರಿಗೆ ಹತ್ತಿಸಿ ಗೋವಾಗೆ ಕರೆದೊಯ್ದು ಬೇರೆ ಹೆಸರಿನಲ್ಲಿ ವಿಮಾನದ ಮೂಲಕ ದೆಹಲಿಗೆ ಕರೆದೊಯ್ದಿದ್ದ ಎಂಬುದೇ ಈ ಆರೋಪಗಳ ಸಾರಾಂಶ.

ಸಿಓಡಿ ಡಿವೈಎಸ್‌ಪಿಗಳಾದ ಗೋವಿಂದಯ್ಯ, ಸುಭಾಷ್‌ಚಂದ್ರ, ಹಾಗೂ ಇನ್ಸ್‌ಪೆಕ್ಟರ್ [illegible] ತನಿಖಾ ತಂಡ ಅತುಲ್ ಮೇಲೆ ಫೋರ್ಜರಿ ಹಾಗೂ ಚೀಟಿಂಗ್ ಚಾರ್ಜ್‌ಶೀಟ್ ಹಾಕಿದೆ ಸರಿ. ಆದರೆ ಪತ್ರಿಕೆಗಳು [illegible] ಸಿಓಡಿ. ಆದರೆ ಪದ್ಮಪ್ರಿಯ ಕಾಣೆಯಾದ [illegible] ದಿನ ಕಳೆದರೂ ಗಂಡ ರಘುಪತಿ ಭಟ್ ಆ ಬಗ್ಗೆ ಗಮನವನ್ನೇ [illegible] ಯಾಕೆ ಎಂದೇನಾದರೂ ಅವರು ಪ್ರಶ್ನಿಸಿದ್ದಾರಾ?

ಗೃಹ ಸಚಿವ ವಿ.ಎಸ್. ಆಚಾರ್ಯ 'ಪದ್ಮಪ್ರಿಯರ ಸುಳಿವು ಸಿಕ್ಕಿದೆ. ಅವರು ಸುರಕ್ಷಿತವಾಗಿ ಮರಳಿ ಬರುತ್ತಾರೆ' ಎಂದು ಹೇಳಿದ ಮೇಲೂ ಆಕೆಯ ಬದಲಾಗಿ ಬರೀ ಹೆಣ ಬಂತಲ್ಲಾ ಆ ನಡುವಿನ ಸಮಯದಲ್ಲಿ ಯಾರ್‍ಯಾರು ಎಲ್ಲಿ ಏನೇನು ಕೈವಾಡ ನಡೆಸಿರಬಹುದೆಂದು ತನಿಖೆ ಮಾಡಲಿಲ್ಲ ಯಾಕೆ?

ಪದ್ಮಪ್ರಿಯ ಮಾಲೂರಿನಲ್ಲಿ ಸಿಕ್ಕಳೆಂದು ಕರಾವಳಿ ಪೊಲೀಸರು ಯಾವ ಆಧಾರದಲ್ಲಿ ಹೇಳಿದ್ದರು? ಈ ಬಗ್ಗೆ ಸಿಓಡಿ ಯಾಕೆ ತನಿಖೆ ಮಾಡಲಿಲ್ಲ.

ಜೂನ್ 24 ರಂದು ಅರೆಸ್ಟಾದ ಅತುಲ್ ಜಾಮೀನಿಗೆ ಕೋರಿದಾಗಲೆಲ್ಲಾ ಸ್ಥಳೀಯ ಸರ್ಕಾರಿ ವಕೀಲರಾದ ಜೆ.ವಿ. ನಾಯಕ್ ಹಾಗೂ ಮಣಿಪಾಲ ಇನ್ಸ್‌ಪೆಕ್ಟರ್ ಬಿ.ಜಿ. ಆಚಾರ್ 'ಆತನಿಗೆ ಪ್ರಾಣಾಪಾಯವಿದೆ, ಜಾಮೀನು ನೀಡಕೂಡದೆಂದು' ಪ್ರತಿಪಾದಿಸಿದ್ದರು. ಅದು ನಿಜವೆಂದಾದರೆ ಅತುಲ್ ಪ್ರಾಣಕ್ಕೆ ಯಾರಿಂದ ಆಪತ್ತು ಇತ್ತು?

ಅತುಲ್‌ಗೆ ಈಗ ಶತ್ರು ಅಂತ ಇದ್ದರೆ ಅದು ರಘುಪತಿ ಭಟ್ಟ ಮಾತ್ರ. ಆ ದಿಕ್ಕಿನಲ್ಲಿ ಸಿಓಡಿ ಪರಿಶೀಲಿಸಿದರಾ?

ಗೊತ್ತಿಲ್ಲ!

ಪದ್ಮಪ್ರಿಯಾ ದೆಹಲಿಗೆ ತಲುಪಿದ ಮರುದಿನವೇ ಅಂದರೆ ಜೂನ್ 12 ರಂದೇ ಒಂದು ಮಾರುತಿ ವ್ಯಾಗನ್‌ಆರ್ ಕಾರ್ ಖರೀದಿಸಿದ್ದರು. ದೆಹಲಿಯ ಮಂಜಿತ್ ಮೋಟಾರ್ಸ್ ಮೂಲಕ ರಿಜಿಸ್ಟರ್ ಆದ DL 13 CD 6949 ನಂಬರಿನ ಆ ಕಾರು ಮೊದಲೇ ಬುಕ್ ಆಗಿರುವ ಸಾಧ್ಯತೆ ಇದೆ. ಆಕೆಗೆ ಅಷ್ಟು ಹಣ ಯಾವ ಮೂಲದಿಂದ ಬಂತೆಂಬುದೂ ಮುಖ್ಯವಲ್ಲವೆ?

> ಪದ್ಮಪ್ರಿಯ ಜೀವ ತ್ಯಜಿಸಿ ಇಂದಿಗೆ 75 ದಿನ ಕಳೆಯಿತು. ಅದಕ್ಕೆ ಆಕೆಯ ಗಂಡ ಉಡುಪಿಯ ಬಿಜೆಪಿ ಶಾಸಕ ರಘುಪತಿ ಭಟ್ ಎಷ್ಟು ಕಾರಣವೆಂಬ ಪ್ರಶ್ನೆಯನ್ನು ಅತ್ಯಂತ ಜಾಣತನದಿಂದ ಬದಿಗೆ ಸರಿಸಿಬಿಡಲಾಗಿದೆ. ಪದ್ಮಪ್ರಿಯ ಸಂಸಾರ ಮಾಡಿಕೊಂಡಿದ್ದದ್ದು ರಘುಪತಿ ಭಟ್ಟನ ಜೊತೆಗೆ. ಆಕೆಗೆ ಜಗಳವಿದ್ದದ್ದೂ ಭಟ್ಟನೊಂದಿಗೆ ಮಾತ್ರ. ಆಕೆ ಮನೆ ಬಿಟ್ಟು ಹೋದದ್ದು ಕೊನೆಗೆ ಆತ್ಮಹತ್ಯೆಗೆ ಶರಣಾಗಿದ್ದರ ಹಿಂದೆ ಭಟ್ಟನ ನೆರಳಿದೆಯಲ್ಲವೆ? ಸಿಓಡಿ ಪೊಲೀಸರು ಈ ಪ್ರಶ್ನೆಗಳನ್ನು ಹಾಕಿಕೊಂಡರಾ? ಮುಂದೆ ತನಿಖೆಯನ್ನು ಆ [illegible] ನಡೆಸುತ್ತಾರ?



ಸಿಓಡಿ ಪೊಲೀಸರ ಕತೆ ಇದಾದರೆ ಅದಕ್ಕೂ ಮುನ್ನ ಮಂಗಳೂರು ಡಿಐಜಿ ಪ್ರಸಾದ್ ಮುತ್ತುವರ ಪೊಲೀಸರ ತಂಡ ಅತುಲ್ ಮತ್ತವನ ಕುಟುಂಬಕ್ಕೆ ನಾಕಷ್ಟು ಕಿರುಕುಳ ಕೊಟ್ಟಿದ್ದರು.

ಈ ಪ್ರಕರಣ ಕೋರ್ಟ್ ಎದುರು ಬರುವ ಮುನ್ನ ಇಡೀ ಪೊಲೀಸ್ ಇಲಾಖೆ ಶಾಸಕ ರಘುಪತಿ ಭಟ್ಟನ ಕೈಗೊಂಬೆಯಂತೆ ವರ್ತಿಸುತ್ತಿತ್ತು.

ಜೂನ್ 14 ರಿಂದಲೇ ಅತುಲ್‌ನನ್ನು ಎತ್ತಾಕಿಕೊಂಡು ಹೋದ ಪೊಲೀಸರು ತಮಗೆ ಬೇಕಾದ ಎಲ್ಲಾ ಮಾಹಿತಿ ಪಡೆಕೊಂಡ ಮೇಲೂ ಅವನನ್ನು ಬಿಟ್ಟು ಕಳಿಸಿರಲಿಲ್ಲ. ಇದರಿಂದ ಗಾಬರಿಯಾದ ಅತುಲ್ ಪತ್ನಿ ಮೀರ ಕೊನೆಗೆ ಹೈಕೋರ್ಟಿನಲ್ಲಿ ಹೇಬಿಯಾಸ್ ಕಾರ್ಪಸ್ ಅರ್ಜಿ ಹಾಕಿದ ಕೂಡಲೆ ಜಾಗೃತರಾದ ಪ್ರಸಾದ್ 'ಅತುಲ್ ನಮ್ಮ ಜೊತೆಲೆ ಇದ್ದಾನೆ, ಅರ್ಜಿ ವಾಪಸ್ ತಗೊಳ್ಳಿ. ಈಗಲೇ ಅತುಲ್‌ನ ಬಿಟ್ಟು ಕಳಿಸುತ್ತೇವೆ' ಅಂದಿದ್ದರು. ಪೊಲೀಸರ ಮಾತನ್ನು ನಂಬಿದ ಮೀರಾ ಅದೇರೀತಿ ನಡೆದುಕೊಂಡ ನಂತರ ಪ್ಲೇಟ್ ಬದಲಾಯಿಸಿದ ಪೊಲೀಸರು ಕೊನೆಗೆ ಅತುಲ್‌ನನ್ನೇ ಫಿಟ್ ಮಾಡಿದ್ದಾರೆ.


ಅತುಲ್ ಕುಟುಂಬದವರು ಕೇಳದಿದ್ದರೂ ದೊಡ್ಡತನಗುಣ್ಣಯ ಅತುಲ್ ಮನೆಗೆ ಗಂಗೊಳ್ಳಿ ಸಬ್‌ಇನ್ಸ್‌ಪೆಕ್ಟರ್ ತಿಮ್ಮರಾಜನನ್ನು ಒಂದು KSRP ಬೆಟಾಲಿಯನ್ ಪೊಲೀಸರನ್ನು ಕಳುಹಿಸಿ ಮನೆ ಮಂದಿ ಕಂಗಾಲಾಗಿ ಊರು ಬಿಟ್ಟು ಪರಾರಿಯಾಗುವಂತೆಯೂ ನೋಡಿಕೊಂಡಿದ್ದರು.

ಆತ್ಮಹತ್ಯೆ ಮಾಡಿಕೊಳ್ಳುವ ಮುಂಚೆ ಪದ್ಮಪ್ರಿಯಾ ತನ್ನ ಸಾವಿಗೆ ಯಾರು ಕಾರಣ ಎಂದು ಒಂದು ಪತ್ರ ಬರೆದಿಟ್ಟಿದಿದ್ದರೆ ಈ ಪ್ರಕರಣ ಬೇರೆಯೇ ತಿರುವು ಪಡೆಯುತ್ತಿತ್ತೇನೊ?

ಯಾರಿಗೆ ಗೊತ್ತು ಆಕೆ ಅಂಥದೊಂದು ಪತ್ರ ಬರೆದಿಟ್ಟಿದ್ದರೂ ಅಂತಾದರೂ ಮೊದಲು ಆ ಮನೆ ಹೊಕ್ಕವನೇ ರಘುಪತಿ ಭಟ್ ಅಲ್ಲವೆ!

ಇಂಥವರ ಕೈಗೆ ಸಿಗುವ ಅಂಥ ಡೆತ್‌ನೋಟ್ ಬಚಾವಾಗುಳಿಯಲು ಹೇಗೆ ಸಾಧ್ಯವಿತ್ತು! ■


ಕೊಲೆಗೈದವ ಸತ್ತ, ಕೊಲೆಯಾದವ ಬದುಕಿಬಂದ!



ಬೆಳಗಾವಿ

ಈ ಹೆಡ್ಡಿಂಗೇ ಒಂಥರಾ ವಿಚಿತ್ರವಾಗಿದೆಯಲ್ಲವೆ. ನಂಬಲು ತುಸು ಕಷ್ಟವಾದರೂ ನಂಬಲೇಬೇಕಾದ ಸತ್ಯವಿದು. ಇದೇನು ಯಾವುದೋ ಸಿನಿಮಾದ ಕ್ಲೈಮಾಕ್ಸ್ ಅಲ್ಲ. ಕುಖ್ಯಾತ ರೌಡಿ ಪ್ರವೀಣ ಶಿಂತ್ರೆಯ ಪಾತಕಗಳೊಂದಿಗೆ ಕೈಜೋಡಿಸಿದ್ದ ಖಾನಾಪುರ ಪೊಲೀಸರು ಆಡಿದ ಕದಲ್ ಬದಲ್ ಕಂಚಿ ಬದಲ್ ಆಟ. ಖಾನಾಪುರ ಪೊಲೀಸರ ಈ ಆಟಕ್ಕೆ ಬಲಿಯಾದವರು ಸಂಜಯ ಚೌಧರಿ ಹಾಗೂ ರಾಜೀವ ಚೌಧರಿ ಎಂಬ ಇಬ್ಬರು ಸಹೋದರರು.

ಎರಡು ವರ್ಷಗಳ ಹಿಂದೆ ಅಣ್ಣ ಸಂಜಯ್ ಚೌಧರಿಯ ಕೊಲೆಗಾಗಿ ಪ್ರವೀಣ್ ಶಿಂತ್ರೆಗೆ ಸುಪಾರಿ ನೀಡಿದ್ದ ರಾಜೀವ ಚೌಧರಿ ಈಗ ಜೈಲಿನಲ್ಲಿದ್ದರೆ, ಶಿಂತ್ರೆಯಿಂದ ಕೊಲೆಯಾಗಿದ್ದ ಎಂದೇ ನಂಬಲಾಗಿದ್ದ ಸಂಜಯ್ ಕುಡಿತಕ್ಕೆ ಬಲಿಯಾಗಿ ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಕಳೆದು ಹೋದವನು ಈಗ ಮರಳಿ ಬಂದಿದ್ದಾನೆ.



ನಿಂಬಾಳ್ಕರ್

ನಡೆದಿದ್ದಿಷ್ಟು:

2006ರಲ್ಲಿ ಆಸ್ತಿಗಾಗಿ ಈ ಚೌಧರಿ ಸಹೋದರರ ಮಧ್ಯೆ ಕಲಹವೇರ್ಪಟ್ಟಿತ್ತು. ಅದು ತೀರಾ ವಿಕೋಪಕ್ಕೆ ತಿರುಗಿ ತಮ್ಮ ರಾಜೀವ ಚೌಧರಿಯು ಅಣ್ಣ ಸಂಜಯ ಚೌಧರಿಯ ಕೊಲೆಗಾಗಿ ಕುಖ್ಯಾತ ರೌಡಿ ಪ್ರವೀಣ ಶಿಂತ್ರೆಗೆ ಸುಪಾರಿ ನೀಡಿದ್ದ. ಆ ಬಳಿಕ ಖಾನಾಪುರ ಕಾಡಿನಲ್ಲಿ ರುಂಡವಿಲ್ಲದೇ ಒಂದು ಶರೀರವನ್ನು ಚೌಧರಿ ಕುಟುಂಬಕ್ಕೆ ತೋರಿಸಿದ ಖಾನಾಪುರ ಪೊಲೀಸರು ಇದು ಸಂಜಯನ ಮೃತದೇಹ ಎಂದು ಹೇಳಿದ್ದರು.



ಶಿಂತ್ರೆ

ಆದರೆ ನಡೆದದ್ದೇ ಬೇರೆ. ಶಿಂತ್ರೆ ಈ ಕೊಲೆ ಮಾಡಲು ರಾಜೀವನಿಂದ 50 ಸಾವಿರ ರೂಪಾಯಿಯೇನೋ ಪಡೆದಿದ್ದ. ಅದರಲ್ಲಿ 25 ಸಾವಿರವನ್ನು ಮುಂಗಡವಾಗಿಯೇ ಪಡೆದುಕೊಂಡಿದ್ದ. ಈ ಪ್ರಕರಣಕ್ಕೆ ಸಾಥ್ ನೀಡಿದ್ದ ಆಗಿನ ಪಿಎಸ್ಐ ಜಿ.ಆರ್. ಪಾಟೀಲ ಹಾಗೂ ಶಿಂತ್ರೆ ಮಧ್ಯೆ ಹಣದ ವಿಷಯದಲ್ಲಿ ವೈಷಮ್ಯ ಬಂದಾಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸೆಕ್ಷನ್ 302 ಮತ್ತು 201ರ ಪ್ರಕಾರ ಪ್ರಕರಣ ದಾಖಲಿಸಿದ. ಅಂದರೆ, ಪ್ರವೀಣ್ ಶಿಂತ್ರೆ ಸಂಜೀವ ಚೌಧರಿಯನ್ನು ಕೊಲೆ ಮಾಡಿದನೆಂದೇ ನಂಬಿಸಲಾಯಿತು. ಅಲ್ಲದೇ ರಾಜೀವ ತನಗೆ ಹಣ ನೀಡದಿದ್ದಾಗ ಇದೇ ಪಿಎಸ್ಐ ಜಿ.ಆರ್.ಪಾಟೀಲ್ ಸೋದರನ ಕೊಲೆಗಾಗಿ ಸುಪಾರಿ ನೀಡಿದ್ದ ಆರೋಪದ ಮೇಲೆ ಅವನನ್ನು ಜೈಲಿಗೆ ತಳ್ಳಿದ. ಇಷ್ಟೆಲ್ಲಾ ಆದ ಮೇಲೆ ಕೊಲೆ ಮಾಡಿದ್ದನೆನ್ನಲಾದ ಪ್ರವೀಣ್ ಶಿಂತ್ರೆ ಕೂಡ ಪೊಲೀಸರ ಗುಂಡಿಗೆ ಬಲಿಯಾಗಿ ಸತ್ತೇ ಹೋದ.

ಇದೆಲ್ಲ ನಡೆಯುವುದಕ್ಕೆ ಮುಂಚೆಯೇ ಕೊಲೆಯಾಗಬೇಕಾಗಿದ್ದ ಸಂಜೀವ ಕುಡಿತದ ದಾಸನಾಗಿ, ಕೊಲ್ಹಾಪುರ ಸೇರಿದ್ದ. ಹಾಗಾಗಿ ಶಿಂತ್ರೆ ಎಂಬ ಹಂತಕನಿಗೆ ಆತ ಸಿಗಲೇ ಇಲ್ಲ. ಆದರೆ, ಅಷ್ಟು ಹೊತ್ತಿಗಾಗಲೇ ಶಿಂತ್ರೆ ಸುಪಾರಿ ಹಣ ಪಡೆದಿದ್ದರಿಂದ, ಸೋದರನ ಕೊಲೆಗೆ ಸುಪಾರಿ ನೀಡಿದ ಆರೋಪದ ಮೇಲೆ ಜಿ.ಆರ್.ಪಾಟೀಲ್ ರಾಜೀವನನ್ನು ಜೈಲಿಗೆ ತಳ್ಳಿದ್ದರಿಂದ ಯಾವುದೋ ರುಂಡವಿಲ್ಲದ ಮುಂಡವನ್ನು ತೋರಿಸಿ ಇದೇ ಸಂಜಯನ ಡೆಡ್‌ಬಾಡಿ ಎಂದು ಪೊಲೀಸರೂ ನಂಬಿಸಿಬಿಟ್ಟರು.

ಈಗ ಇದೆಲ್ಲ ಬಟಾಬಯಲಾಗಿದೆ. ಮೊನ್ನೆ ಕುಡಿತದ ಅಮಲಿನಲ್ಲಿದ್ದಾಗ ಸಂಜೀವನಿಗೆ ದಿಢೀರ್ ಎಂದು ಮನೆಯ ನೆನಪಾಗಿ ಬೆಳಗಾವಿಗೆ ಹಿಂದಿರುಗಿದಾಗಲಷ್ಟೇ ಎಲ್ಲರೂ ಹುಬ್ಬೇರಿಸಿದ್ದು.

ಕೊಲೆಯಾಗಿದ್ದ ಸಂಜೀವ ಜೀವಂತವಾಗಿರುವುದರಿಂದ ಈ ಪ್ರಕರಣವೀಗ ಹೊಸ ಸ್ವರೂಪ ಪಡೆದುಕೊಂಡಿದೆ. ಅಲ್ಲದೇ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜೈಲಿನಲ್ಲಿರುವ ರಾಜೀವನ ವಿಚಾರಣೆ ಸೆಪ್ಟೆಂಬರ್ 1 ರಂದು ಇಲ್ಲಿನ ನ್ಯಾಯಾಲಯದಲ್ಲಿ ನಡೆಯುವುದಿತ್ತು. ಆದರೀಗ ಸಂಜೀವ ವಾಪಸ್ಸು ಬಂದಿದ್ದರಿಂದ ಖಾನಾಪುರ ಪೊಲೀಸರ ಭೂಗತ ಲೋಕದ ನಂಟಿನ ರಹಸ್ಯ ಬೆತ್ತಲಾಗಿ ನಿಂತಿದೆ.

ಅಲ್ಲದೇ, ಸಂಜೀವ ಕೊಲೆಯಾಗಿಲ್ಲ ಎನ್ನುವುದಾದರೆ, ಆವತ್ತು ಖಾನಾಪುರದ ಕಾಡಿನಲ್ಲಿ ಸಿಕ್ಕ ರುಂಡವಿಲ್ಲದ ಮೃತದೇಹ ಯಾರದ್ದು ಎಂಬ ಪ್ರಶ್ನೆಯೀಗ ಎಲ್ಲರನ್ನೂ ಕಾಡುತ್ತಿದೆ. ಪ್ರಾಯಶಃ ಇದಕ್ಕೆ ಉತ್ತರವನ್ನು ಜಿ.ಆರ್.ಪಾಟೀಲನೇ ನೀಡಬೇಕು.

ಒಂದು ಕಾಲದಲ್ಲಿ ಶಿಂತ್ರೆಯ ಎಲ್ಲ ಕರಾಳ ದಂಧೆಗಳಿಗೆ ಇಲ್ಲಿನ ಪೊಲೀಸರೆಲ್ಲರೂ ಸಾಥ್ ನೀಡಿದ್ದರು. ಏಕೆಂದರೆ ಶೀತಲ ಚೌಗಲೆ, ರಜಿಯಾ ಬಡೇಬಾಯಿ, ಮಾರುತಿ ಧಾಮನೇಕರ ಸೇರಿದಂತೆ ಏಳಕ್ಕೂ ಹೆಚ್ಚು ಕೊಲೆಗಳನ್ನು ಶಿಂತ್ರೆ ಗ್ಯಾಂಗ್ ಖಾನಾಪುರ ಕಾಡಿನಲ್ಲಿ ಹಾಡು ಹಗಲೇ ಮಾಡಿ, ಶವಗಳನ್ನು ಎಸೆದು ಬಂದರೂ ಪೊಲೀಸರು ಏನೂ ಮಾಡಿರಲಿಲ್ಲ.

ಬೆಳಗಾವಿಗೆ ಎಸ್ಪಿಯಾಗಿ ಸೋನಿಯಾ ನಾರಂಗ್ ಬಂದ ಹೊಸದರಲ್ಲಿಯೇ ಭ್ರಷ್ಟ ಪೊಲೀಸ್ ಅಧಿಕಾರಿಗಳಿಗೆ ಅವರು ಬಿಸಿ ಮುಟ್ಟಿಸಿದ್ದರು. ಪ್ರಸ್ತುತ ಈ ಪ್ರಕರಣವನ್ನು ಭೇದಿಸಬೇಕೆಂದರೆ ಆವತ್ತು ಖಾನಾಪುರ ಠಾಣೆಯ ಪಿಎಸ್ಐಯಾಗಿದ್ದ ಜಿ.ಆರ್. ಪಾಟೀಲನನ್ನು ವಿಚಾರಣೆಗೆ ಒಳಪಡಿಸಬೇಕಿದೆ. ಆ ಕೆಲಸವನ್ನು ಸೋನಿಯ ಮಾಡುತ್ತಾರಾ ಎಂಬುದೇ ಪ್ರಶ್ನೆ.


■ ಮಧುಬಾಲಾ

ಮತ್ತೆ ವಕ್ಕರಿಸಿದ ಲಂಚಕೋರರು

ಬೆಳಗಾವಿಯಿಂದ ವರ್ಗಾವಣೆಗೊಂಡು ಹೋಗಿದ್ದ ಭ್ರಷ್ಟ ಲಂಚಕೋರ ಪೊಲೀಸ್ ಅಧಿಕಾರಿಗೆಲ್ಲ ತಿಂಗಳು ತುಂಬುವುದರೊಳಗಾಗಿ ಮತ್ತೆ ವಕ್ಕರಿಸಿಕೊಂಡಿದ್ದಾರೆ. ಅಂದರೆ, ಬೆಳಗಾವಿಯಲ್ಲಿ ಮತ್ತೆ ಥರಥರದ ಹಲಾಲ್‌ಕೋರ್ ದೋ ನಂಬರ್ ದಂಧೆಗಳು ಶುರುವಾಗುವುದರಲ್ಲಿ ಸಂಶಯವೇ ಇಲ್ಲ.


ಈ ಹಿಂದೆ ಶಿಂತ್ರೆ ಎನ್‌ಕೌಂಟರ್ ಪ್ರಕರಣದಲ್ಲಿ ಅನುಮಾನಾಸ್ಪದ ಪಾತ್ರವಹಿಸಿದ್ದ ಮಹಾಂತೇಶ್ವರ ಅದೇ ತಿಳಕವಾಡಿಗೆ ವಾಪಸ್ಸು ಬಂದಿದ್ದಾನೆ. ಅದರಂತೆ ಈ ಹಿಂದೆ ಮಾರ್ಕೆಟ್ ಠಾಣೆಗಿದ್ದ ಶಂಕರ ಮಾರಿಹಾಳ ಪುನಃ ವಾಪಸ್ಸು ಬಂದಿದ್ದಾರೆ. ಇನ್ನು ಸಂಚಾರಿ ಉತ್ತರ ಠಾಣೆಯಲ್ಲಿ ಪಿಎಸ್ಐಯಾಗಿದ್ದ ಸಂಜೀವ ಕಾಂಬಳೆ ಮಾರಿಹಾಳಕ್ಕೆ, ಮಾರ್ಕೆಟ್‌ಗಿದ್ದ ಮರಾಠೆ ಖಡೇಬಜಾರ್‌ಗೆ, ಜಿ. ರಘು ಶಹಾಪುರಕ್ಕೆ, ವಿಕಾಸ ಲಮಾಣಿ ಎಪಿಎಂಸಿಗೆ ಹೀಗೆ ಭ್ರಷ್ಟರ ಕೂಟ ಮತ್ತೆ ಬೆಳಗಾವಿಗೆ ಲಗ್ಗೆಯಿಟ್ಟಿದೆ. ಇವರೆಲ್ಲ ಇಲ್ಲಿಂದ ಎತ್ತಂಗಡಿಯಾಗಿ ತಿಂಗಳು ತುಂಬುವುದರ ಒಳಗೆ ಬೆಳಗಾವಿಗೆ ವಾಪಸ್ಸು ಬರಲು ಅದೆಷ್ಟು ದುಡ್ಡು ಸುರಿದಿದ್ದಾರೋ? ಅಂದಮೇಲೆ ಈ ಭ್ರಷ್ಟರ ಪಾಲಿಗೆ ಬೆಳಗಾವಿ ಎನ್ನುವುದು ಮೇಯುವುದಕ್ಕೆ ಹುಲುಸಾದ ಹುಲ್ಲುಗಾವಲೇ ಆಗಿರಬೇಕಲ್ಲವೆ? ಮಟ್ಕಾ, ಇಸ್ಪೀಟ್, ಜೂಜು, ಕಳ್ಳಭಟ್ಟಿ ಸಾರಾಯಿಗಳ ದರ್ಬಾರ್‌ನಲ್ಲಿ ಬೆಳಗಾವಿಯಲ್ಲಿ ಶಾಂತಿಯೆನ್ನುವುದು ಇನ್ನು ಮುಂದೆ ಮರೀಚಿಕೆಯೇ ಸರಿ. ■

ಗಣಿ ರೆಡ್ಡಿಯ ಗೂಂಡಾಗಿರಿ



▶▶▶10

ಅದು 2004 ರ ಕಾಲ. ಆಂಧ್ರದ ಮುಖ್ಯಮಂತ್ರಿ ವೈ.ಎಸ್. ರಾಜಶೇಖರ ರೆಡ್ಡಿಯ ಮಗ ಜಗನ್‌ನನ್ನೇ ತನ್ನ ಪಾರ್ಟನರ್ ಮಾಡಿಕೊಂಡಿ ಜನಾರೆಡ್ಡಿ ಉಪಾಯವಾಗಿ ಟಪಾಲ್ ತಿಮ್ಮಪ್ಪನವರ 231 ಎಕರೆ ವಿಸ್ತಾರದ ಗಣಿಯನ್ನು ನುಂಗಿ ಹಾಕಿದ್ದ. ಟಪಾಲ್ ತಿಮ್ಮಪ್ಪ ಗಣಿಗಾರಿಕೆ ಮಾಡುತ್ತಿಲ್ಲವಾದ್ದರಿಂದ ಅದನ್ನು ಗಣಿರೆಡ್ಡಿಯ ಓಬಳಾಪುರಂ ಮೈನ್ಸ್ ಕಂಪೆನಿಗೆ ಆಂಧ್ರ ಸರ್ಕಾರ ಮಂಜೂರು ಮಾಡಿತ್ತು. ಯಾವುದೇ ಮುನ್ಸೂಚನೆ ನೀಡದೆ, ಅತ್ಯಂತ ವ್ಯವಸ್ಥಿತವಾಗಿ ಟಪಾಲ್ ತಿಮ್ಮಪ್ಪನವರ ಗಣಿಯನ್ನು ಕಿತ್ತುಕೊಂಡ ಜನಾರ್ದನ ರೆಡ್ಡಿ ಕ್ರಮೇಣ ಕರ್ನಾಟಕದ ನಕಾಶೆಯನ್ನೇ ತಿದ್ದಿ, ತನ್ನ ಆಂಧ್ರದ ಗಣಿಯನ್ನು ಅಗೆಯುತ್ತಾ ಬಗೆಯುತ್ತಾ ಅದನ್ನು ಕರ್ನಾಟಕದ ಗಡಿಯೊಳಕ್ಕೆ ವಿಸ್ತರಿಸಿಬಿಟ್ಟ. ಅದಕ್ಕೊಂದು ಬ್ರಿಟಿಷ್ ಕಾಲದಲ್ಲಿ ನೆಟ್ಟಿದ್ದ ಗಡಿ ಸೂಚಕ ಕಲ್ಲುಗಳನ್ನೇ ಕಿತ್ತೆಸೆದ. ಇದರಿಂದಾಗಿ ಕರ್ನಾಟಕದ ಸಂಡೂರು ಗಡಿಯ ತುಮಟಿ ಗ್ರಾಮದ ನೂರಾರು ಎಕರೆ ಪ್ರದೇಶ ಆಂಧ್ರದ ಪಾಲಾಗಿ, ರೆಡ್ಡಿಯ ಗಣಿ ಲೂಟಿ ನಿರಾತಂಕವಾಯಿತು.


ಗಣಿ ರೆಡ್ಡಿಯ FIR


FIRST INFORMATION REPORT

(Under Section 154 Cr.P.C.)

FIR Number :
FIR Date :
Type : FIR
Police Station : TORANAGALLI
District : BELLARY
State : KARNATAKA


2. ACT AND SECTIONS
ACT: IPC 1860
SECTION: 143, 147, 148, 447, 323, 324, ... R/W 149 IPC

3 (a) Occurrence of Offence :
Date From ... Date To ...
Time From ... Time To ...
Time Period : ...
Day : ...
(b) Information Received at P.S. Date: ... Time: ...
(c) General Diary Reference Entry No(s): Time:
4. Type Of Information :
5. Place Of Occurrence
(a) Direction and Distance from P.S. :
(b) Address:
(c) In case outside limit of this Police Station, then name of P.S. District
6. Complainant / Informant :
(a) Name :
(b) Father's/Husband's Name
(c) Date/Year Of Birth :
(d) Nationality :
(e) PassPort No :
(f) Date Of Issue :
(g) Place Of Issue :
(h) Occupation


ಗಣಿ ರೆಡ್ಡಿಯ FIR

ಗಣಿ ರೆಡ್ಡಿಯ ವಿರುದ್ಧ ದಾಖಲಾಗಿರುವ ಎಫ್.ಐ.ಆರ್

ಹಾಗಂತ ಟಪಾಲ್ ನಾರಾಯಣ ರೆಡ್ಡಿ ಮತ್ತು ಆತನ ಮಕ್ಕಳು ಕೈಕಟ್ಟಿ ಕೂರಲಿಲ್ಲ. ಆಂಧ್ರದ ಹೈಕೋರ್ಟು, ಕರ್ನಾಟಕ ಸರ್ಕಾರ, ಕೇಂದ್ರ ಸರ್ಕಾರಕ್ಕೆಲ್ಲ ದೂರಿತ್ತರು. ರೆಡ್ಡಿ-ಕರ್ನಾಟಕದ ನಕಾಶೆಯನ್ನೇ ತಿದ್ದಿದ್ದು, ಗಡಿಯನ್ನೇ ಬದಲಾಯಿಸಿದ್ದು ಇತ್ಯಾದಿಗಳನ್ನೆಲ್ಲ ಕಂಡಕಂಡ ಪತ್ರಕರ್ತರಿಗೆ ದಾಖಲೆ ಸಮೇತ ವಿವರಿಸುತ್ತಿದ್ದರು. ಕನ್ನಡಪರ ಸಂಘಟನೆಗಳಿಗೆಲ್ಲ ಬೇಡಿಕೊಂಡರು. ದುರಂತವೆಂದರೆ ವಾಟಾಳ್ ಆದಿಯಾಗಿ ರಕ್ಷಣಾ ವೇದಿಕೆಯ ನಾರಾಯಣ ಗೌಡನ ತನಕ, ಕಸಾಪ ಅಧ್ಯಕ್ಷ ಚಂಪಾ ಮೊದಲಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ತನಕ ಯಾರೂ ಈ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ.



ಶ್ರೀರಾಮುಲು

ಹೊಗೇನಕಲ್ ಅನ್ನು ತಮಿಳುನಾಡು ಆಕ್ರಮಿಸಿದ ಮಾತ್ರಕ್ಕೆ ಅಷ್ಟೆಲ್ಲಾ ಬೊಬ್ಬೆಹಾಕಿದ 'ಕನ್ನಡ ನಾಯಕರು' ಗಣಿ ರೆಡ್ಡಿಗಳ ವಿಷಯದಲ್ಲಿ ಮಾತ್ರ ನಿಷ್ಕ್ರಿಯರಾಗಿಬಿಟ್ಟರು!

ಇದು ಒಂದು ಹಂತದ ಗಣಿ ರೆಡ್ಡಿಗಳ ದುಂಡಾವರ್ತಿಯಾದರೆ, ಕಳೆದ ಚುನಾವಣೆ ಮುಗಿದು ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ರೆಡ್ಡಿ ಗ್ಯಾಂಗ್‌ನ ಅಟ್ಟಹಾಸಕ್ಕೆ ಅಂಕುಶವೇ ಇಲ್ಲದಂತಾಯ್ತು. ತಾನೇ ಹಾಕಿಸಿಕೊಂಡ ಪೊಲೀಸ್ ವರಿಷ್ಠರು, ತನ್ನದೇ ಬಂಟರಂತಿದ್ದ ಅರಣ್ಯಾಧಿಕಾರಿಗಳು, ತನಗೆ ನಿಷ್ಠರಾಗಿದ್ದ ಆರ್‌ಟಿಓ ಚೆಕ್‌ಪೋಸ್ಟ್‌ಗಳ ಸಿಬ್ಬಂದಿಗಳ ಮೂಲಕ ಬಳ್ಳಾರಿ ಭಾಗದ ಒಂದೊಂದೇ ಗಣಿ ಮಾಲಿಕರಿಗೆ ಕಿರುಕುಳ ಶುರು ಹಚ್ಚಿಕೊಂಡ. ಆಂಧ್ರದ ಗಡಿಗೆ ಹೊಂದಿಕೊಂಡಂತೆ ಸಂಡೂರು ತಾಲ್ಲೂಕಿನ ತುಮಟಿ, ವಿಠಲಾಪುರ, ಎಚ್. ಸಿದ್ಧಾಪುರ, ಮಲ್ಲಂಗುಡಿ ಭಾಗದಲ್ಲಿ ಆರೇಳು ಕಂಪೆನಿಗಳು ಆ ಕಾಲದಿಂದಲೂ ಗಣಿಗಾರಿಕೆ ಮಾಡುತ್ತಿವೆ. ಈ ಪೈಕಿ ಟಪಾಲ್ ನಾರಾಯಣ ರೆಡ್ಡಿಯ ಟಿ.ಎನ್.ಆರ್. ಕಂಪೆನಿಯೂ ಒಂದು. ಯಾವತ್ತು ಆಂಧ್ರದ ಗಡಿಯನ್ನು ತಿದ್ದಿ ಕರ್ನಾಟಕದ ಗಡಿಯೊಳಕ್ಕೆ ರೆಡ್ಡಿ ಒತ್ತುವರಿ ಆರಂಭಿಸಿದನೋ ಸಹಜವಾಗೇ ಇಂಥ ಕಂಪೆನಿಗಳ ಮೇಲೆ ರೆಡ್ಡಿ ಗ್ಯಾಂಗ್ ಗೂಂಡಾಗಿರಿ ಆರಂಭಿಸಿತ್ತು. ಬಿಜೆಪಿ ಅಧಿಕಾರಕ್ಕೆ ಬಂದು ಜನಾರ್ದನ ರೆಡ್ಡಿ ಮಂತ್ರಿಯಾಗುತ್ತಿದ್ದಂತೆ ದೌರ್ಜನ್ಯ ತಾಳದೇ ಹಿಂದ್ ಟ್ರೇಡರ್ಸ್ ಮತ್ತು ಎನ್. ರತ್ನಯ್ಯ ಶೆಟ್ಟಿ ಕಂಪೆನಿಗಳೆರಡೂ ತಮ್ಮ ಗಣಿಯನ್ನು ರೆಡ್ಡಿ ಗ್ಯಾಂಗಿಗೆ ಒಪ್ಪಿಸಿಬಿಟ್ಟವು.


ಉಳಿದದ್ದು ಅಬ್ದುಲ್ ವಹಾಬ್ ಮತ್ತು ನೂರ್ ಅಹ್ಮದ್ ಸಹೋದರರ ಎಂಬಿಟಿ ಮೈನ್ಸ್ ಮತ್ತು ರೆಡ್ಡಿಯ ಕಡು ವಿರೋಧಿ ಟಪಾಲ್ ನಾರಾಯಣ ರೆಡ್ಡಿಯ ಮೈನ್ಸ್ ಮಾತ್ರ.

ಶತಗತಾಯ ಟಪಾಲ್ ನಾರಾಯಣ ರೆಡ್ಡಿ ಮತ್ತು ಆತನ ಮಕ್ಕಳನ್ನು ಒದ್ದೋಡಿಸಿ ಅವರ ಇಡೀ ಗಣಿಯನ್ನು ಕಬಳಿಸುವುದು ಜನಾರ್ದನ ರೆಡ್ಡಿಯ ದುರಾಶೆ. ಈಗಾಗಲೇ ಆಂಧ್ರದಲ್ಲಿದ್ದ ಅವರದೇ ಗಣಿಯನ್ನು ಕಿತ್ತುಕೊಂಡಂತೆ ಕರ್ನಾಟಕದಲ್ಲಿರುವ ಗಣಿಯನ್ನೂ ಕಿತ್ತುಕೊಳ್ಳುವ ದುರ್ಬುದ್ಧಿ. ಆದರೆ ಟಪಾಲ್ ನಾರಾಯಣ ರೆಡ್ಡಿಯ ಪಕ್ಕದಲ್ಲಿರುವುದು ವಹಾಬ್ ಸಹೋದರರ ಎಂಬಿಟಿ ಮೈನ್ಸ್. ಇಲ್ಲಿಗೆ ತಿಂಗಳ ಹಿಂದೆ ಅದನ್ನೂ ದೌರ್ಜನ್ಯದಿಂದ ಕಿತ್ತುಕೊಂಡ ರೆಡ್ಡಿ ಗ್ಯಾಂಗ್‌ಗೆ ಇದ್ದ ಅಡೆತಡೆಯೆಲ್ಲ ನಿವಾರಣೆಯಾದಂತಾಗಿದೆ. ಉಳಿದದ್ದು ದಾಳಿಯೊಂದೇ!


ಅದು ಮೊನ್ನೆ ಅಂದರೆ 2008 ರ ಆಗಸ್ಟ್ 18 ನೇ ತಾರೀಖು. ರೆಡ್ಡಿ ಗ್ಯಾಂಗ್‌ನ ಐವತ್ತಕ್ಕೂ ಹೆಚ್ಚು ಮಂದಿ ದೊಣ್ಣೆ ರಾಡು, ಬಂದೂಕು ಹಿಡಿದು ಪಕ್ಕದ ಟಪಾಲ್ ನಾರಾಯಣ ರೆಡ್ಡಿಯ ಗಣಿಗೆ ನುಗ್ಗಿದ್ದಾರೆ. ಆ ಹೊತ್ತಿಗೆ ತಮ್ಮ ಗಣಿಯಲ್ಲಿ ಗೋಡೆ ಕಟ್ಟಿಸುತ್ತಿದ್ದ ಟಪಾಲ್ ನಾರಾಯಣ ರೆಡ್ಡಿಯ ಫೋರ್‌ಮನ್ ಕೆ. ಅಮರ್‌ನಾಥ್‌ರನ್ನು ಹಿಡಿದು ಹಿಗ್ಗಾಮುಗ್ಗಾ ಬಡಿದಿದ್ದಾರೆ. ದೊಣ್ಣೆ ಮತ್ತು ಬಂದೂಕಿನ ಹಿಂಬದಿಯಿಂದ ಹೊಡೆದು ನೆಲಕ್ಕೆ ಹಾಕಿ ತುಳಿದಿದ್ದಾರೆ. ಆವತ್ತು ಇಡೀ ದಾಳಿಯನ್ನು ನಿಭಾಯಿಸಿದ್ದು ಗಣಿ ರೆಡ್ಡಿಯ ಮ್ಯಾನೇಜರ್ ಆಂಜನೇಯಲು.

ಈತನ ವಿರುದ್ಧ ಈಗಾಗಲೇ ಮೂರು ಗಣಿಗಳ ಮೇಲೆ ದಾಳಿ ನಡೆಸಿದ ಕೇಸಿದೆ. ಜೊತೆಗೆ ಓಬಳಾಪುರಂ ಮೈನ್ಸ್‌ನ ಮತ್ತೊಬ್ಬ ಮ್ಯಾನೇಜರ್ ಶ್ರೀನಿವಾಸ ರೆಡ್ಡಿಯೂ ದಾಳಿಗೆ ಪ್ರಚೋದಿಸಿದ್ದಾನೆ. ದುರಂತವೆಂದರೆ ಒದೆ ತಿಂದು ತೋರಣಗಲ್ ಪೊಲೀಸ್ ಠಾಣೆಗೆ ಬಂದು ಮಂತ್ರಿ ಜನಾರ್ದನ ರೆಡ್ಡಿಯ ವಿರುದ್ಧ ಅಮರನಾಥ್ ದೂರು ಕೊಟ್ಟರೆ ಪೊಲೀಸರು ದೂರನ್ನೇ ದಾಖಲಿಸಿಲ್ಲ. ವಿಧಿಯಿಲ್ಲದೇ ಜನಾರ್ದನ ರೆಡ್ಡಿಯ ಹೆಸರನ್ನು ತೆಗೆದು ಆತನ ಕಂಪನಿ ಸಿಬ್ಬಂದಿಗಳ ಮೇಲಷ್ಟೇ ಅಮರ್‌ನಾಥ್ ದೂರಿತ್ತಿದ್ದಾರೆ.

ಕನಿಷ್ಠ ರೆಡ್ಡಿಯ ಕಂಪೆನಿಯ ಸಿಬ್ಬಂದಿಗಳೆಂಬ ರೌಡಿಗಳ ಮೇಲಾದರೂ ದೂರು ದಾಖಲಾಯಿತಲ್ಲ ಅದೇ ಕರ್ನಾಟಕದ ಸೌಭಾಗ್ಯ! ■



ಯಡ್ಡಿ ಪಡೆಯ 'ಶಿವಮೊಗ್ಗ ಅಭಿವೃದ್ಧಿ' ರಾಜಕೀಯದ ಇನ್ನೊಂದು ಮುಖವನ್ನು ಕಂಡು ಶಿವಮೊಗ್ಗೆಯ ಜನ ಬೇಸ್ತು ಬಿದ್ದಿದ್ದಾರೆ. ಬಿಜೆಪಿಯ ಸ್ಥಾನಮಟ್ಟ ನಾಯಕರು, ಅವರ ಹಿಂಬಾಲಕರು ಜಿಲ್ಲೆಯ ಅಭಿವೃದ್ಧಿಗೆಂದು ಬರುತ್ತಿರುವ ಯೋಜನೆಗಳ 'ಸಂಪೂರ್ಣ ಲಾಭ' ಪಡೆಯುತ್ತಿದ್ದಾರೆ. ಇದಕ್ಕೆ ಸ್ಪಷ್ಟ ಉದಾಹರಣೆ ಮೆಡಿಕಲ್ ಕಾಲೇಜಿನ ಕರ್ಮಕಾಂಡ




ಆಯಕಟ್ಟಿನ ಸ್ಥಳಗಳಿಗೆ ನೇಮಿಸಿಕೊಂಡಿದ್ದು. ಮಂಡ್ಯದ ಮೆಡಿಕಲ್ ಕಾಲೇಜಿನಲ್ಲಿ ಲಕ್ಷಾಂತರ ದುಡ್ಡು ನುಂಗಿ ಅದು ಹೇಗೋ ಅಲ್ಲಿ ಒದೆ ತಿನ್ನದೆ ತಪ್ಪಿಸಿಕೊಂಡು ಓಡಿಬಂದಿರುವ ಡಾ.ಚಿದಾನಂದ ಎಂಬ 'ಮಹಾನ್ ಕಲಾವಿದ'ನನ್ನು ಪ್ರಾಂಶುಪಾಲನನ್ನಾಗಿ ಯಡ್ಡಿ ನೇಮಿಸಿದ್ದಾರೆ. ಅಷ್ಟೇ ಅಲ್ಲ ಆತನೊಂದಿಗೆ ಜೊತೆಗಾರನೊಬ್ಬ ಇರಲಿ ಎಂದು ಯಾವ ಅರ್ಹತೆ ಇಲ್ಲದಿರುವ ಗಿರಿಯಪ್ಪ ಎಂಬ

ಶಿವಮೊಗ್ಗ ಮೆಡಿಕಲ್ ಕಾಲೇಜ್ ಕರ್ಮಕಾಂಡ

ಯಡ್ಡಿ ಅಂಗಳದಲ್ಲಿ ಲೂಟಿ

ಶಿವಮೊಗ್ಗೆಯ ಜನತೆ ಸುಮಾರು ಮೂರು ದಶಕಗಳಿಂದ ಜಿಲ್ಲೆಗೊಂದು ಮೆಡಿಕಲ್ ಕಾಲೇಜು ಬೇಕೆಂದು ಹೋರಾಟ ನಡೆಸುತ್ತಲೇ ಬಂದಿದ್ದರು. ಆದರೆ ಜಿಲ್ಲೆಯ ಇಬ್ಬರು ನಾಯಕರು ಮುಖ್ಯಮಂತ್ರಿ ಹುದ್ದೆಗೇರಿದ್ದಾಗಲೂ ಶಿವಮೊಗ್ಗ ಜನರ ಈ ಕನಸು ನನಸಾಗಿರಲಿಲ್ಲ. ಕಾಂಗ್ರೆಸ್ ಸರ್ಕಾರವಿದ್ದಾಗ, 'ಸಮಾಜವಾದಿ' ನಾಯಕ ಕಾಗೋಡು ತಿಮ್ಮಪ್ಪ ಸರ್ಕಾರಿ ಮೆಡಿಕಲ್ ಕಾಲೇಜನ್ನು ತೆರೆಯುವ ಬದಲಾಗಿ ಕೆಲ ಮಾರ್ವಾಡಿಗಳನ್ನು ಸೇರಿಸಿಕೊಂಡು ವಂಚಕ ಶ್ರೀಧರ್ ಎಂಬಾತನನ್ನು ಮುಂದೆ ಬಿಟ್ಟು, ಶಿವಪ್ಪನಾಯಕನ ಹೆಸರಿನಲ್ಲಿ ಮೆಡಿಕಲ್ ಕಾಲೇಜು ಆರಂಭಿಸಲು ಹೋಗಿ ಮುಗ್ಗರಿಸಿ ಬಿದ್ದರು. ಆಗ ಬಿದ್ದು ಏಟು ಮಾಡಿಕೊಂಡವರು ಇನ್ನೂ ಸುಧಾರಿಸಿಕೊಂಡಿಲ್ಲ.

ಇಷ್ಟರಲ್ಲಿ ಹೋರಾಟ ತೀವ್ರಗೊಂಡಿದ್ದರಿಂದ ಧರ್ಮಸಿಂಗ್ ನೇತೃತ್ವದ ಕಾಂಗ್ರೆಸ್-ಜನತಾ ದಳ ಸಮ್ಮಿಶ್ರ ಸರ್ಕಾರ ಶಿವಮೊಗ್ಗೆಯಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ಆರಂಭಿಸುವ ಮಹತ್ವದ ತೀರ್ಮಾನ ತೆಗೆದುಕೊಂಡು, ಕಟ್ಟಡದ ಕಾಮಗಾರಿಯನ್ನೂ ಆರಂಭಿಸಿತು. ಮುಂದೆ ಜಿಲ್ಲೆಯವರೇ ಆದ ಯಡ್ಡಿ ಉಪಮುಖ್ಯಮಂತ್ರಿಯಾದರು, ಈಗ ಮುಖ್ಯಮಂತ್ರಿಯಾಗಿದ್ದಾರೆ. ಈ ಕಾಲೇಜಿನ ಜನನಕ್ಕೂ, ಯಡ್ಡಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ತಾನೊಬ್ಬ ಅಭಿವೃದ್ಧಿಯ ಹರಿಕಾರ ಎಂದೂ, ಶಿವಮೊಗ್ಗೆಯ ಜನರ ಕನಸನ್ನು ನನಸು ಮಾಡಿದ ಮಹಾನ್ ನಾಯಕ ತಾನೆಂದೂ ಯಡ್ಡಿ ಪೋಸು ಕೊಡುತ್ತಿದ್ದಾರೆ. ಅದಕ್ಕೆ ತಕ್ಕಂತೆ ಅವರನ್ನು ಹಾಡಿ ಹೊಗಳುವ ಚೆಡ್ಡಿ ಪತ್ರಕರ್ತರಿಗೇನೂ ಇವತ್ತು ಬರ ಇಲ್ಲವಲ್ಲಾ?!



ಡಾ.ಚಿದಾನಂದ

ವಾಸ್ತವವಾಗಿ ಈ ಕಾಲೇಜಿನ ಹೆಸರಲ್ಲಿ ಯಡ್ಡಿ ಮತ್ತಾತನ ಪಟಾಲಂ ನಡೆಸಿರುವ ಹಗಲು ದರೋಡೆಯನ್ನು ನೋಡಿದರೆ ಇವರು ಅಭಿವೃದ್ಧಿಯ ಹರಿಕಾರರೂ ಅಲ್ಲ, ಶಿವಮೊಗ್ಗೆ ಜನರ ಬಹಳ ದಿನಗಳ ಆಸೆಯನ್ನು ನನಸಾಗುತ್ತಿರುವ ನಾಯಕರೂ ಅಲ್ಲ, ಬದಲಾಗಿ ಇಡೀ ಶಿವಮೊಗ್ಗೆಗೇ ದ್ರೋಹ ಬಗೆಯುತ್ತಿರುವ ವಂಚಕರು ಎಂಬುದು ಸ್ಪಷ್ಟವಾಗುತ್ತದೆ. ಯಾಕೆಂದರೆ ಕಾಲೇಜು ಕಟ್ಟಡ ನಿರ್ಮಾಣದಿಂದ ಹಿಡಿದು ನೇಮಕಾತಿಗಳತನಕ ಇಲ್ಲಿ ನಡೆದಿರುವುದು ಯಡ್ಡಿಯ ಹಿಂಬಾಲಕರ ಕರ್ಮಕಾಂಡ!

ಕಾಲೇಜಿಗೆ ವಕ್ಕರಿಸಿದ ಡಕ್ಕರು!

ತಮಗೆ ಅಧಿಕಾರ ಸಿಕ್ಕ ಕೂಡಲೇ ಯಡ್ಡಿ ಮಾಡಿದ ಮೊದಲ ಕೆಲಸವೆಂದರೆ ತಮಗೆ ಬೇಕಾದವರನ್ನು ಕಾಲೇಜಿನ ಆಯಕಟ್ಟಿನ ಸ್ಥಳಗಳಿಗೆ ನೇಮಿಸಿಕೊಂಡಿದ್ದು.

ಭ್ರಷ್ಟಾತಿಭ್ರಷ್ಟನನ್ನು ಆಡಳಿತಾಧಿಕಾರಿಯಾಗಿ ನೇಮಿಸಿದ್ದಾರೆ. ಈ ಕಾಲೇಜಿನ ಕಟ್ಟಡ ನಿರ್ಮಿಸುವಾಗಲೇ ಇದರ ಉಸ್ತುವಾರಿ ನೋಡಿಕೊಳ್ಳುವ ಇಂಜಿನಿಯರ್ ಆಗಿ ನೇಮಕಗೊಂಡು ಹಣದ ರುಚಿ ನೋಡಿದ್ದ ಗಿರಿಯಪ್ಪ ಯಡ್ಡಿಗೆ ಆಪ್ತನಾಗಿರುವ ನಿವೃತ್ತ ಇಂಜಿನಿಯರ್. ಚಿದಾನಂದ ಮತ್ತು ಗಿರಿಯಪ್ಪನದ್ದು ಎಂತಹ ಕರಟಕ ದಮನಕ ಜೋಡಿ ಎಂದರೆ ಸಾರ್ವಜನಿಕ ದುಡ್ಡನ್ನು ಮೇಯುವುದರಲ್ಲಿನ ಪ್ರವೀಣತೆಗೆ ಪ್ರಶಸ್ತಿ ಎಂಬುದೇನಾದರೂ ಇದ್ದರೆ ಇವರಿಬ್ಬರಿಗೆ ಮೊದಲ ಮತ್ತು ದ್ವಿತೀಯ ಬಹುಮಾನ ಶತಸ್ಸಿದ್ಧ! ಇಂಥವರನ್ನು ಈ ಕಾಲೇಜಿನ ಅಭಿವೃದ್ಧಿಗೆಂದು 'ಅಪಾರ ಕಾಳಜಿ' ವಹಿಸಿ ಯಡ್ಡಿ ಸ್ವತಃ ಕರೆತಂದು ಕೂರಿಸಿದ್ದಾರೆ!!

ಹೊಸ ಮೆಡಿಕಲ್ ಕಾಲೇಜಿನ ಆರಂಭವೆಂದರೆ ಮೇಯುವಿಕೆಯ ಇನಾಗರೇಶನ್ ಇದ್ದಂತೆ. ಕಟ್ಟಡಗಳ ನಿರ್ಮಾಣ, ಸಿಬ್ಬಂದಿ ನೇಮಕಾತಿ, ಸಾಮಗ್ರಿಗಳ ಖರೀದಿ... ಹೀಗೆ ಎಲ್ಲೆಲ್ಲೂ ಭ್ರಷ್ಟರಿಗೆ ಸ್ವರ್ಗಗಳೇ ಕಾಣಿಸುತ್ತವೆ. ಈ ಮೆಡಿಕಲ್ ಕಾಲೇಜಿನ ಆರಂಭದಲ್ಲಿ ಮುಖ್ಯ ಆಡಳಿತಾಧಿಕಾರಿಯಾಗಿದ್ದ ಮುಜೀಬುಲ್ಲಾ ಜಫಾರೆ ಎಂಬುವವರು ಅಕ್ರಮ ಮತ್ತು ಅವ್ಯವಹಾರ ನಡೆಯದಂತೆ ಸಾಕಷ್ಟು ಎಚ್ಚರಿಕೆಯಿಂದಲೇ ಹೆಜ್ಜೆ ಇಡುತ್ತಿದ್ದರು. ಆದರೆ ಯಾವಾಗ ಚಿದಾನಂದ ಈ ಕಾಲೇಜಿಗೆ ಪ್ರಾಂಶುಪಾಲನಾಗಿ ವಕ್ಕರಿಸಿದನೋ, ತನಗೆ ತಿನ್ನಲು ಈ ಜಫಾರೆ ಅವಕಾಶ ಮಾಡಿಕೊಡುವುದಿಲ್ಲ ಎಂದರಿತು ಅವರಿಗೆ ಸಾಕಷ್ಟು ಕಿರುಕುಳ ನೀಡಿ ಇಲ್ಲಿಂದ ಓಡಿಸಿಯೇ ಬಿಟ್ಟ.

ಲೂಟಿಗೆ ಮಿತಿಯೇ ಇಲ್ಲ

ಚಿದಾನಂದ ಮತ್ತು ಗಿರಿಯಪ್ಪ ಜೊತೆಗೂಡಿ ಸಿಬ್ಬಂದಿ ನೇಮಕಾತಿಯಲ್ಲಿ ಗೋಲ್‌ಮಾಲ್ ನಡೆಸಿ ಕೋಟ್ಯಂತರ ರೂ. ದೋಚಿದ್ದಾರೆ. ನೇಮಕಾತಿಗೆ ಸಂಬಂಧಿಸಿದಂತೆ ಯಾವೊಂದು ನಿಯಮವನ್ನೂ ಪಾಲಿಸಿಲ್ಲ ಮಾತ್ರವಲ್ಲ ರೋಸ್ಟರ್ ಪದ್ಧತಿಯನ್ನೂ ಅನುಸರಿಸಿಲ್ಲ. ಸ್ಪರ್ಧಾತ್ಮಕ ಪರೀಕ್ಷೆ ನಡೆಸದೇ ಕಾಟಾಚಾರಕ್ಕೊಂದು ಪರೀಕ್ಷೆ ಅಂತ ಮಾಡಿ ದುಡ್ಡು ಕೊಟ್ಟವರನ್ನು ಪಾಸ್ ಮಾಡಿ ನೇಮಿಸಿಕೊಂಡಿದ್ದಾರೆ.

ಹೋಗಲಿ ದುಡ್ಡು ಕೊಟ್ಟವರೆಲ್ಲರಿಗೂ ಕೆಲಸ ಸಿಕ್ಕಿದೆಯೇ ಎಂದರೆ ಅದೂ ಇಲ್ಲ. ಕೆಲಸ ಕೊಡುತ್ತೇನೆ ಎಂದು ಹೇಳಿ ಒಬ್ಬೊಬ್ಬ ಅಭ್ಯರ್ಥಿಯಿಂದ ಕನಿಷ್ಠ ಒಂದೂವರೆಯಿಂದ ಎರಡು ಲಕ್ಷ ಎತ್ತಿರುವ ಚಿದಾನಂದ ಈಗ ಅವರಿಗೆಲ್ಲ ಮೂರು ನಾಮ ತಿಕ್ಕುವ ತಯಾರಿಯಲ್ಲಿದ್ದಾನೆ. ಏಕೆಂದರೆ ಮೆಡಿಕಲ್ ಕಾಲೇಜಿನಲ್ಲಿ ಇರುವ ಒಟ್ಟು ಹುದ್ದೆಗಳಿಗಿಂತ ಅದೆಷ್ಟೋ ಪಟ್ಟು ಜಾಸ್ತಿ ಜನರಿಂದ ಈತ ಹಣ ವಸೂಲಿ ಮಾಡಿದ್ದಾನೆ. ಅಂದಮಾತ್ರಕ್ಕೆ ಲಂಚ ಕೊಟ್ಟ ಎಲ್ಲರಿಗೂ ಕೆಲಸ ಕೊಡಲು ಸಾಧ್ಯವೆ?

ಹಣ ಕೊಟ್ಟವರೆಲ್ಲ ಒಮ್ಮೆ ಒಗ್ಗಟ್ಟಾಗಿ "ಕೆಲಸ ಸಿಗದಿದ್ದರೂ ಪರವಾಗಿಲ್ಲ ನಮ್ಮ ಹಣವನ್ನಾದರೂ ವಾಪಸ್ ಕೊಡಿ" ಎಂದು ಚಿದಾನಂದನನ್ನು ಕೇಳಿದರೆ, ಆತ "ಮುಖ್ಯಮಂತ್ರಿಯ ಹತ್ತಿರ ಈ ವಿಷಯ ಮಾತನಾಡಿದ್ದೇನೆ. ಅವರು ನಿಮ್ಮನ್ನೆಲ್ಲಾ ಕಾಯಂ ಮಾಡುತ್ತಾರೆ" ಎಂದು ಹೇಳಿ ಅವರಿಂದ ಬಚಾವಾಗಲೂ ಯತ್ನಿಸಿದ್ದಾನೆ. ಸಾಲ ಮಾಡಿ, ಆಸ್ತಿ ಮಾರಿ ಹಣ ಕೊಟ್ಟವರೆಲ್ಲಾ ಈಗ ಅತ್ತ ಕೆಲಸವೂ ಇಲ್ಲ, ಇತ್ತ ಹಣ ವಾಪಸ್ಸೂ ಇಲ್ಲ ಎಂದು ಶಿವಮೊಗ್ಗದ ಬೀದಿ ಬೀದಿಗಳಲ್ಲಿ ಬಾಯಿ ಬಡಿದುಕೊಳ್ಳುತ್ತಾ ಚಿದಾನಂದನಿಗೆ ಹಿಡಿ ಶಾಪ ಹಾಕಿಕೊಂಡು ಓಡಾಡುತ್ತಿದ್ದಾರೆ.

ಪ್ರೊಫೆಸರ್‌ಗಳ ನೇಮಕಾತಿ ಮಾಡಿಕೊಳ್ಳುವಾಗಲೂ ಡೀಲ್ ಮಾಡಿರುವ ಈ ಜೋಡಿ, ಹಣಕೊಟ್ಟವರನ್ನು ಮೂರು ವರ್ಷಗಳಿಗೆ, ಹಣ ಕೊಡದೇ ಇದ್ದವರನ್ನು ಹನ್ನೊಂದು ತಿಂಗಳಿಗೆ ನೇಮಕ ಮಾಡಿಕೊಂಡಿದ್ದಾನೆ. ಕೆಲಸಕ್ಕೆ ಬನ್ನಿ ಎಂದು ಕರೆದರೂ ಈ ಹುದ್ದೆಗೆ ಯಾರೂ ಬರುತ್ತಿಲ್ಲವಾದ್ದರಿಂದ ಇಲ್ಲಿ ಹೆಚ್ಚಿನ ಲೂಟಿ ಸಾಧ್ಯವಾಗಿಲ್ಲ.

ಹಣ 'ಬಲ'ದ ಆಧಾರದ ಮೇಲೆ ವಿವಿಧ ವಿಭಾಗಗಳ ಎಚ್‌ಒಡಿಗಳ ನೇಮಕಾತಿ ಮಾಡಲಾಗಿದೆ. ಸರ್ಜರಿಯ ಎಚ್‌ಒಡಿ ಆಗಿರುವ ಸುಶಿಲ್ ಕುಮಾರ್, ಅರವಳಿಕೆ ಎಚ್‌ಒಡಿ ರವೀಂದ್ರ ಮತ್ತು ಎಚ್.ಎಸ್. ಹೆಗ್ಡೆ ಅನುಭವ ಇಲ್ಲದಿದ್ದರೂ ಬೋಗಸ್ ಸರ್ಟಿಫಿಕೇಟ್ ಕೊಟ್ಟು, ಕೆಲಸ ಗಿಟ್ಟಿಸಿಕೊಂಡಿದ್ದಾರೆ. ಬೋಧನೆ ಜೊತೆಗೆ ಉಪನ್ಯಾಸಕರು ಆಸ್ಪತ್ರೆಯಲ್ಲಿಯೂ ಕೆಲಸ ಮಾಡಬೇಕೆಂಬ ಸರ್ಕಾರಿ ನಿಯಮವಿದೆ. ಆದರೆ ಚಿದಾನಂದನ ಆಡಳಿತದಲ್ಲಿ, ದುಡ್ಡು ಕೊಟ್ಟವರು ಏನು ಬೇಕಾದರೂ ಮಾಡಬಹುದು. ಕೊಟ್ಟ ಲಂಚವನ್ನು ಗಿಟ್ಟಿಸಿಕೊಳ್ಳಲು ಕೊನೆಗೆ ರೋಗಿಗಳನ್ನೂ ಸುಲಿಯಬಹುದು!

ಗಿರಿಯಪ್ಪ ತನ್ನ ನೆಂಟನಾದ ಗೋಪಿನಾಥ ಎಂಬುವವನಿಗೆ ಈ ಕಾಲೇಜಿನಲ್ಲಿ 'ಸೇವೆ' ಮಾಡಲು ಅವಕಾಶ ಮಾಡಿಕೊಡುವ ಮೂಲಕ ಸ್ವಜನಪಕ್ಷಪಾತ ಮೆರೆದಿದ್ದಾನೆ. ರಾಷ್ಟ್ರೀಯ ಫಾರ್ಮಸಿ ಕಾಲೇಜಿನಲ್ಲಿ ಪಾಠ ಮಾಡುತ್ತಿದ್ದ ಗೋಪಿನಾಥನನ್ನು ಮೆಡಿಕಲ್ ಕಾಲೇಜಿನಲ್ಲಿ ಕೆಮಿಸ್ಟ್ ಆಗಿ ನೇಮಕ ಮಾಡಿಕೊಳ್ಳಲಾಗಿದೆ. ತಿಂಗಳಲ್ಲಿ ಹೆಚ್ಚೆಂದರೆ ಮೂರ್ನಾಲ್ಕು ದಿನ ಇಲ್ಲಿ ಕೆಲಸ ಮಾಡಿದ ಗೋಪಿನಾಥನ ತಿಂಗಳ ಸಂಬಳ 11,900 ರೂ!

ಆಡಳಿತ ಮಂಡಳಿ ಸದಸ್ಯರಿಗೂ ಟೋಪಿ

ಈ ಕಾಲೇಜಿನಲ್ಲಿ ನೆಪಮಾತ್ರಕ್ಕೊಂದು ಆಡಳಿತ ಮಂಡಳಿಯಿದೆ. ಅಂದರೆ "ಆಟಕ್ಕೆ ಆಡಳಿತ ಮಂಡಳಿ, ಊಟಕ್ಕೆ ಗಿರಿಯಪ್ಪ-ಚಿದಾನಂದರ ಜೋಡಿ" ಎಂಬ ಮಾತು ಕಾಲೇಜು ಆವರಣದಾದ್ಯಂತ ಕೇಳಿಬರುತ್ತದೆ. ಈ ಒಂದು ಉದಾಹರಣೆಯನ್ನೇ ನೋಡಿ: ಜುಲೈ ಎರಡರಂದು ಬೆಂಗಳೂರಿನಲ್ಲಿ ಕಾಲೇಜಿನ ಆಡಳಿತ ಮಂಡಳಿ ಸಭೆ ನಡೆದಿತ್ತು, ಈ ಸಭೆಯಲ್ಲಿ ಖರೀದಿ ವ್ಯವಹಾರ, ಶುಶ್ರೂಷಕರು, ಪ್ರಯೋಗಶಾಲಾ ತಂತ್ರಜ್ಞರ ಕಾಯಂ, ಸಂಸ್ಥೆಯ ನಿರ್ದೇಶಕರ ಸೇವಾ ವಯೋಮಿತಿ ವಿಸ್ತರಣೆ, ನಿವೃತ್ತ ಬೋಧಕ ಸಿಬ್ಬಂದಿಗಳ ಸಂಚಿತ ವೇತನ ನಿಗದಿ, ಸಂಸ್ಥೆಗೆ ನೇಮಕಗೊಂಡಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಪಟ್ಟಿಗೆ ಅನುಮೋದನೆ ಮುಂತಾದ ಮಹತ್ವದ ವಿಷಯಗಳ ಕುರಿತು ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿತ್ತು, ಆದರೆ ಆಡಳಿತ ಮಂಡಳಿಯ ಯಾವೊಬ್ಬ ಸದಸ್ಯರೂ ಈ ಸಭೆಯಲ್ಲಿ ಭಾಗವಹಿಸಲಿಲ್ಲ, ಅವರ ಅನುಪಸ್ಥಿತಿಯಲ್ಲಿ ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳಬಾರದು ಎಂಬ ಕನಿಷ್ಠ ತಿಳಿವಳಿಕೆಯೂ ಚಿದಾನಂದ-ಗಿರಿಯಪ್ಪರಿಗಿಲ್ಲ. ವಾಸ್ತವದಲ್ಲಿ ಅವರಿಬ್ಬರೂ ಬಯಸಿದ್ದೂ ಅದನ್ನೇ ಅಲ್ಲವೆ? ಯಡ್ಡಿಗೆ ಹತ್ತಿರದವರಾದ ಈ ಜೋಡಿಯ ಲೂಟಿ ನೋಡಿ, ಆಡಳಿತ ಮಂಡಳಿ ಸದಸ್ಯರು ಬಿಟ್ಟ ಬಾಯನ್ನು ಇನ್ನೂ ಮುಚ್ಚಿಯೇ ಇಲ್ಲ!

ಉಗಿಸಿಕೊಂಡರೂ ಬುದ್ಧಿ ಬರಲಿಲ್ಲ!


ಈ ಕಪಟ ಜೋಡಿಯ ಹಗರಣಗಳು ಶಿವಮೊಗ್ಗೆಯಲ್ಲಿ ಚರ್ಚೆಯ ವಿಷಯವಾಗುತ್ತಿದ್ದಂತೆಯೇ ಪ್ರಾಂಶುಪಾಲ ಚಿದಾನಂದ ಆಗಸ್ಟ್ 13ರಂದು ಮತ್ತೊಂದು ನೇಮಕಾತಿ ಜಾಹೀರಾತು ನೀಡಿದ್ದಾನೆ. ಉದ್ಯೋಗ ನೇಮಕಾತಿಗೆ ಪ್ರಕಟಣೆ ನೀಡುವಾಗ ಕೆಲವೊಂದು ಕನಿಷ್ಠ ನಿಯಮಗಳನ್ನು ಪಾಲಿಸಬೇಕು. ಆದರೆ ಚಿದಾನಂದ ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ರೋಸ್ಟರ್ ನಿಯಮವಿಲ್ಲದ ಪ್ರಕಟಣೆ ನೀಡಿದ್ದಾನೆ. ಗಿರಿಯಪ್ಪನ ನೆಂಟ ಗೋಪಿನಾಥನ ಕೆಲಸ ಉಳಿಸಲೆಂದೇ ಈ ಹುದ್ದೆಗೆ ಪ್ರಕಟಣೆ ನೀಡುವಾಗ ಎರಡು ವರ್ಷಗಳ ಸೇವಾನುಭವ ಕೇಳಲಾಗಿದೆ.

[illegible] ಒಳಹೊಕ್ಕರೆ ಭ್ರಷ್ಟಾಚಾರದ ಗಬ್ಬು [illegible] ಬಡಿಯುತ್ತದೆ. ಆದರೆ ನೆಪಮಾತ್ರಕ್ಕೆ ಪ್ರಾಮಾಣಿಕತೆಯ [illegible] ಮಾತನಾಡುವ ಚಡ್ಡಿಗಳಿಗೆ ಈ ದುರ್ನಾತ [illegible] ಸುವಾಸನೆಯಂತೆ ಭಾಸವಾಗುತ್ತಿದ್ದರೆ ಅಶ್ಚರ್ಯವೇನಿಲ್ಲ. ■

ಚೆಡ್ಡಿ ದತ್ತಾತ್ರಿಯ ದ್ರೋಹ ಪ್ರೇಮ!

ಚಿದಾನಂದ ಮತ್ತು ಗಿರಿಯಪ್ಪ ಜೋಡಿಯ ಹಗಲು ದರೋಡೆಯನ್ನು ಬೆಳಕಿಗೆ ತಂದಿದ್ದು ಶಿವಮೊಗ್ಗೆಯ ಸ್ಥಳೀಯ ಪತ್ರಿಕೆ 'ನಮ್ಮ ನಾಡು'. ಆ ಪತ್ರಿಕೆಯಲ್ಲಿ ಕಾಲೇಜಿನ ಒಂದೊಂದೇ ಹಗರಣಗಳು ದಾಖಲೆ ಸಾಹಿತ ಬಹಿರಂಗಗೊಳ್ಳುತ್ತಿದ್ದಂತೆಯೇ ಇವರಿಬ್ಬರೂ "ಇದಕ್ಕೆಲ್ಲ 'ಡಿ' ಗ್ರೂಪಿನ ಗುತ್ತಿಗೆ ನೌಕರರೇ ಕಾರಣ" ಎಂದು ಅವರ ಮೇಲೆ ಎರಗಿ ಬಿದ್ದರು.

ಈ ಗುತ್ತಿಗೆ ನೌಕರರನ್ನು ಚಿದಾನಂದ ಮತ್ತು ಗಿರಿಯಪ್ಪ ನೇಮಕ ಮಾಡಿಕೊಂಡಿದ್ದು ಪ್ರೈವೇಟ್ ಎಂಪ್ಲಾಯ್‌ಮೆಂಟ್ ಬ್ಯೂರೋದ ಸುರೇಶ್ ಬಾಳೆಗುಂಡಿ ಮೂಲಕ. ಈಗ ಈ ಏಜೆನ್ಸಿಯನ್ನೇ ಬಳಸಿಕೊಂಡು ಗುತ್ತಿಗೆ ನೌಕರರಿಗೆ ಕೊಡಬಾರದ ಕಿರುಕುಳ ಕೊಟ್ಟಿದ್ದಾರೆ.



ದತ್ತಾತ್ರಿ

ಗಿರಿಯಪ್ಪನ ಈ ರೌಡಿಸಂಗೆ ಬೆಂಬಲ ನೀಡಿದ ಮಹಾಶಯನೆಂದರೆ ಬಿಜೆಪಿಯ ಯುವ ನಾಯಕ ದತ್ತಾತ್ರಿ. ಈತ ಈ ಏಜೆನ್ಸಿಯ ಪಾಲುದಾರ ಕೂಡ. ಕಾಲೇಜಿನಿಂದ ಪ್ರತಿ 'ಡಿ' ಗ್ರೂಪ್ ನೌಕರರ ಹೆಸರಿನಲ್ಲಿ 4,800 ರೂ. ಸಂಬಳ ಪಾವತಿಸಿಕೊಳ್ಳುವ ಈತ ನೌಕರರಿಗೆ ಕೊಡುತ್ತಿರುವುದು ಕೇವಲ 2,062 ರೂ. ಮಾತ್ರ. ಹೇಗಿದೆ ದತ್ತಾತ್ರಿಯ ಡಬ್ಬಲ್-ಬ್ಲೇಡ್ ಏಜೆನ್ಸಿ?

ಆದರೂ ಈತ ಬಡವರ ಪರವಾಗಿ, ದೇಶಭಕ್ತಿಯ ಬಗ್ಗೆ ಬಹಳ ಚೆನ್ನಾಗಿ ಭಾಷಣ ಬಿಗಿಯುತ್ತಾನೆ!

ಯಾವಾಗ ತನ್ನ ಬಂಡವಾಳ ಬಯಲಾಗುತ್ತದೆ ಎಂಬ ಅನುಮಾನ ಬಂತೋ, ಆತ ಬಡ ನೌಕರರಿಂದ ಉದ್ಯೋಗ ಕಿತ್ತುಕೊಳ್ಳುವುದಾಗಿ ಬೆದರಿಸಲಾರಂಭಿಸಿದ್ದಾನೆ. ಎಷ್ಟರಮಟ್ಟಿಗೆ ಎಂದರೆ, ಪತ್ರಿಕೆಯಲ್ಲಿ ತನ್ನ ಭ್ರಷ್ಟಾಚಾರದ ಬಗ್ಗೆ ಬಂದಿದ್ದೆಲ್ಲಾ ಸುಳ್ಳು ಎಂದು ಬಿಳಿ ಹಾಳೆಯ ಮೇಲೆ ಬರೆದುಕೊಂಡು ಅದಕ್ಕೆ ನೌಕರರಿಂದ ಬಲವಂತವಾಗಿ ಸಹಿ ಹಾಕಿಸಿಕೊಂಡಿದ್ದಾನೆ. ಅಲ್ಲದೇ ಖಾಲಿ ಹಾಳೆಯ ಮೇಲೆ ಸಹಿಹಾಕಿದವರಿಗೆ ಮಾತ್ರ ಉದ್ಯೋಗ ಕೊಡುವುದಾಗಿ ಧಮಕಿ ಹಾಕಿದ್ದಾನೆ. ಈಗಾಗಲೇ ನೌಕರಿಯ ಆಸೆಗಾಗಿ ಹಣ ಕಳೆದುಕೊಂಡಿರುವ ನೌಕರರು ದತ್ತಾತ್ರಿಯ ದೌರ್ಜನ್ಯವನ್ನು ಅಸಹಾಯಕರಾಗಿ ಅನುಭವಿಸುತ್ತಿದ್ದಾರೆ. ಇದು ದತ್ತಾತ್ರಿ ಎಂಬ 'ದೇಶಪ್ರೇಮಿ'ಯ ದೇಶದ್ರೋಹದ ಕತೆ!

ಯಡ್ಡಿಗೆ ಭ್ರಷ್ಟನೇ ಬಲಗೈ!

[illegible] ಇಲ್ಲಿಯವರೆಗೂ ಮೆಡಿಕಲ್ ಕಾಲೇಜಿನ ಆಡಳಿತಾಧಿಕಾರಿಯಾಗಿ ನೇಮಕಗೊಂಡಿರುವ ಗಿರಿಯಪ್ಪನ ಲೂಟಿ ವಿರುದ್ಧ ಸಾರ್ವಜನಿಕರು ಪ್ರತಿಭಟಿಸಲಾರಂಭಿಸಿದರು. [illegible] ಸಂತೋಷ್ [illegible] ಕೆಲವರು ಬೀದಿಗಿಳಿದರು. [illegible] ಯಡ್ಡಿ ಪಡೆ. ಗಿರಿಯಪ್ಪನನ್ನು ಆಡಳಿತಾಧಿಕಾರಿ [illegible] ಆದರೆ ಲೂಟಿ ಮಾಡಿ ತನಗೆ [illegible] ನೀಡಿದ ಗಿರಿಯಪ್ಪನನ್ನು [illegible] ಆದ್ದರಿಂದ ಯಡ್ಡಿ [illegible] ಆಡಳಿತಾಧಿಕಾರಿಯಾಗಿ ಈಗ ನೇಮಿಸಿಕೊಂಡಿದ್ದಾರೆ! ಮೇಯಲು [illegible] ಯಡ್ಡಿ [illegible] ಅಭಿವೃದ್ಧಿ ಎಂದರೆ ಇದೇ ಇರಬೇಕು!



ಸಫಿಯಾಳನ್ನು ತಾನು ಏಕೆ ಕೊಲೆ ಮಾಡಿದೆನೆಂದು ಹಂಜ ಇನ್ನೂ ಬಾಯಿ ಬಿಡದಿದ್ದರೂ ಆಕೆ ಗರ್ಭಿಣಿಯಾಗಿದ್ದು, ಗರ್ಭಪಾತ ಮಾಡಿಸಲು ಹಂಜ ಆಕೆಗೆ ಮಾತ್ರೆಗಳನ್ನು ಕೊಟ್ಟನೆಂದೂ, ಇದರಿಂದಾಗಿ ಗರ್ಭಪಾತ, ರಕ್ತಸ್ರಾವ ಮತ್ತು ಮಾತ್ರೆಯ ಅತಿ ಸೇವನೆಯ ಪರಿಣಾಮದಿಂದ ಆಕೆಯ ಮೈಮೇಲೆ ಗುಳ್ಳೆಗಳೆದ್ದು ಆಕೆ ಬೋಧರಹಿತಳಾದಾಗ ಹಂಜ ಆಕೆಯ ಕೊಲೆ ಮಾಡಿದನೆಂಬುದೂ ಪೊಲೀಸರ ಅನಿಸಿಕೆಯಾಗಿದೆ.




ಸಫಿಯಾ ಎಂಬ ಬಾಲಕಿಯ ಅಮಾನುಷ ಕೊಲೆ

ಸಾರಾ ಅಬೂಬಕ್ಕರ್

ಕೆಲವು ತಿಂಗಳುಗಳ ಹಿಂದೆ ಕಾಸರಗೋಡಿನಲ್ಲಿ ನಡೆದ ಕೋಮು ಗಲಭೆಯ ಸಂದರ್ಭದಲ್ಲಿ ಅಲ್ಲಿ ನಡೆದ ಇನ್ನೊಂದು ಘಟನೆಯ ಕುರಿತು ಪತ್ರಿಕೆಗಳಲ್ಲಿ ವರದಿ ಬರಲಾರಂಭಿಸಿತ್ತು. ಸಫಿಯಾ ಎಂಬ 14 ವರ್ಷದ ಹೆಣ್ಣುಮಗಳೊಬ್ಬಳು ಕಾಣೆಯಾದ ಕುರಿತು ವರದಿ ಅದಾಗಿತ್ತು.

ಸಫಿಯಾಳ ತಾಯಿ ಆಯಿಷಾ ಮತ್ತು ತಂದೆ ಮೊಯಿದೀನ್ ಮಡಿಕೇರಿಯವರು. ಸಫಿಯಾ ಇವರ ಹಿರಿಯ ಮಗಳಾಗಿದ್ದು ಇವರಿಗೆ ಮೂರು ಜನ ಗಂಡು ಮಕ್ಕಳೂ ಇದ್ದರು. ಇವರು ಕೂಲಿ ಕೆಲಸ ಮಾಡಿಕೊಂಡು ಬಡತನದಲ್ಲಿ ಬದುಕುತ್ತಿದ್ದರೂ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದರು. ಎರಡು ವರ್ಷಗಳ ಹಿಂದೆ ಸಫಿಯಾ 6ನೇ ತರಗತಿಯಲ್ಲಿದ್ದಾಗ ಇವರ ಪರಿಚಯದ ಮೊಯಿದು ಹಾಜಿ ಎಂಬುವರು ಕಾಸರಗೋಡಿನ ಹಂಜ ಎಂಬವರೊಡನೆ ಇವರ ಮನೆಗೆ ಬಂದು ಸಫಿಯಾಳನ್ನು ಹಂಜನ ಮನೆಗೆ ಕಳುಹಿಸಲು ಆಯಿಷಾ ಮತ್ತು ಮೊಯಿದು ದಂಪತಿಗಳ ಮನವೊಲಿಸತೊಡಗಿದರು. ತನ್ನ ಮಗಳು ಶಾಲೆಗೆ ಹೋಗುತ್ತಿದ್ದಾಳೆಂದಾಗ, "ನಿಮ್ಮ ಮಗಳನ್ನು ನಾವು ನಮ್ಮ ಊರಿನಲ್ಲಿ ನಮ್ಮ ಮಕ್ಕಳೊಡನೆ ಶಾಲೆಗೆ ಕಳುಹಿಸುತ್ತೇವೆ. ಅವಳು ನಮ್ಮ ಮಕ್ಕಳೊಡನೆ ಆಡಿಕೊಂಡು ಮಕ್ಕಳೊಡನೆ ಶಾಲೆಗೆ ಹೋಗುತ್ತಿರಲಿ" ಎಂದು ಪುಸಲಾಯಿಸ ತೊಡಗಿದ್ದಲ್ಲದೆ ಹಣದ ಆಮಿಷವನ್ನೂ ಒಡ್ಡಿದರು. ಹೆಣ್ಣು ಹುಡುಗಿಯ ಮದುವೆಗೆ ಹಣ ಬೇಕೇಬೇಕು. ತಮ್ಮ ಬಳಿ ಏನೂ ಇಲ್ಲ. ಅವಳು ಈ ಶ್ರೀಮಂತರ ಮನೆಯಲ್ಲಿ ಒಂದೆರಡು ವರ್ಷ ಇದ್ದರೆ ಅವಳ ಮದುವೆಗೆ ಅನುಕೂಲವಾಗಬಹುದೆಂದು ಈ ದಂಪತಿಗಳು ಹಿಂಜರಿಯುತ್ತಲೇ ಮಗಳನ್ನು ಕಾಸರಗೋಡಿಗೆ ಕಳುಹಿಸಿದರು. ಹಂಜ ಎಂಬುವರ ಮನೆಯಲ್ಲಿ ತಮ್ಮ ಮಗಳು ಶಾಲೆಗೆ ಹೋಗುತ್ತಾ ಸುಖವಾಗಿದ್ದಾಳೆಂದು ಇವರು ತಿಳಿದಿದ್ದರು. ಕೆಲವು ತಿಂಗಳ ಬಳಿಕ ಆಕೆ ಒಮ್ಮೆ ಮಡಿಕೇರಿಗೆ ಹೋಗಿ ಬಂದಳು.




ಹಂಜ ಎಂಬವನು ಗೋವಾದಲ್ಲಿ ಗುತ್ತಿಗೆದಾರನಾಗಿದ್ದು, ಆಗಾಗ ಗೋವಾಕ್ಕೆ ಹೋಗಿ ಬರುತ್ತಿದ್ದನು. ಒಂದು ದಿನ ಹಂಜ ಮೊಯಿದೀನ್‌ಗೆ ಫೋನ್ ಮಾಡಿ "ನಾವೆಲ್ಲರೂ ಸಫಿಯಾಳನ್ನು ಕರೆದುಕೊಂಡು ಗೋವಾಕ್ಕೆ ಹೋಗುತ್ತಿದ್ದೇವೆ. ಅವಳಿಗೆ ಊರು ತೋರಿಸಿ ಹಿಂದೆ ಕರೆತರುತ್ತೇವೆ" ಎಂದನು. ಕೆಲವು ತಿಂಗಳ ಬಳಿಕ, 2006ರ ಡಿಸೆಂಬರ್ ತಿಂಗಳಲ್ಲಿ ಆತನು ಮತ್ತೊಮ್ಮೆ ಮೊಯಿದೀನ್‌ಗೆ ಫೋನ್ ಮಾಡಿ "ನೀವು ಕೂಡಲೇ ಕಾಸರಗೋಡಿಗೆ ಬನ್ನಿ. ನಾವೂ ಕಾಸರಗೋಡಿಗೆ ಹೊರಟಿದ್ದೇವೆ" ಎಂದು ಗೋವಾದಿಂದಲೇ ಫೋನ್ ಮಾಡಿದನು. ಈ ದಂಪತಿಗಳು ಮಗಳನ್ನು ನೋಡಲು ಕೂಡಲೆ ಕಾಸರಗೋಡಿಗೆ ಹೊರಟರು. ಅಲ್ಲಿ ಮಗಳನ್ನು ಕಾಣದೆ, "ಸಫಿಯಾ ಎಲ್ಲಿ?" ಎಂದು ಕೇಳಿದಾಗ "ನಿಮ್ಮ ಮಗಳು ಈಗ ಮಕ್ಕಳೊಡನೆ ಅಂಗಳದಲ್ಲಿ ಆಡುತ್ತಿದ್ದಳು. ಈಗ ಕಾಣಿಸುತ್ತಿಲ್ಲ" ಎನ್ನುತ್ತಾ ಹುಡುಗಿಯನ್ನು ಹುಡುಕಾಡಿದಂತೆ ಮಾಡಿದನು. ಬಳಿಕ, "ನೀವೇನೂ ಯೋಚನೆ ಮಾಡಬೇಡಿ. ಅವಳು ಬರುತ್ತಾಳೆ. ದೇವರೊಡನೆ ದುವಾ ಮಾಡಿ" ಎಂದು ದಂಪತಿಗಳನ್ನು ಸಂತೈಸಿ ಊರಿಗೆ ಕಳುಹಿಸಿದನು. ಮಗಳು ಕಾಣೆಯಾದ ಕುರಿತು ಪೊಲೀಸ್ ಸ್ಟೇಷನ್ನಿನಲ್ಲಿ ದೂರು ನೀಡಬೇಕೆಂದೂ ಈ ದಂಪತಿಗಳಿಗೆ ತಿಳಿಯಲಿಲ್ಲ.

ಆ ಬಳಿಕ ಇವರು ಹಲವು ಬಾರಿ ಮಡಿಕೇರಿಯಿಂದ ಕಾಸರಗೋಡಿಗೆ ಬಂದು ಮಗಳ ಕುರಿತು ವಿಚಾರಿಸುತ್ತಿದ್ದರು. ಆಗೆಲ್ಲ ಹಂಜ ಅವರನ್ನು ದರ್ಗಾಗಳಿಗೂ, ಇನ್ನಿತರ ಮೌಲ್ವಿಗಳ ಬಳಿಗೂ ಕಳುಹಿಸುತ್ತಿದ್ದನು. ಮೌಲ್ವಿಗಳು, ಸಫಿಯಾ ಸುಖವಾಗಿರುವಳೆಂದೂ, ಅವಳಿಗೆ ಯಾವ ಅಪಾಯವೂ ಆಗಿಲ್ಲವೆಂದೂ ಅವಳು ಕೆಲವು ದಿನಗಳ ಬಳಿಕ ಬರುವಳೆಂದೂ ಆಶ್ವಾಸನೆ ನೀಡುತ್ತಿದ್ದರು. ಹಾಗೆಯೇ ದರ್ಗಾಗಳಿಗೆ ಹರಕೆ ಹೊತ್ತು ಹಿಂತಿರುಗುತ್ತಿದ್ದರು. ಹೀಗೆಯೇ ವರ್ಷವೊಂದು ಉರುಳಿತು.

ಈ ವಿಷಯ ತಿಳಿದ ಇವರ ಪರಿಚಿತರು ಪೊಲೀಸ್ ಠಾಣೆಯಲ್ಲಿ ದೂರು ಕೊಡಲು ತಿಳಿಸಿದಾಗ ಹಂಜ ತಾನೇ ಅರ್ಜಿ ಬರೆದು ಇವರಿಂದ ಸಹಿ ಹಾಕಿಸಿದನು. ಅದರಲ್ಲಿ ಏನು ಬರೆದಿದೆಯೆಂದೂ ಇವರಿಗೆ ತಿಳಿಯಲಿಲ್ಲ. ಇವರನ್ನೂ ಕರೆದೊಯ್ದು ಪೊಲೀಸ್ ಠಾಣೆಯಲ್ಲಿ ಅರ್ಜಿ ಸಲ್ಲಿಸಿದನು. ಪೊಲೀಸರು ಮೊಯಿದೀನನನ್ನೇ ತರಾಟೆಗೆ ತೆಗೆದುಕೊಂಡರು. "ಮಗಳನ್ನು ಮಡಿಕೇರಿಯಲ್ಲಿ ಬಿಟ್ಟು ಬಂದು ಹಂಜನಿಂದ ಹಣ ವಸೂಲು ಮಾಡಲು ಈ ರೀತಿ ದೂರು ಕೊಡುತ್ತಿದ್ದೀಯೊ?" ಎಂದು ಆತನನ್ನು ಲಾಕಪ್ಪಿಗೆ ತಳ್ಳಿ ಹಿಂಸಿಸಿದರು. ಮರುದಿನ ಆಯಿಷಾ ಠಾಣೆಗೆ ಹೋಗಿ ಅತ್ತು ಕರೆದು ಗಂಡನನ್ನು ಬಿಡಿಸಿಕೊಂಡಳು. ಪೊಲೀಸರು ಈ ಬಡ ದಂಪತಿಗಳಿಗೆ ಯಾವ ವಿಧದಲ್ಲೂ ನೆರವಾಗಲಿಲ್ಲ.

ಈ ಸಂದರ್ಭದಲ್ಲಿ ಈ ದಂಪತಿಗಳಿಗೆ ನೆರವಾಗಲು ಕೆಲವು ಮಾನವ ಹಕ್ಕುಗಳ ಸಂಘಟನೆಗಳು ಕಾರ್ಯಾಚರಿಸ ತೊಡಗಿದವು. ಕಾಞಂಗಾಡಿನ ಎ.ಕೆ. ಮಹಮ್ಮದ್ ಎಂಬುವರು ಕನ್ವೀನರ್ ಆಗಿಯೂ, ಅಂಬಲತ್ತರ ಕುಂಞ ಕೃಷ್ಣನ್ ಎಂಬುವರು ಕಾರ್ಯದರ್ಶಿಯಾಗಿಯೂ ಇರುವ ಆಕ್ಷನ್ ಕಮಿಟಿ ಒಂದು ಸಿದ್ಧವಾಯಿತು. ಇವರು ಎರ್ನಾಕುಳಂನ ಮುಖ್ಯ ನ್ಯಾಯಾಲಯದಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿ ಸಫಿಯಾಳನ್ನು ಹುಡುಕಿಸಿಕೊಡಬೇಕೆಂದು ವಿನಂತಿಸಿದರು. ನ್ಯಾಯಾಲಯ ಸರ್ಕಾರಕ್ಕೆ ವಿಷಯ ತಿಳಿಸಿತು. ಆದರಿಂದ ಹೆಚ್ಚಿನ ಪ್ರಯೋಜನ ದೊರೆಯದಿದ್ದಾಗ ಆಕ್ಷನ್ ಕಮಿಟಿ ಕಾಸರಗೋಡಿನ ಬಸ್‌ಸ್ಟಾಂಡ್ ಬಳಿ ಚಪ್ಪರ ಹಾಕಿ,







ಪೊಲೀಸರ ನಿಷ್ಕ್ರಿಯತೆಯ ಕುರಿತು ಈ ದಂಪತಿಗಳು ಸತ್ಯಾಗ್ರಹವನ್ನಾರಂಭಿಸಲು ಅನುವು ಮಾಡಿಕೊಟ್ಟರು. ಈ ಕುರಿತು ಪತ್ರಿಕೆಗಳಲ್ಲಿ ವರದಿಗಳು ಬರಲಾರಂಭಿಸಿದವು. ಸಾಹಿತಿಗಳೂ, ಪತ್ರಕರ್ತರೂ ಈ ಹೋರಾಟದಲ್ಲಿ ಭಾಗವಹಿಸಿದರು. ಒಂದು ದಿನ ನಾನು ಅಲ್ಲಿಗೆ ಹೋಗಿ ನನ್ನ ಬೆಂಬಲವನ್ನೂ ಸೂಚಿಸಿ ಬಂದೆ.

ಆಯಿಷಾ ಒಮ್ಮೆ ಪೊಲೀಸ್ ಠಾಣೆಯಲ್ಲಿ ಡಿಎಸ್‌ಪಿಯೊಡನೆ "ಹಂಜನಿಗೆ ಒದೆ ಕೊಟ್ಟು ಆತನ ಬಾಯಿ ಬಿಡಿಸಿ"ಎಂದಾಗ, "ನೀನೆ ಒದೆ ಕೊಡು" ಎಂದು ಆತನು ಆಕೆಯನ್ನು ಗದರಿಸಿ ಹಿಂದಕ್ಕಟ್ಟಿದನು. ಕೊನೆಗೊಮ್ಮೆ ಕೇರಳದ ಗೃಹಮಂತ್ರಿ ಕೊಡಿಯೇರಿ ಬಾಲಕೃಷ್ಣನ್ ಕಾಸರಗೋಡಿಗೆ ಬಂದಾಗ ಈ ದಂಪತಿಗಳು ಅವರ ಮುಂದೆ ಗೋಳಾಡಿ ಪೊಲೀಸರ ನಿಷ್ಕ್ರಿಯತೆಯ ಕುರಿತು ಅವರ ಗಮನ ಸೆಳೆದರು. ಈಗ ಸರ್ಕಾರ ಎಚ್ಚೆತ್ತುಕೊಂಡಿತು. ಆಯಿಷಾ ದಂಪತಿಗಳ ಸತ್ಯಾಗ್ರಹ ಎರಡು ತಿಂಗಳು ದಾಟಿದಾಗ ಸರ್ಕಾರ ತಮ್ಮ ಪೊಲೀಸರ ಕುರಿತು ವಿಶ್ವಾಸ ಕಳೆದುಕೊಂಡು ಈ ಕೇಸನ್ನು ಕ್ರೈಂ ಬ್ರಾಂಚಿಗೆ ಒಪ್ಪಿಸಿತು.

ಅಲ್ಲಿಂದ ಮೊಕದ್ದಮೆ ಹೊಸ ತಿರುವನ್ನು ಪಡೆದುಕೊಂಡಿತು.

ಹಂಜನಿಗೆ ಗೋವಾದಲ್ಲಿ ಎರಡು ಫ್ಲಾಟುಗಳಿವೆ. ಅಲ್ಲಿ ಆತನ ಹೆಂಡತಿ ಕಾಲೇಜಿಗೆ ಸೇರಿಕೊಂಡಳೆನ್ನಲಾಗುತ್ತಿದೆ. ಒಂದು ಫ್ಲಾಟಿನಲ್ಲಿ ಈ ಚಿಕ್ಕ ಹುಡುಗಿ ಅಡಿಗೆ ಮತ್ತಿತರ ಕೆಲಸಗಳನ್ನು ಮಾಡಿಕೊಂಡಿರಬೇಕಾಗಿತ್ತು.

ಕ್ರೈಂ ಬ್ರಾಂಚ್ ತನಿಖೆಯಿಂದ ಹಂಜ ಮತ್ತು ಆತನ ಸ್ನೇಹಿತ ಅಬ್ದುಲ್ಲ ಎಂಬವನು ಸೇರಿಕೊಂಡು ಹುಡುಗಿಯ ಕೊಲೆ ಮಾಡಿರುವ ವಿಷಯ ಬೆಳಕಿಗೆ ಬಂತು. "ಸಫಿಯಾಳ ಮೈಗೆ ಕುದಿ ನೀರು ಬಿದ್ದು ಆಕೆಯ ಮೈಗೆ ಗಾಯವಾಯಿತು. ಭೋದರರಹಿತಳಾದ ಆಕೆಯನ್ನು ಬಚ್ಚಲಿನಲ್ಲಿ ಮಲಗಿಸಿದ್ದೆ" ಎಂದು ಪ್ರಾರಂಭದಲ್ಲಿ ಹಂಜ ಹೇಳಿದರೂ ಕೊನೆಗೆ ತಾನೇ ಆಕೆಯನ್ನು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡನು. ಕುತ್ತಿಗೆ ಕೊಯ್ಯುವಾಗ ಇನ್ನೂ ಜೀವವಿದ್ದ ಆಕೆ ನರಳಿದಳೆಂದೂ ಹೇಳಲಾಗುತ್ತಿದೆ. ಆಕೆಯ ದೇಹವನ್ನು ಮೂರು ತುಂಡು ಮಾಡಿ ಗೋಣಿಚೀಲದಲ್ಲಿ ತುಂಬಿಸಿ ಆತನು ಕೆಲಸ ಮಾಡಿಸುತ್ತಿದ್ದ ಸೈಟಿಗೆ ಕೊಂಡೊಯ್ದು ಜೆಸಿಬಿ ಯಂತ್ರದಿಂದ ಸುಮಾರು 10 ಅಡಿ ಆಳದ ಹೊಂಡ ಮಾಡಿ ಸಫಿಯಾಳ ಮೃತದೇಹವನ್ನು ಅದರಲ್ಲಿ ಹಾಕಿ ಮಣ್ಣು ಮುಚ್ಚಿದ್ದಾಗಿ ಹೇಳಿದನು.

ಇಷ್ಟು ವಿಷಯ ದೊರೆತೊಡನೆ ಕ್ರೈಂಬ್ರಾಂಚ್ ಎಸ್.ಪಿ. ಫಿಲಿಪ್ ಎಂಬವರು ತನಿಖೆ ಮುಂದುವರಿಸಿದರು. ಗೋವಾದ ಜನರ ಸಹಕಾರ ದೊರೆಯದೆಂದು ಮನವರಿಕೆ ಮಾಡಿಕೊಂಡ ಇವರು ಆಕ್ಷನ್ ಕಮಿಟಿಯ ಸುಮಾರು 30 ಜನರನ್ನು ತಮ್ಮೊಡನೆ ಕರೆದೊಯ್ದರು. ಕೋಜಿಕೋಡ್ ಮೆಡಿಕಲ್ ಕಾಲೇಜಿನ ಫೊರೆನ್ಸಿಕ್ ವಿಭಾಗದ ಮುಖ್ಯಸ್ಥೆ ಶೆರ್ಲಿ ವಾಸು, ಲ್ಯಾಬ್ ಟೆಕ್ನಿಷಿಯನ್ ಅನ್ನಮ್ಮ ಜೋನ್ ಅವರನ್ನೂ ತಮ್ಮೊಡನೆ ಕರೆದೊಯ್ದರು. ಸಫಿಯಾಳ ದೇಹವನ್ನು ಹೂತು ಹಾಕಿದ ಸ್ಥಳವನ್ನು ಹತ್ತು ಅಡಿ ಆಳದಲ್ಲಿ ಅಗೆದಾಗ ಆಕೆಯ ತಲೆ ಬುರುಡೆ ಹಾಗೂ ಇತರ ಅಸ್ಥಿಗಳೂ ದೊರೆತವು. ಡಿಎನ್‌ಎ ಟೆಸ್ಟ್ ಮಾಡಿಸಿ ಆಕೆಯ ದೇಹವೆಂದು ದೃಢಪಡಿಸಿಕೊಳ್ಳಲು ಆಕೆಯ ತಂದೆಯನ್ನೂ ಕರೆದೊಯ್ಯಲಾಗಿತ್ತು. ಡಿಎನ್‌ಎ ಪರೀಕ್ಷೆಯನ್ನು ಗೋವಾದಲ್ಲಿಯೇ ನೆರವೇರಿಸಿ ಸಫಿಯಾಳ ದೇಹವೆಂದು ದೃಢಪಡಿಸಿಕೊಳ್ಳಲಾಯಿತು. ಫೊರೆನ್ಸಿಕ್ ಟೆಸ್ಟ್‌ಗಾಗಿ ಹೈದರಾಬಾದಿಗೆ ಕಳುಹಿಸಲಾಗಿತ್ತು. ಅದರ ಫಲಿತಾಂಶಕ್ಕಾಗಿ ಕಾಯಲಾಗುತ್ತಿದೆ.

ಈ ಕೊಲೆ ಪಾತಕವನ್ನು ಹಂಜ ತನ್ನ ಖಾಲಿ ಇದ್ದ ಫ್ಲಾಟಿನಲ್ಲಿ ಮಾಡಿದ್ದನು. ಆಕೆಯ ದೇಹವನ್ನು ಕೊಂಡೊಯ್ದ ಕಾರಿನಲ್ಲಿ ದೊರೆತ ಕೂದಲು ಮತ್ತು ರಕ್ತದ ಕಲೆ ಅಧಿಕಾರಿಗಳ ತನಿಖೆಗೆ ಮಾರ್ಗದರ್ಶನ ನೀಡಿತು. ಆ ಫ್ಲಾಟಿನ ಬಚ್ಚಲಿನಲ್ಲೂ ಒಂದೂವರೆ ವರ್ಷದ ಹಿಂದೆ ನಡೆದ ಕೊಲೆಯ ರಕ್ತದ ಕಲೆಗಳಿದ್ದವು. ಆ ಫ್ಲಾಟನ್ನು ಇಂದಿಗೂ ಮುಚ್ಚಿಡಲಾಗಿದೆ. ಪೊಲೀಸ್ ಅಧಿಕಾರಿಗಳು ಪ್ರಾಮಾಣಿಕರಾಗಿದ್ದು, ನಿಜವಾದ ಆಸಕ್ತಿ ಇದ್ದರೆ ಎಂತಹ ಕೊಲೆಗಾರನನ್ನೂ ನ್ಯಾಯಾಲಯದ ಮುಂದೆ ನಿಲ್ಲಿಸಬಹುದೆಂಬುದು ಇದರಿಂದ ಸಾಬೀತಾಯಿತು.

ಸಫಿಯಾಳನ್ನು ತಾನು ಏಕೆ ಕೊಲೆ ಮಾಡಿದೆನೆಂದು ಹಂಜ ಇನ್ನೂ ಬಾಯಿ ಬಿಡದಿದ್ದರೂ ಆಕೆ ಗರ್ಭಿಣಿಯಾಗಿದ್ದು, ಗರ್ಭಪಾತ ಮಾಡಿಸಲು ಹಂಜ ಆಕೆಗೆ ಮಾತ್ರೆಗಳನ್ನು ಕೊಟ್ಟನೆಂದೂ, ಇದರಿಂದಾಗಿ ಗರ್ಭಪಾತ, ರಕ್ತಸ್ರಾವ ಮತ್ತು ಮಾತ್ರೆಯ ಅತಿ ಸೇವನೆಯ ಪರಿಣಾಮದಿಂದ ಆಕೆಯ ಮೈಮೇಲೆ ಗುಳ್ಳೆಗಳೆದ್ದು ಆಕೆ ಬೋಧರಹಿತ ಳಾದಾಗ ಹಂಜ ಆಕೆಯ ಕೊಲೆ ಮಾಡಿದನೆಂಬುದೂ ಪೊಲೀಸರ ಅನಿಸಿಕೆಯಾಗಿದೆ. ಅದಕ್ಕಾಗಿ ಫೊರೆನ್ಸಿಕ್ ವರದಿಗಾಗಿ ಎದುರು ನೋಡುತ್ತಿದ್ದಾರೆ.

ಈ ಕೊಲೆಪಾತಕ ಹೊರಗೆ ಬರದಂತೆ ಹಂಜ ಮುಂಜಾಗ್ರತೆ ಕೈಗೊಂಡಿದ್ದನು. ಆತನು ಸಫಿಯಾಳನ್ನು ಕೊಲೆ ಮಾಡಿ ಕುಟುಂಬ ಸಮೇತ ಊರಿಗೆ ಹಿಂತಿರುಗುವ ಸಂದರ್ಭದಲ್ಲಿ ಚೆಕ್‌ಪೋಸ್ಟಿನ ಎಎಸ್‌ಪಿಯೊಬ್ಬರಿಗೆ ಲಂಚ ನೀಡಿ ತಮ್ಮೊಡನೆ ಈ ಹುಡುಗಿಯೂ ಇದ್ದಳೆಂಬಂತೆ ದಾಖಲೆ ಸೃಷ್ಟಿಸಿದ್ದನು. ಪೊಲೀಸ್ ಅಧಿಕಾರಿಗಳಿಗೆ ಸುಮಾರು ಎಂಟು ಲಕ್ಷ ರೂ. ನೀಡಿದ್ದಾಗಿ ಈತನ ಡೈರಿಯಲ್ಲಿ ಬರೆದಿದೆಯೆನ್ನಲಾಗಿದೆ. ಪೊಲೀಸರು ಸಫಿಯಾಳನ್ನು ಹುಡುಕುವ ನೆಪದಲ್ಲಿ ಗೋವಾಕ್ಕೆ ಹೋಗಿ ಹಂಜನ ಆತಿಥ್ಯದಲ್ಲಿ ಕೆಲವು ದಿನ ಕಳೆಯುತ್ತಿದ್ದರು. ಪೊಲೀಸ್ ಅಧಿಕಾರಿಗಳಿಗೆ 'ಬೇಕಾದುದೆ'ಲ್ಲವನ್ನೂ ಹಂಜ ಸರಬರಾಜು ಮಾಡುತ್ತಿದ್ದನು.

ಹಂಜ ಈ ಹಿಂದೆ ಕೂಡಾ ಒಂದಿಬ್ಬರು ಹೆಣ್ಣುಮಕ್ಕಳನ್ನು ಕರೆದೊಯ್ದಿದ್ದನು. ಅವರೂ ಕಾಣೆಯಾಗಿದ್ದಾರೆನ್ನಲಾಗುತ್ತಿದೆ. ಅವರು ಯಾರು, ಎಲ್ಲಿಯವರೆಂದು ಯಾರಿಗೂ ತಿಳಿಯದು. ಆ ಮಕ್ಕಳ ಹೆತ್ತವರೂ ಬೇರೆ ದಾರಿ ಕಾಣದೆ ಸುಮ್ಮನಾಗಿ ಊರಿಗೆ ಹಿಂತಿರುಗಿರಬಹುದೆನ್ನಲಾಗಿದೆ. ಗುತ್ತಿಗೆದಾರರಿಗೆ ಕೆಲಸ ದೊರೆಯಬೇಕಾದರೆ ಅಧಿಕಾರಿಗಳ ಬೇಡಿಕೆಗಳನ್ನು ಈಡೇರಿಸಲೇಬೇಕಾಗುತ್ತದೆ. ಅದಕ್ಕೆ ಹಂಜ ಕಂಡುಕೊಂಡ ಹಾದಿ ಹುಡುಗಿಯರ ಸರಬರಾಜಾಗಿರಬಹುದು ಎನ್ನಲಾಗುತ್ತಿದೆ. ಗೋವಾದ ಟೂರಿಸಂ ನಿಂತಿರುವುದೇ ಹೆಣ್ಣಿನ ಮಾರಾಟದಿಂದ ಎಂಬುದು ಹೊಸ ಸುದ್ದಿಯೇನೂ ಅಲ್ಲ.

ತನಿಖೆ ಕೈಗೊಂಡ ಎಸ್.ಪಿ. ಫಿಲಿಪ್ ಅವರು ಹಂಜ, ಆತನ ಹೆಂಡತಿ, ಆತನಿಗೆ ಸಹಕರಿಸಿದ ಅಬ್ದುಲ್ಲ ಹಾಗೂ ಮಡಿಕೇರಿಯ ಮೊಯಿದು ಹಾಜಿಯವರನ್ನು ಬಂಧಿಸಿ ಜೈಲಿಗೆ ತಳ್ಳಿದರು. ಎ.ಎಸ್.ಐ. ಗೋಪಾಲಕೃಷ್ಣನ್ ಎಂಬುವರನ್ನು ಅಮಾನತು ಮಾಡಲಾಗಿದೆ. ಈತನು ಬಂಧನಕ್ಕೆ ಮೊದಲೇ ತಲೆ ತಪ್ಪಿಸಿಕೊಂಡಿದ್ದಾನೆ.

▶▶▶

ಕೈ ಬಿಸಿ ಮಾಡಲು ಸಾಧ್ಯವಿಲ್ಲ;ನಾನು ಬಡವ ಅದರಲ್ಲೂ ದಲಿತ ಎಂದು ವಾದ ಮಾಡಿದ ಒಂದೇ ಕಾರಣಕ್ಕೆ ನಗರ ಯೋಜನಾ ವಿಭಾಗದವರು ಮನೆ ಕಟ್ಟಲು ನೀಲಿ ನಕ್ಷೆ ಮಂಜೂರು ಮಾಡದೆ ನಾನಾ ತರದ ಸಬೂಬು ಹೇಳಿ ಹಿಂಬರಹವೂ ನೀಡದೆ ದಿಡಿ ಸಮೇತ ಸಲ್ಲಿಸಿದ ಅರ್ಜಿಯನ್ನು ವಾಪಸ್ಸು ನೀಡಿರುತ್ತಾರೆ. "ಯಾವ ಕಾರಣಕ್ಕಾಗಿ ನಕ್ಷೆ ಮಂಜೂರು ಮಾಡುವುದಿಲ್ಲ" ಎಂದು ಹಿಂಬರಹ ಕೇಳಿದಕ್ಕೆ ಹಿಂಬರಹಕ್ಕೂ ಶುಲ್ಕ ಪಾವತಿಸಬೇಕೆಂದು ಕೇಳಿ ಷರತ್ತು ವಿಧಿಸಿದ್ದಾರೆ.

ನಡೆದ ಘಟನೆ ಹೀಗಿದೆ

ಚಾಮರಾಜಪೇಟೆ ಕ್ಷೇತ್ರದ ವಾರ್ಡ್ ನಂ. 30ರ ವ್ಯಾಪ್ತಿಗೆ ಬರುವ ಭಕ್ಷಿ ಗಾರ್ಡನ್ ಕೊಳಚೆ ಪ್ರದೇಶದ 25x15 ಅಳತೆಯ ಮನೆಯನ್ನು ನಾನು ನನ್ನ ತಮ್ಮ ಎರಡು ಭಾಗವಾಗಿ ಪಾಲು ಮಾಡಿಕೊಂಡೆವು. ತಮ್ಮನ ಪಾಲಿನ ಜಾಗಕ್ಕೆ ಆರ್ಕಿಟೆಕ್ಟ್ ಮೂಲಕ ನಕ್ಷೆ ಮಂಜೂರು ಮಾಡಿಸಿ ಕಟ್ಟಡ ನಿರ್ಮಾಣ ಕಾರ್ಯವು ಪೂರ್ತಿಯಾಗಿದೆ. ಅದೇ ಅಳತೆಯ ನನ್ನ ಮನೆಗೂ ಎಲ್ಲಾ ದಾಖಲೆಗಳೊಂದಿಗೆ 1382 ರೂ. ಮೊತ್ತದ ಡಿಡಿಯನ್ನು ಲಗತ್ತಿಸಿ ಬೈಲಾ ಪ್ರಕಾರ ನಕ್ಷೆಗಾಗಿ ದಿನಾಂಕ 26.7.08 ರಂದು ಪಾಲಿಕೆಯ ನಗರ ಯೋಜನಾ ವಿಭಾಗ (ಪಶ್ಚಿಮ)ಕ್ಕೆ ಅರ್ಜಿ ಸಲ್ಲಿಸಿದ್ದೆ.

ಆದರೆ ಇಲ್ಲಿಯ ಇಂಜಿನಿಯರ್‌ಗಳು ಪ್ರಾರಂಭದಲ್ಲೇ ತಕರಾರು ಮಾಡಿದರು. 'ನೀವು ಯಾಕ್ರೀ ಬಂದ್ರಿ ನಿಮ್ಮ ಆರ್ಕಿಟೆಕ್ಟ್ ಎಲ್ಲಿ? ಆರ್ಕಿಟೆಕ್ಟ್ ಬರದೆ ಪ್ಲಾನ್ ಮಂಜೂರು ಮಾಡುವುದಿಲ್ಲ' ಹೀಗೆ ನನಗೆ ಅರ್ಥವಾಗದ ರೀತಿಯಲ್ಲಿ ಜೋರು ಮಾಡಿ ನನ್ನನ್ನು ಅಲ್ಲಿಂದ ಸಾಗ ಹಾಕಲು ಪ್ರಯತ್ನಿಸಿದರು. ಈ ಕಚೇರಿ ವ್ಯವಸ್ಥೆ ಹೇಗಿದೆ ಎಂದರೆ ಇಲ್ಲಿಯ ಸಿಬ್ಬಂದಿಗಳು ಮಾತಾಡಿಕೊಂಡಂತೆ ನನ್ನನ್ನು ಕಣ್ಣೆತ್ತಿ ನೋಡಿದರೂ ಮಡಿಯಾಗುವಂತೆ ವರ್ತಿಸುತ್ತಾರೆ. ಅಲ್ಲಿಯ ನಾಲ್ಕನೆ ದರ್ಜೆಯ ನೌಕರನೊಬ್ಬ ಅದೇನೊ ಗುಟ್ಟು ಹೇಳುವಂತೆ ಹೊರಗೆ ಕರೆದು 'ರೀ ಸ್ವಾಮಿ ನಿಮಗೆ ಬುದ್ಧಿಗಿದ್ಧಿ ಇದೆಯೆ? ಸಾಹೇಬ್ರು ಹತ್ರ ಕಾನೂನು ಕಾಯ್ದೆ ಮಾತಾಡಬೇಡಿ. ನಿಮ್ಮ ಕೆಲಸವಾಗಬೇಕಾದರೆ ಅವರನ್ನು ನೋಡ್ಕೊಳ್ಳಿ ಇಲ್ಲಾಂದ್ರೆ ನಿಮ್ಮ ಆರ್ಕಿಟೆಕನ್ನು ಕಳುಹಿಸಿಕೊಡಿ. ಅವರಿಗೂ ಸಾಹೇಬ್ರಿಗೂ ಅಡ್ಜೆಸ್ಟ್‌ಮೆಂಟ್ ಇದೆ' ಇತ್ಯಾದಿ ಉಸುರಿದ.

ಇಲ್ಲಿ ಆರ್ಕಿಟೆಕ್ಟ್‌ಗಳು ಎರಡು ಕೆಲಸ ಮಾಡುತ್ತಾರೆ. ಒಂದು ನಕ್ಷೆ ಬರೆಯುವುದು, ಮತ್ತೊಂದು ಮಧ್ಯವರ್ತಿ ಕೆಲಸ ಮಾಡುವುದು, ಇದು ಪಾಲಿಕೆಯ ನಗರ ಯೋಜನಾ ವಿಭಾಗ ಅಧಿಕಾರಿಗಳಿಗೂ, ಆರ್ಕಿಟೆಕ್ಟ್‌ಗಳಿಗೂ ಆಗಿರುವ ಗುಟ್ಟಿನ ಒಳ ಒಪ್ಪಂದ. ದಿನವೆಲ್ಲ ಅಲ್ಲೇ ವಕ್ಕರಿಸಿದ ನನಗೆ ಈ ವಿಷಯ ಕ್ರಮೇಣ ಮನವರಿಕೆಯಾಯಿತು.

ಸ್ವಾಮಿ ನಾನು ಕೇಳಿದವರಿಗೆಲ್ಲ ಕೈ ಬಿಸಿ ಮಾಡುವಷ್ಟು ಸ್ಥಿತಿವಂತನಲ್ಲ, ಪಾಲಿಕೆಯ ಬೈಲಾ ಪ್ರಕಾರ ಏನೆಲ್ಲ ಸಲ್ಲಿಸಬೇಕೋ ಅಷ್ಟು ಸಲ್ಲಿಸಿರುತ್ತೇನೆ. ನಾನು ವಾಸಿಸುವ ಪ್ರದೇಶದಲ್ಲಿ ಸುಮಾರು 500 ಮನೆಗಳಿದ್ದು ಈ ಮನೆಗಳೆಲ್ಲ ಒಂದೇ ಅಳತೆಯದ್ದಾಗಿರುತ್ತದೆ. ಮುಖ್ಯವಾಗಿ ಹೇಳಬೇಕೆಂದರೆ ಯಾವುದೇ ಮೂಲ ಸೌಕರ್ಯಗಳಿಲ್ಲದ ಕೊಳಚೆ ಪ್ರದೇಶವಿದು. ನಾಲ್ಕು ಜನ ಅಣ್ಣ ತಮ್ಮಂದಿರು ಸಹ ನಾಲ್ಕು ಭಾಗಗಳಾಗಿ ಪಾಲು ಮಾಡಿಕೊಂಡು ನಕ್ಷೆ ಮಂಜೂರು ಮಾಡಿಸಿಕೊಂಡು ಮನೆಗಳನ್ನು ಕಟ್ಟಿಕೊಂಡಿದ್ದಾರೆ.

ವಾಸ್ತವ ಸ್ಥಿತಿ ಹೀಗಿರಬೇಕಾದರೆ ನನಗೆ ಮಾತ್ರ ನಗರ ಯೋಜನಾ ವಿಭಾಗದವರು ಯಾಕಿಷ್ಟು ಗೋಳಾಡಿಸುತ್ತಾರೆ? ಇವಿಷ್ಟು ವಿದ್ಯಮಾನಗಳು ನಗರ ಯೋಜನಾ ಸಹಾಯಕ ನಿರ್ದೇಶಕರ ಸಮ್ಮುಖದಲ್ಲಿ ನಡೆಯಿತು. ಇಲ್ಲಿಯ ಸಹಾಯಕ ಇಂಜಿನಿಯರ್ ಬಸವರಾಜು ಚೀಳಗಿ ಎಂಬ ವ್ಯಕ್ತಿ ನನ್ನೊಂದಿಗೆ ದರ್ಪದಿಂದಲೇ ವರ್ತಿಸಿದ್ದಾರೆ. ಜೊತೆಗೆ ಹಿರಿಯ ಅಧಿಕಾರಿಗೆ ಕೈಸನ್ನೆ ಬಾಯಿ ಸನ್ನೆ ಮಾಡಿ ಸುಮ್ಮನಿರುವಂತೆ ಸೂಚಿಸುತ್ತಾರೆ. ಸಹಾಯಕ ನಿರ್ದೇಶಕರು 'ನನಗೆ ನಿಮ್ಮ ಏರಿಯಾ ಸ್ಥೂಲ ಪರಿಚಯವಿಲ್ಲ, ನಾನು ಈ ಸೀಟಿಗೆ ಹೊಸಬ' ಎಂದು ಹೇಳಿ AE ಕಡೆ ಬೆರಳು ಮಾಡುತ್ತಾರೆ. ಹಿಂಬರಹವಾದರೂ ನೀಡಿ ಎಂದರೆ ಶುಲ್ಕ ಕಟ್ಟಿ ಬನ್ನಿ ಎನ್ನುತ್ತಾರೆ. ಏನು ಶುಲ್ಕ? ಎಲ್ಲಿ ಕಟ್ಟಬೇಕು? ಯಾಕೆ ಕಟ್ಟಬೇಕು? ಇತ್ಯಾದಿ ಪ್ರಶ್ನೆಗಳಿಗೆ ಅಲ್ಲಿಯ ಸಿಬ್ಬಂದಿಗಳು ದಾರಿ ತೋರಿಸುವುದಿಲ್ಲ, ಮತ್ತೊಬ್ಬ ಅಧಿಕಾರಿ 'ಈ ಕೊಳಚೆ ಪ್ರದೇಶವನ್ನು ಪಾಲಿಕೆಯು ವಾಣಿಜ್ಯ ಕ್ಷೇತ್ರವೆಂದು ಗುರುತಿಸಿದೆ. ಆದ್ದರಿಂದ ನೀವು ಪಾಲಿಕೆಗೆ ಹೆಚ್ಚಿನ ಮೊತ್ತವನ್ನು ಡಿಡಿಯ ರೂಪದಲ್ಲಿ ಪಾವತಿಸಿದರೆ ಪರಿಶೀಲಿಸಿ ನಕ್ಷೆ ಮಂಜೂರು ಮಾಡಿಸಬಹುದು' ಎನ್ನುತ್ತಾರೆ.


ಬೆಂಗಳೂರು ಮಹಾನಗರಪಾಲಿಕೆ

ಆದರೆ ಇದೇ ಪ್ರದೇಶದ ಉಳಿದ ಜನರಿಗೆ ವಸತಿ ಪ್ರದೇಶವೆಂದು ಪ್ಲಾನ್ ಮಂಜೂರು ಮಾಡಲು ಹೇಗೆ ಸಾಧ್ಯವಾಯಿತು? ನನ್ನ ಮನೆಯ ಅಳತೆಗಿಂತ ಚಿಕ್ಕದಾಗಿರುವ ಮನೆಗಳಿಗೆ ಮಂಜೂರು ಮಾಡಿರುವ ನಕ್ಷೆಯ ನಕಲುಗಾಗಿ ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಸಂಬಂಧಿಸಿದ ಕಚೇರಿಗೆ ಈಗಾಗಲೇ ಅರ್ಜಿ ಸಲ್ಲಿಸಿರುತ್ತೇನೆ. ಪಾಲಿಕೆಯ ಕಾನೂನನ್ನು ಪಾಲಿಸಿದವರಿಗೆ ಕಿರುಕುಳ ನೀಡುವ ಅಧಿಕಾರಿಗಳು ಧಿಕ್ಕರಿಸುವವರ ಬಗ್ಗೆ ಮಾತ್ರ ತುಟಿಕ್‌ಪಿಟಿಕ್ ಎನ್ನುವುದಿಲ್ಲ ಎಂಬುದು ಮಾತ್ರ ವಿಪರ್ಯಾಸ! ಪಾಲಿಕೆಯಲ್ಲಿ ಕೆಲಸ ಮಾಡಿಸಿಕೊಳ್ಳಬೇಕಾದರೆ ಶ್ರೀಸಾಮಾನ್ಯರು ಪರವಾನಗಿ ಹೊಂದಿರಬೇಕೆ? ಆಯುಕ್ತರ ಉತ್ತರಕ್ಕಾಗಿ ಕಾಯುತ್ತಿದ್ದೇನೆ.

-ಬಿ.ಎಸ್. ಸಂಪತ್‌ಕುಮಾರ್,
ಬೆಂಗಳೂರು

▶▶▶

ತಮಿಳುನಾಡು ಮತ್ತು ಕರ್ನಾಟಕದಿಂದ ಈ ರೀತಿ ಹೆಣ್ಣುಮಕ್ಕಳನ್ನು ಕೆಲಸಕ್ಕೆಂದು ಕರೆದುಕೊಂಡು ಬಂದು ಹಣ ಸಂಪಾದನೆ ಮಾಡುವ ದಲ್ಲಾಳಿಗಳು ಕೇರಳದಾದ್ಯಂತ ಇದ್ದಾರೆ. ಜಗತ್ತಿನಾದ್ಯಂತ ಹೆಣ್ಣುಮಕ್ಕಳು ಕಾಣೆಯಾಗುವುದು ಹೊಸ ಸುದ್ದಿಯೂ ಅಲ್ಲ, ಆದರೆ ತನ್ನ ಮಗಳು ತನಗೆ ದೊರೆಯದೆ ತಾನು ಇಲ್ಲಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದು ಕುಳಿತುಕೊಂಡ ಆಯಿಷಾ ಬಡತನದ ಬೇಗೆಯಿಂದ ನರಳಿ, ದುರ್ಬಲಳಾದ ಓರ್ವ ಸಾಮಾನ್ಯ ಹೆಣ್ಣು. ಆಕೆ ಸತ್ಯಾಗ್ರಹವನ್ನಾರಂಭಿಸಿದ 82ನೇ ದಿವಸ ಮಗಳ ಕೊಲೆಯ ಸುದ್ದಿ ತಿಳಿದು ರೋಧಿಸತೊಡಗಿದಳು. ಆಕೆಗಿದ್ದ ಹೆಣ್ಣು ಕುಡಿ ಅದೊಂದೆ. ಶಾಲೆಗೆ ಹೋಗುತ್ತಿದ್ದ ಹುಡುಗಿಯನ್ನು ಕೊಂಡೊಯ್ದು ತಮಗೆ ಬೇಕಾದಂತೆ ಉಪಯೋಗಿಸಿಕೊಂಡು ಕೊನೆಗೆ ಕೊಲೆ ಮಾಡಿ ಊರಿನಲ್ಲಿ ಶ್ರೀಮಂತಿಕೆಯಿಂದ ತಲೆ ಎತ್ತಿ ನಡೆಯುತ್ತಿದ್ದ ಈ ಮನುಷ್ಯನನ್ನು ಏನೆಂದು ಕರೆಯೋಣ? ಈ ದಂಪತಿಗಳ ಹಿಂದೆ ಆಧಾರವಾಗಿ ನಿಂತು ನ್ಯಾಯಕ್ಕಾಗಿ ಹೋರಾಡಿದ ಆಕ್ಷನ್ ಕಮಿಟಿಯ ಸದಸ್ಯರನ್ನು ಅಭಿನಂದಿಸಲೇಬೇಕು. ಜಾತಿ, ಧರ್ಮಗಳ ಭೇದವಿಲ್ಲದೆ ತಮ್ಮ ಸಹ ನಾಗರಿಕರಿಗೆ ಆದ ಅನ್ಯಾಯ ತಮಗೇ ಆದಂತೆ ಅದರ ವಿರುದ್ಧ ಹೋರಾಡಿದ ಇವರ ಈ ಕಾರ್ಯ ಸಮಗ್ರರಿಗೂ ಮಾರ್ಗದರ್ಶನವಾಗಿದೆ.



ಕೇರಳ ಸರ್ಕಾರ ಈ ದಂಪತಿಗಳಿಗೆ ಎರಡು ಲಕ್ಷ ರೂಪಾಯಿ ಪರಿಹಾರ ನೀಡಿದೆ. ಇವರು ಕರ್ನಾಟಕದವರಾದ ಕಾರಣ ಮಡಿಕೇರಿಯಲ್ಲಿ ಇವರು ವಾಸಿಸುವ ಮೂರು ಸೆಂಟ್ ಸ್ಥಳವನ್ನು ಇವರಿಗೇ ನೀಡಬೇಕೆಂದು ಈ ಜನರು ಬೇಡಿಕೆ ಮುಂದಿಟ್ಟಿದ್ದಾರೆ.

ಇಲ್ಲಿ ಇನ್ನೂ ಒಂದು ವಿಷಯವನ್ನು ಗಮನಿಸಬೇಕಾಗಿದೆ. ಕಾಸರಗೋಡು ನಗರಸಭೆಯ ಆಡಳಿತ ಮುಸ್ಲಿಂಲೀಗಿನ ಕೈಯಲ್ಲಿದೆ. ನಗರಸಭಾಧ್ಯಕ್ಷೆ ಬೀಫಾತುಮ್ಮಾ ಇಬ್ರಾಹಿಂ ಎಂಬುವರು. ಸಫಿಯಾಳ ಹೆತ್ತವರು 82 ದಿನಗಳವರೆಗೆ ಸತ್ಯಾಗ್ರಹ ಮಾಡುತ್ತಿದ್ದರೂ ಬೀಫಾತುಮ್ಮ ಆ ದಾರಿಯಿಂದಲೇ ದಿನಾಲೂ ಕಾರಿನಲ್ಲಿ ಓಡಾಡುತ್ತಿದ್ದರೂ ಒಮ್ಮೆಯೂ ಆಯಿಷಾಳ ಬಳಿ ಬಂದು ಮಗಳ ಕುರಿತು ವಿಚಾರಿಸುವುದಾಗಲಿ ಆಕೆಯನ್ನು ಸಂತೈಸುವುದಾಗಲಿ ಮಾಡಲಿಲ್ಲ. ಮಾತ್ರವಲ್ಲ "ಆಯಿಷಾ ದಂಪತಿಗಳು ಹಂಜನಿಂದ ಹಣ ಪಡೆಯಲು ಮಗಳು ಕಾಣೆಯಾಗಿದ್ದಾಳೆಂದು ನಟಿಸುತ್ತಿದ್ದಾರೆ" ಎಂಬ ಹೇಳಿಕೆಯನ್ನೂ ನೀಡಿದ್ದರೆನ್ನಲಾಗಿದೆ. "ಮುಸ್ಲಿಂ ಲೀಗಿನ ಪುರುಷ ಸದಸ್ಯರು ತೋರಿದಲ್ಲಿ ಸಹಿ ಹಾಕುವುದು ಮಾತ್ರ ಆಕೆಯ ಕೆಲಸ" ಎನ್ನುತ್ತಾರೆ ಕಾಸರಗೋಡಿನ ನಾಗರಿಕರು. ಈ ಘಟನೆ ಇಡೀ ಕಾಸರಗೋಡನ್ನು ತಲ್ಲಣಗೊಳಿಸಿದ್ದರೂ ಮುಸ್ಲಿಂಲೀಗಿನ ಸದಸ್ಯರೆಲ್ಲರೂ ಅದು ತಮ್ಮ ಸಮಸ್ಯೆ ಅಲ್ಲವೆಂಬಂತೆ ದಿವ್ಯಮೌನ ತಾಳಿದ್ದಾರೆ. ■

ಸಾಹಿತಿಗಳಿಗೆ ಚೆಕ್ಕಾಸಿನ ಬೆಲೆ ಇಲ್ಲವೇಕೆ?



2005ರ ಮಾರ್ಚ್ 25ರಂದು ಗದಗದ ಪ್ರಾಧ್ಯಾಪಕರಾದ ಶಾಮಸುಂದರ ಬಿದರಕುಂದಿಯವರು ನನಗೊಂದು ಪತ್ರ ಬರೆದು, ಪಠ್ಯಪುಸ್ತಕ ರಚನಾ ಸಮಿತಿಯವರು ಪದವಿಪೂರ್ವ ದ್ವಿತೀಯ ವರ್ಷದ ಕನ್ನಡ ಪಠ್ಯಪುಸ್ತಕ 'ಸಾಹಿತ್ಯ ಚಂದನ'ಕ್ಕಾಗಿ ನನ್ನ 'ನಿಯಮ ನಿಯಮಗಳ ನಡುವೆ' ಎಂಬ ಕತೆಯನ್ನು ಆರಿಸಿಕೊಂಡಿರುವುದಾಗಿಯೂ ಅದರ ಪ್ರಕಟಣೆಗೆ ನನ್ನ ಅನುಮತಿ ಹಾಗೂ ನನ್ನ ಒಂದು ಫೋಟೋ ಕಳುಹಿಸಿಕೊಡಬೇಕೆಂದೂ ಕೋರಿದ್ದರು. ನಾನು ಕೂಡಲೇ ಈ ಅನುಮತಿಯನ್ನು, ಫೋಟೋವನ್ನೂ ಕಳುಹಿಸಿದೆ. ಸಂಭಾವನೆಯ ಕುರಿತು ನಾನು ವಿಚಾರಿಸಬೇಕಾದ ಅಗತ್ಯವಿರಲಿಲ್ಲ, ಸರಕಾರದ ಯೋಜನೆಯಾದುದರಿಂದ ಗೌರವ ಸಂಭಾವನೆ ಬರುತ್ತದೆ ಎಂಬ ವಿಶ್ವಾಸ ನನ್ನದು.

2005–06ನೇ ಸಾಲಿನಿಂದ ಪಠ್ಯಪುಸ್ತಕದಲ್ಲಿ ಈ ಕತೆ ಪ್ರಕಟವಾಗುತ್ತಲೇ ಇದೆ. ಆದರೆ ಈ ಪಠ್ಯಪುಸ್ತಕದ ಒಂದು ಪ್ರತಿಯನ್ನಾಗಲಿ, ಯಾವುದೇ ರೀತಿಯ ಸಂಭಾವನೆಯನ್ನಾಗಲಿ ಈವರೆಗೆ ಪದವಿಪೂರ್ವ ಶಿಕ್ಷಣ ಇಲಾಖೆಯಿಂದ ನನಗೆ ಕಳುಹಿಸಿಲ್ಲ, ಆ ಕುರಿತು ನನ್ನನ್ನು ಸಂಪರ್ಕಿಸಿಲ್ಲ.

ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರಿಗೆ 2007ರಲ್ಲಿ ನಾನೊಂದು ಪತ್ರ ಬರೆದು ಈ ಕುರಿತು ವಿಚಾರಿಸಿದೆ. ಆದರೆ ಈವರೆಗೆ ನನಗೆ ಯಾವುದೇ ರೀತಿಯ ವಿವರಣೆಯಾಗಲಿ, ನನ್ನ ಪತ್ರಕ್ಕೆ ಉತ್ತರವಾಗಲಿ ದೊರೆಯಲಿಲ್ಲ.

ಕೆಲವು ತಿಂಗಳ ಹಿಂದೆ ಲೇಖಕಿ ಸವಿತಾ ನಾಗಭೂಷಣ ಅವರು ನನ್ನನ್ನು ಸಂಪರ್ಕಿಸಿ ಸಂಭಾವನೆಯ ಕುರಿತು ವಿಚಾರಿಸಿದರು. ಕಾರಣ ಅವರದೊಂದು ಕವನವನ್ನು ಪಠ್ಯಪುಸ್ತಕದಲ್ಲಿ ಸೇರಿಸಿಕೊಂಡಿದ್ದು ಅವರಿಗೂ ಸಂಭಾವನೆ ನೀಡಿರಲಿಲ್ಲ, ಅವರೂ ಕೂಡಾ ನಿರ್ದೇಶಕರಿಗೆ ಪತ್ರ ಬರೆದರೂ ಯಾವುದೇ ರೀತಿಯ ಮಾರುತ್ತರ ಬರೆಯುವ ಒಂದು ಸೌಜನ್ಯವನ್ನೂ, ಈ ಜನರು ತೋರಿಸಿಲ್ಲ, ರಾಜ್ಯಪಾಲರ ಆಡಳಿತ ಪ್ರಾರಂಭವಾದಾಗ ಇವರು ಈ ಕುರಿತು ರಾಜ್ಯಪಾಲರಿಗೆ ಪತ್ರ ಬರೆದರು. 'ಆ ಕುರಿತು ಸಂಬಂಧಪಟ್ಟ ಇಲಾಖೆಗೆ ತಿಳಿಸಲಾಗಿದೆ' ಎಂಬ ಮಾಮೂಲಿ ಉತ್ತರವೊಂದು ರಾಜ್ಯಪಾಲರ ಕಚೇರಿಯಿಂದ ಇವರಿಗೆ ತಲುಪಿತು. ಮತ್ತೂ ಕೆಲವು ದಿನಗಳ ಬಳಿಕ ಸಂಬಂಧಪಟ್ಟ ಇಲಾಖೆಯಿಂದಲೂ ಅಂತಹುದೇ ಒಂದು ಪತ್ರ ಇವರಿಗೆ ತಲುಪಿತು. ಅಷ್ಟೇ ಹೊರತು ಇನ್ನೇನೂ ಆಗಲಿಲ್ಲ, ಪದವಿಪೂರ್ವ ದ್ವಿತೀಯ ವರ್ಷದ ಕನ್ನಡದ ಪಠ್ಯಪುಸ್ತಕದಲ್ಲಿ ಈ ಕತೆ, ಕವನಗಳು ಈಗಲೂ ಪ್ರಕಟಗೊಳ್ಳುತ್ತಿವೆ.

ಒಂದು ಪತ್ರ

ನನಗೆ ತಿಳಿದ ಲೇಖಕಿಯೊಬ್ಬರ ಕವನವೊಂದು ಮಲೆಯಾಳಂಗೆ ಭಾಷಾಂತರಗೊಂಡು ಕೇರಳದ ಪಠ್ಯಪುಸ್ತಕದಲ್ಲಿ ಸೇರ್ಪಡೆಗೊಂಡಿದೆ. ಕೂಡಲೇ ಅಲ್ಲಿನ ಸರ್ಕಾರ ಅವರಿಗೆ ಸಂಭಾವನೆಯನ್ನೂ ಕಳುಹಿಸಿದೆ!

ಕರ್ನಾಟಕ ಸರ್ಕಾರದ ಪ್ರತಿಯೊಂದು ಇಲಾಖೆಯೂ ಜನಸಾಮಾನ್ಯರನ್ನು ವಂಚಿಸುತ್ತಿದೆ ಎಂಬ ದೂರುಗಳು ಬರುತ್ತಲೇ ಇರುತ್ತವೆ. ಇಲಾಖೆ ಮಾತ್ರವಲ್ಲ ಖಾಸಗಿ ವಲಯದಲ್ಲೂ ಈ ವಂಚನೆಗಳು ನಡೆಯುತ್ತಲೇ ಇರುತ್ತವೆ. ಮೊನ್ನೆ ಪತ್ರಿಕೆಯಲ್ಲಿ ನಾ ಡಿಸೋಜರ ಕತೆಯೊಂದನ್ನು ಅವರ ಅನುಮತಿ ಇಲ್ಲದೆ ಸಿನಿಮಾ ಮಾಡಲಾಗುತ್ತಿದೆಯೆಂಬ ವರದಿ ಬಂದಿದೆ. ನನ್ನ ಕತೆಯೊಂದನ್ನು ನನ್ನ ಅನುಮತಿ ಪಡೆಯದೆ ನನ್ನ ಸಹಿಯನ್ನು ಫೋರ್ಜರಿ(ನಕಲಿ) ಮಾಡಿ ದೂರದರ್ಶನ ಕಿರುಚಿತ್ರ ತಯಾರಿಸಿ ಪ್ರಸಾರ ಮಾಡಿದೆ. ಇದಕ್ಕಾಗಿ ನಾನು ನ್ಯಾಯಾಲಯದ ಮೊರೆ ಹೋಗಿದ್ದೇನೆ. ಕನ್ನಡಿಗರಿಗೆ ಪ್ರಾಮಾಣಿಕತೆ ಎಂಬುದು ಇಲ್ಲೇ ಇಲ್ಲವೆಂಬುದು ಇದರರ್ಥವೇ? ಸಾಹಿತಿಗಳ ಕತೆ, ಕವನಗಳನ್ನು ಆಯ್ಕೆ ಮಾಡಿ ಪಠ್ಯಪುಸ್ತಕದಲ್ಲಿಸೇರಿಸಿಕೊಂಡು ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ವಿದ್ಯಾರ್ಥಿಗಳಿಗೆ ಆಸಕ್ತಿ ಮೂಡಿಸುವುದು ಉತ್ತಮ ಕ್ರಮವೇ ಆಗಿದೆ. ಹಿಂದಿನಿಂದಲೂ ಈ ಕ್ರಮ ಜಾರಿಯಲ್ಲಿದೆ. ಆದರೆ ಅದಕ್ಕಾಗಿ ಆ ಲೇಖಕರಿಗೆ ಸಂಭಾವನೆ ಕೊಡುವ ಪರಿಪಾಠ ಕರ್ನಾಟಕದಲ್ಲಿಲ್ಲವೇ? ಅಥವಾ ನಮ್ಮ ಸರಕಾರಕ್ಕೆ ಅಷ್ಟೊಂದು ಬಡತನವಿದೆಯೇ? ಖಾಸಗಿ ಪದವಿಪೂರ್ವ ಕಾಲೇಜುಗಳಲ್ಲಂತೂ ದೇಣಿಗೆ ಇಲ್ಲದೆ ವಿದ್ಯಾರ್ಥಿಗಳಿಗೆ ಪ್ರವೇಶವಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಹಣದ ಹೊಳೆ ಹರಿಯುತ್ತಿದೆ. ಆದರೆ ಸಾಹಿತಿಗಳ ಕತೆ, ಕವನಗಳಿಗೆ ಮಾತ್ರ ಚಿಕ್ಕಾಸಿನ ಬೆಲೆಯೂ ಇಲ್ಲ. ಹೀಗೇಕೆ?

ಹೊಸ ಸರಕಾರ ಬಂದೊಡನೆ, ಮಂತ್ರಿಗಳಿಗೆ ಹೊಸ ಕಾರು, ಪೀಠೋಪಕರಣಗಳು ಮತ್ತು ವಾಸ್ತುವೆಂಬ ಹೆಸರಿನಲ್ಲಿ ಕೋಣೆಯ ಕಿಟಕಿ ಬಾಗಿಲುಗಳನ್ನು ಬದಲಾಯಿಸುವುದಕ್ಕೆ ಕೋಟಿಗಟ್ಟಲೇ ಹಣ ವ್ಯಯಿಸಲು ಸರಕಾರ ಹಿಂದೆ ಮುಂದೆ ನೋಡುವುದಿಲ್ಲ. ಆದರೆ ಕನ್ನಡದ ಉಳಿವಿಗಾಗಿ ಶ್ರಮಿಸುವ ಸಾಹಿತಿಗಳನ್ನು ನಿರ್ಲಕ್ಷಿಸುತ್ತಲೇ ಇದೆ. ಕನ್ನಡ ಭಾಷೆ ಉಳಿಸಿ ಎಂದು ಹಗಲಿರುಳೂ ಎತ್ತರದ ಧ್ವನಿಯಲ್ಲಿ ಭಾಷಣ ಮಾಡುವ ರಾಜಕಾರಣಿಗಳಿಗೆ ಎತ್ತರದ ಸ್ಥಾನದಲ್ಲಿ ಕುಳಿತ ಕೆಲವು ಅಧಿಕಾರಿಗಳಿಗೆ ಈ ಮೋಸ ವಂಚನೆ ಯಾಕೆ ಕಾಣಿಸುವುದಿಲ್ಲ? ಈ ಕುರಿತು ಸಾಹಿತಿಗಳೆಲ್ಲಾ ಧ್ವನಿ ಎತ್ತಬೇಕು. ಕೇರಳ ಸರ್ಕಾರಕ್ಕೆ ಸಾಧ್ಯವಾಗುತ್ತಿರುವುದು ಕರ್ನಾಟಕ ಸರ್ಕಾರಕ್ಕೆ ಯಾಕೆ ಸಾಧ್ಯವಾಗುವುದಿಲ್ಲ? ಇದು ಸರ್ಕಾರಕ್ಕೆ ನಾಚಿಕೆಗೇಡಿನ ವಿಷಯವೆಂದು ಹೇಳಬಯಸುತ್ತೇನೆ.

-[illegible]

ಮಠಕ್ಕೋದಾಸ್ತಿ, ಮಶಾಣಕ್ಕೋದ ಹ್ಯಣ ತಿರಗ ಬಂದವೇ?

"ಈ ಬಿಜೆಪಿಗಳೇನು ಬತ್ತ ಬತ್ತ ಹಿಂಗಾದವಲ್ಲಾ?" ಎಂದ ಕಾಳಮಾವ.

"ಹಿಂಗಾದವಲ್ಲಾ ಅಂದ್ರೆ ಯಂಗೊ ಮಾವ. ಅವುರಿದ್ದಿದ್ದೆ ಅಂಗಲವೆ?"

"ಅಂಗಲ್ಲ ಕಂದ್ಯ, ಎಡೂರಪ್ಪಾಡುದ ನೋಡಿದ್ರೆ ಏನೋ ಮಾಡ್ತನೆ ಅನ್ಕಂಡಿದ್ನಪ್ಪ" ಎಂದು ಕಾಳಮಾವ ಹೇಳುತ್ತಿದ್ದಾಗ ನಗಾಡಿದ ಉಗ್ರಿ,

"ಸರಿಯಾದ ಕ್ಯಲಸನೆ ಮಾಡಿದನಲ್ಲ ಮಾವ,

ಬಂಡಾಯ ಸಿಲೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

ಇನ್ನೇನಾಗಬೇಕು ನಿಂಗೆ? ಗೋಕರ್ಣ ತಗಂಡ್ಹೋಗಿ ರಾಮಚಂದ್ರಾಪುರದ ಮಠಕ್ಕೊಟ್ಟ. ಅಮೃತಮಹಲ್ ದನತಗಂಡೋಗಿ ಅದೇ ಮಠಕ್ಕೊಟ್ಟ. ಇನ್ನ ಬೆಳ್ಳುಬ್ಬಿ ಖಾತೆ ಕಿತ್ತು ಉಮೇಸ ಕತ್ತಿ ಅನ್ನೋನಿಗೆ ಕೊಟ್ಟವುನೆ. ಜನ ಜಾಸ್ತಿ ತಿರುಗಾಡದ ನೋಡಿ ಬಸ್‌ಚಾರ್ಜ್ ಏರಿಸಿದ ಅತ್ಲಾಗೆ. ಇನ್ನೇನಾಗಬೇಕು?"

"ಪಾಪ ಆ ಬೆಳ್ಳುಬ್ಬಿ ಅನ್ನೋನ ಪಾಡು ಯಾರಿಗೂ ಬ್ಯಾಡ ಕಂದ್ಯ" ಎಂದ ಸೀರ.

"ಊ ಕಣೊ ಮಾವ. ಅದೇನೂ ಆಪರೇಷನ್ ಮಾಡಿಸಿಗೊಬೇಕಾಗಿತ್ತಂತೆ, ನಿಧಾನಕ್ಕೆ ಮಾಡಿಸಿಕೊಬಹುದಿತ್ತಂತೆ. ಮಿನಿಸ್ಟ್ರಾಗಿದ್ದಾಗ ಮಾಡಿಸಿಗಂಡ್ರೆ ಡಾಕ್ಟ್ರು ನರ್ಸ್ ಚೆನ್ನಾಗಿ ನೋಡಿಕತ್ತರೆ ಅಂತ ಹೋಗಿ ಮಾಡಿಸಿಗಂಡನಂತೆ. ಅತ್ತಗೆ ತಲೆಲಿದ್ದ ಗಂಟುಹೋಯ್ತು ಇತ್ತಗಿ ಮಂತ್ರಿಗಿರಿನೂ ಹೋಯ್ತು, ಹೋಗತ್ತಗೆ" ಎಂದ ಉಗ್ರಿ

"ಅಲ್ಲಾ ಅಂಥೋನ ಖಾತೆ ಈಸಗಂಡ ಕತ್ತಿ ಇನ್ನಂಥ ಗತಿಗ್ಯಟ್ಟೊನು?" ಎಂದ ಸೀರ.

"ಅಂಗೆ ನೋಡಿದ್ರೆ ಅವುನು ಗತಿಗ್ಯಟ್ಟೋನೆ ಕಣಮಾವ. ಇನ್ಯಾವನೇ ಮರಿಯಾದಸ್ತಾಗಿದ್ರು ಪಾಪ ನನ್ನಿಂದ ಬೆಳ್ಳುಬ್ಬಿಗೆ ಅನ್ಯಾಯಾಗದು ಬ್ಯಾಡ ಅನ್ನೋನು. ಈ ಮಂಡಗತ್ತಿ ಮಾನ ಮರಿಯಾದಿ ಬುಟ್ಟು ಬೆಳ್ಳುಬ್ಬಿ ಕಾತೆ ತಗಂಡು ಮಂತ್ರಿಯಾದ. ಇಂತ ಇದ ಹಿಂದೆ ನಾವ್ಯಾವಾಗ್ಲು ನೋಡಿರಲಿಲ್ಲ"

"ಇವುರಿಗೋಲಿಸಿದ್ರೆ ಕುಮಾರಸ್ವಾಮಿನೆ ಪರವಾಗಿಲ್ಲ" ಎಂದ ಕಾಳಮಾವ.

"ಕುಮಾರಸ್ವಾಮಿ ಆಡಳಿತನೆ ಚೆನ್ನಾಗಿ ಕಾಣಬೇಕಾದ್ರೆ ಇವರಿನ್ನೆಂತ ಆಡಳಿತ ಮಾಡ್ತಯಿರಬಹುದು ಲ್ಯಕ್ಕ ಹಾಕು."

"ಅವುನಿಗೇನೂ ಅವುರಪ್ಪಿದ್ದ ಹೇಳಿಕೊಡೋನು. ಇವುಕ್ಯಾವಿದ್ದವ್ರೂ? ಅದಕ್ಕೆ ಹ್ಯಲುಪ್ಯಲಿನಂಗಾಡ್ತಾ ಅವೆ" ಎಂದ ಸೀರ.

"ಅಲ್ಲಾ ಬಿಜೆಪಿಯೋರು ವಳ್ಳೆ ಜನ, ಮಾತಿಗೆ ತೆಪ್ಪದಿಲ್ಲ ಅಂತ ಅದೇನೇನೋ ಹೇಳರಪ್ಪ ಇವುರ ನೋಡಿದ್ರಿಂಗೆ" ಎಂದ ಕಾಳಮಾವ.

"ಅದೇನು ಅಮೃತಮಾಲ್ ದನ ಕೊಟ್ಟ ಅಂದಲ್ಲ ಅದೇನ್ನಾ?" ಎಂದಳು ಜುಮ್ಮಿ.

"ನೋಡೆ, ಅಮೃತಮಹಲ್ ದನ ಅಂತ ಒಂದು ತಳಿ ಅದೆ, ಅದು ಕೃಷ್ಣದೇವರಾಯನ ಕಾಲದಿಂದ್ಲೂ ಅಭಿವೃದ್ಧಿ ಆಗಿರೋ ದನ. ಅದ್ಯಂತ ತಳಿ ಅಂದ್ರೆ ಯುದ್ಧ ಮಾಡಕ್ಕೆ ಬಳಸೋರಂತೆ."

"ಕುದುರೆ ಬದ್ಲಿಗೆ ಅದ ಬಳಸೋರು ಅನ್ನು."

"ಏ ಅಂಗಲ್ಲ, ಎದುರಾಳಿ ಸೈನಿಕುರು ಬಂದಾಗ, ಇವ ಅವುರಮ್ಯಾಲೆ ಬುಟ್ಟುಬುಡೋರು. ಇವು ಅವುರ ಮ್ಯಾಲೆ ನುಗ್ಗಿ ಚೆಲ್ಲಂಪಲ್ಲಂ ಮಾಡಿಬುಡವು. ಆಗ ಇವು ಅಗಚಿಗಂಡ ಸೈನಿಕರ ಮ್ಯಾಲೆ ಬಿದ್ದು ಸೋಲಿಸಿಬಿಡೋರಂತೆ."

"ಓಹೋಹೋ, ಸೈನ್ಯ ಅಗಚಿ ಬುಡವು ಅನ್ನು" ಎಂದ ಸೀರ.

"ಊ ಕಣೊ ಮಾವ. ವಿಜಯನಗರದ ಅರಸರಾದ ಮ್ಯಾಲೆ ನಮ್ಮ ಮೈಸೂರರಸ್ರು ಅಭಿವೃದ್ಧಿ ಮಾಡಿದ್ರು. ಅಮಾಲೆ ಹೈದರಾಲಿ ಟಿಪ್ಪು ಸುಲ್ತಾನ್ ಕೈಗೆ ತಗಂಡು ಅಭಿವೃದ್ಧಿ ಮಾಡಿದ್ರು. ಆ ದನಗಳು ಮೆಯ್ಯಾಕ್ಕೆ ಅಂತ ಐದಾರು ಜಿಲ್ಲೆಲಿ ಕಾವುಲಿದೆ, ಈಗಲುವೆ."



"ಇದೇ ದಡಗ ಕೋಡಳ್ಳಿತ ಕಾವುಲಿತ್ತು ಕಂದ್ಯ" ಎಂದ ಕಾಳಮಾವ.

"ಇಲ್ಕಲ್ಲ ಕಾವುಲಿತ್ತೆ?" ಎಂದಳು ಜುಮ್ಮಿ.

"ಊ ಕಂದ್ಯೆ. ದಡಗದತ್ರ ದೊಡ್ಡನಳ್ಳಿ ಕಾವುಲಿತ್ತು. ಅಲ್ಲಿಗೂ ದನ ಬಂದು ಮೇಯವ್ರು. ನಾನು, ಈ ಚಿಕ್ಕಣ್ಣಾರಪ್ಪ ಬಸುವಣ್ಣ ಗಿರಿಗೌಡ ಯಲ್ಲಾ ಒಂದು ಸತಿಯ ದಡಗದ ಕಾವುಲು ನೋಡಕ್ಹೋಗಿದ್ವೋ ಕಂದ್ಯೆ. ಕಾವುಲ ದನ ನಮ್ಮ ತಿವಿಯಕ್ಕೆ ಅಂತ ಓಡಿ ಬತ್ತಾ ಅವೇ. ಬಸವಣ್ಣ ಓಡಿ ಮರ ಹತ್ತಿಗಂಡು ಬುಟ್ಟ. ನಾನು, ಗಿರಿಗೌಡ ದನ ಬಂದವಲ್ಲಪ್ಪೋ ಹಾಯ್ತವೇ ಅಂತ ಬಡಕಂಡು ಬುಟ್ವೊ ಕಂದ್ಯೆ. ಅದೇ ಟೇಮಿಗೆ ಸರಿಯಾಗಿ ದನ ಮೇಸೋರು ಅದ್ದಿಸ್ಥ ಕಂದ್ಯೆ. ಏನಂದ ಗೊತ್ತೆ?"

"ಏನಂದಾ?"

"ಲೇ ಕರಿಯಕ್ಕಾ, ಕ್ಯಂಪಲಕ್ಕೆ, ಬೇಕೆ ವದೆ? ಅಂತ ಅಬ್ಬರಿಸ್ತಾ ನೋಡು. ನಮ್ಮ ತಿವಿಯಲಿಕ್ಕೆ ಅಂತ ಬಂದ ದನ ಅಂಗೆ ಹಿಂದುಕೋದೋ ಕಂದ್ಯೆ. ಅವತ್ತವುನೇನಾದ ಇಲ್ದೆಯಿದ್ರೆ, ಕಳ್ಳ ಭಗದು ಬುಡವು" ಎಂದ ಕಾಳಮಾವ

ಆ ಕಾಲಕ್ಕೆ ಮಗುಚಿಕೊಂಡು ಯೋಚಿಸತೊಡಗಿದ.

"ಅವು ಹಳ್ಳಿಕಾರ್ ದನಿನಂಗೆ ಕ್ಯಾಣವಾದವಲ್ಲ ಕಣಮಾವ" ಎಂದ ಉಗ್ರಿ.

"ನಿಜ ಕ್ಯಲಸದಲ್ಲಿ ಸಿಟ್ಟು ಮಾಡ್ತವೆ, ಮನುಸ್ರ ಹಾಯದ್ರಲ್ಲಿ ಹಳ್ಳಿಕಾರ್ ದನವೇ ಮೋಸದ ದನ."

"ಹುಲಿ ಕ್ಯೆಲಿಂದ ಬುಡಿಸಿಗಂಡು ಬರೋ ದನ ಕಣೆ ಅವು" ಎಂದ ಉಗ್ರಿ

"ಅಂಥಾ ದನವೇನ್ನ?"

"ಊ ಕಣೆ. ಆರಿಗೂಡಿದ್ರೆ ಯಾವನು ಹಿಡಿಯಲಿಕ್ಯಾಗದಿಲ್ಲ, ಯಂತಾ ನೇಗಲಾದ್ರೂ ಕ್ಷಣವೇ ಬುಂಡೆ ಯಳದಂಗೆ ಯಳಕಂಡೋಯ್ತವೆ. ಮಣ್ಣಿನ ಮಕ್ಕಳು ಮಾತ್ರ ಮೇಣಿ ಹಿಡಿಬಲ್ರು"

"ಅಂಗರೆ ದ್ಯಾವೇಗೌಡನ ಮಕ್ಕಳು ಮಾತ್ರ ಹಿಡಿತರೆ ಅನ್ನೆ" ಎಂದು ಜುಮ್ಮಿ ನಕ್ಕಳು.

"ಅವೆ, ಅವು ಸತ್ತೋರಿಗೆ ಬೆಂಕಿ ಹಿಡಿತವೆ ಕಣಕ್ಕ" ಎಂದುಕೊಂಡು ವಾಟಿಸ್ಸೆ ಹಾಜರಾದ.

"ಅದ್ಯಾಕ್ಲ ಅಂಗಂತೀ?"

"ಇನ್ನೇನನ್ನನಕ್ಕ? ದ್ಯಾವೇಗೌಡ್ರು ಮಕ್ಕಳು ಅವುರಪ್ಪನಂಗೆ ಕಣಕ್ಕ. ಅವು ಯಾವತ್ತೂ ವಲಹುತ್ತಿಲ್ಲ. ಅರ್ಕೆ ವಡದಿಲ್ಲ. ಅವುಕ್ಕೂ ಬೇಸಾಯದ ಕಸುಬಿಗೂ ಸಮಂದಿಲ್ಲ" ಎಂದ ವಾಟಿಸ್ಸೆ.

"ನೀನೆ ಮಣ್ಣಿನ ಮಗಾದ್ರು ಅಮೃತಮಹಲ್ ತಳಿ ಹೂಡಿ ಆರುಳಕ್ಯಾಗದಿಲ್ಲ ಕಣೊ. ಅಂತಾ ದನ ಅವು" ಎಂದ ಉಗ್ರಿ.


"ಅದ್ಕೆ ಕಣೊ ಉಗ್ರಿ ಎಡೂರಪ್ಪ ರಾಮಚಂದ್ರಾಪುರದ ಮಠಕ್ಕೆ ದಾನ ಕೊಟ್ಟಿದ್ದು."

ಚೆನ್ನಿಗಪ್ಪ ಅನಾಥ ಇಂಜಿನಿಯರುಗಳು!

'ಈ ಹಾಳಾದವರ ಹೊಟ್ಟೇಲಿ ಯಾಕಾದ್ರೂ ಹುಟ್ಟಿದ್ನೊ' ಬಲೇ ಬೇಸರದ ದನಿಯಲ್ಲಿ ಹೇಳಿದ ಕ್ಯಾತ. ಆತನ ತಂದೆತಾಯಿಯರನ್ನು ನಾನು ಬಲ್ಲೆ. ಸಂಭಾವಿತ ಜನ ಅವರು. ಅಂತಹವರನ್ನು ಕುರಿತು ಹೀಗೆ ನಿಷ್ಠುರವಾಗಿ ಮಾತನಾಡುವುದು ಸರಿಯಲ್ಲ ಅನ್ನಿಸಿತು. ಅದನ್ನೇ ಅವನಿಗೆ ತಿಳಿಸಿದೆ. 'ಬರೀ ಗೌರವ, ಮಾನಮರ್ಯಾದೆ ಅಂತ ಬದುಕಿದ್ರಾಗೋಯ್ತ ಸಾ' ಅಂತ ತುಸು ಕೋಪದಿಂದಲೇ ಕೇಳಿದ. ಅವನ ಕಷ್ಟ ಏನೂ ಅಂದರೆ ಅಪ್ಪ ಅಮ್ಮ ಬದುಕಿದ್ದಾರೆ. ಅನಾಥ ಅಂದುಕೊಳ್ಳುವ ಸೌಭಾಗ್ಯ ಇಲ್ಲ. ಆಗರ್ಭ ಶ್ರೀಮಂತ ಅಂತ ಹೇಳಿಕೊಳ್ಳುವ ಯೋಗಾನೂ ಇಲ್ಲ. ಹೊಟ್ಟೆಗಿದ್ದರೆ ಬಟ್ಟೆಗಿಲ್ಲ, ಬಟ್ಟೆಗಿದ್ದರೆ ಹೊಟ್ಟೆಗಿಲ್ಲ ಅನ್ನುವ ಪರಿಸ್ಥಿತಿ. ಆ ದೇವರು ಕಣ್ಣುಬಿಟ್ಟು ಮಳೆ ಬೆಳೆ ಆದರೆ ಹಿಟ್ಟು ಬಟ್ಟೆಗೆ ನೇರ. ಇಲ್ಲ ಅದಕ್ಕೂ ತತ್ವಾರ. ಇಂತಹ ಬಡಬಾಳಿಗೆ ಮಕ್ಕಳನ್ನು ಯಾಕಾದರೂ ಹುಟ್ಟಿಸಬೇಕಾಗಿತ್ತು ಅನ್ನುವುದು ಅವನ ಪ್ರಶ್ನೆ.

ಚಿನ್ನದ ಚಮಚಾನೆ ಕಚ್ಚಿಕೊಂಡು ಹುಟ್ಟಬೇಕು ಅನ್ನೋದು ಎಲ್ಲರ ಆಸೆ. ಕ್ಯಾತನೂ ಇದನ್ನೇ ಬಯಸಿದ್ದ. ಆದರೆ ಅಪ್ಪ ಅವ್ವ ನೆಗೆದಾದರೂ ಬಿದ್ದಿದ್ರೆ ಅನಾಥನಾಗಿಯಾದರೂ ಇರಬಹುದಾಗಿತ್ತು ಅಂತಿದ್ದಾನಲ್ಲ, ಇದೆಂತಹ ಬಯಕೆ ಅನ್ನೊ ಕುತೂಹಲ ಕೆರಳಿತು. ಕೆದಕಿದೆ. ತಿಳಿದುಬಂದ ವಿಷಯ ಇದು.

ಚೆನ್ನಿಗಪ್ಪನವರು ಗೊತ್ತಲ್ಲಾ, ಅದೇ ತಲೆ ಖಾಲಿ ಬಾಯಿ ಜೋರು ಆಸಾಮಿ. ದೇವೇಗೌಡರನ್ನು ಅಪ್ಪಾಜಿ ಅಪ್ಪಾಜಿ ಅಂತ ಹಂಬಲಿಸುತ್ತಿದ್ದೋರು. ತನ್ನನ್ನು ಮಂತ್ರಿ ಮಾಡಲಿಲ್ಲವ್ರೋ ಅಂತ ಗೌಡರ ಮನೆ ಮುಂದೆ ಗೊಳೋ ಅಂತ ಕಣ್ಣೀರು ಸುರಿಸ್ದೋರು. ಗೌಡರ ಮನೆಯವರಿಗೆ ನಾಯಿಗಿಂತಲೂ ಅಧಿಕ ನಿಷ್ಠೆ ಪ್ರದರ್ಶಿಸುತ್ತಿದ್ದೋರು. ಅವರ ಹೆಂಡತಿ ಮಕ್ಕಳ ಹೆಸರಿನಲ್ಲೇ ಪ್ರಮಾಣ ವಚನಾನೂ ಸ್ವೀಕರಿಸಿದೋರು. ಓಹೋ ಇಂತಹ ವಂಶನಿಷ್ಠನನ್ನು ಮಂತ್ರಿ ಮಾಡಿದರೆ ಮನೆ ಮುಂದಿ ಹಾಕಿದ ಗೆರೇನ ದಾಟೋದಿಲ್ಲ ಬರೋ ಆದಾಯದಲ್ಲಿ ಪಾಲನ್ನು ಸರಿಯಾಗಿ ತಲುಪಿಸೋದನ್ನು ತಪ್ಪಿಸೋಲ್ಲ ಎಂಬ ಭ್ರಮೆ ಮೂಡಿಸಿ ಅರಣ್ಯ ಮಂತ್ರಿ ಅಂತ ಮಾಡಿಸಿಕೊಂಡೋರು. ಯಾರುಯಾರಿಗೆ ಯಾವ ಯಾವಾಗ ಜ್ಞಾನೋದಯ ಆಗುತ್ತದೆಯೋ ಹೇಳಲು ಬರುವುದಿಲ್ಲ. ಮಂತ್ರಿ ಚೆನ್ನಿಗಪ್ಪನವರಿಗೆ ಮಂತ್ರಿ ಪದವಿ ಬಂದಮೇಲೆ ಆಹಾ ಈ ದೇಶದಲ್ಲಿ ಇಷ್ಟೊಂದು ಅನಾಥ ಮಕ್ಕಳಿದ್ದಾರಲ್ಲ



ಅವರಿಗೆ ಒಂದು ಗತಿ ಕಾಣಿಸಬೇಕು ಅನ್ನಿಸಿತಂತೆ. ಆ ಕ್ಷಣದಲ್ಲೇ ನಿರ್ಗತಿಕ ಮಕ್ಕಳಿಗೋಸ್ಕರ ಅಂತರರಾಷ್ಟ್ರೀಯ ಮಟ್ಟದ ಅನಾಥಾಲಯ ಕಟ್ಟಿಸಲು ನಿರ್ಧರಿಸಿದರಂತೆ. ಅನಾಥ ಮಕ್ಕಳು ಹುಟ್ಟಲೂ ಆ ದಯಾಮಯನಾದ ಭಗವಂತನೇ ಕಾರಣ ಎಂದೋ ಏನೋ ಬ್ರಹ್ಮಚಾರಿ ಹನುಮಂತನ ಹೆಸರಿನಲ್ಲಿ ಮಾರುತಿ ಸೇವಾ ಟ್ರಸ್ಟ್ ಪ್ರಾರಂಭಿಸಿದಂತೆ.

ಪಂಚತಾರಾ ಹೋಟೆಲಿನ ಸೌಲಭ್ಯ ಎಷ್ಟು ಮಕ್ಕಳು ಅನುಭವಿಸಿದರು, ಅನುಭವಿಸುತ್ತಾರೆ ಎಂದೆಲ್ಲ ಈಗಲೇ ಪ್ರಶ್ನಿಸುವುದು ತರವಲ್ಲ, ಇನ್ನೂ ಜಮೀನು ವಶಪಡಿಸಿಕೊಳ್ಳಬೇಕು, ಕಟ್ಟಡ ಎಬ್ಬಿಸಬೇಕು. ಆಮೇಲೆ ಅನಾಥರು ಬರಬೇಕು ತಾನೆ. ಮಂತ್ರಿ ಚೆನ್ನಿಗಪ್ಪನವರಿಗೆ ಹುಟ್ಟೂರಾದ ಬೈರನಾಯಕನಹಳ್ಳಿಯೇ ಇದಕ್ಕೆಲ್ಲ ಪ್ರಶಸ್ತವಾದ ಜಾಗ ಅನ್ನಿಸಿರಬೇಕು. ಅರಣ್ಯ ಸಚಿವರು ನೋಡಿ. ನಿಸರ್ಗದ ಮೇಲೆ ಅದಮ್ಯ ಪ್ರೀತಿ. ಕೆರೆಗೆ ತಾಕಿಕೊಂಡಂತೆಯೇ ಅನಾಥಮಕ್ಕಳ ಪಂಚತಾರಾ ಆಶ್ರಮ ಇದ್ದರೆ ಬಲೇ ಪಸಂದು ಅನ್ನಿಸಿರಬೇಕು. ಅದೇ ಜಾಗವನ್ನು ಆಯ್ಕೆ ಮಾಡಿದರು. ಈ ಸ್ಥಳದಲ್ಲಿ ಬೈರನಾಯಕನಹಳ್ಳಿ ಕೆರೆ ಒತ್ತುವರಿ ಮಾಡಿಕೊಳ್ಳಲಾಗಿದೆ. ಹಾಗೆ ಹೀಗೆ ಎಂಬುದಾಗಿ ಆಗದವರು ಆಡಿಕೊಳ್ಳುತ್ತಾರೆ ಬಿಡಿ. ಒಂದು ವೇಳೆ ಹೀಗೆ ಮಾಡಿಕೊಂಡಿದ್ದರೂ ಅದೇನು ಅವರ ಸ್ವಂತಕ್ಕೆ ಮಾಡಿಕೊಂಡಿದ್ದು ಅಲ್ಲವಲ್ಲ, ಅನಾಥಮಕ್ಕಳಿಗೆ ತಾನೆ. ಅದೂಅಲ್ಲದೆ ಇಡೀ ಆಶ್ರಮವನ್ನು ಚೆನ್ನಿಗಪ್ಪ ಅವರೇ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಯವರ ಹೆಸರಿಗೆ ನೋಂದಣಿ ಮಾಡಿಸಿದ್ದಾರೆ. ಒತ್ತುವರಿ ಕೇಸು ಜಾಡಿಸುವಂತಿದ್ದರೆ ಜಿಲ್ಲಾಧಿಕಾರಿಯ ಮೇಲೆಯೇ ಹೊರತು ಮಾನ್ಯ ಮಾಜಿ ಸಚಿವರ ಮೇಲಲ್ಲ ಅಲ್ಲವಾ!

ಜಾಗ ಆಯಿತು. ಹಣ ಬೇಕಲ್ಲ, ಪಂಚತಾರಾ ಆಶ್ರಮವೇನು ಮಾಯಾಮಂತ್ರ ಮಾಡಿ ಏಳಿಸುವ ಕೆಲಸವಾ. ಅದಕ್ಕಾಗಿ ಮಾಜಿ ಅರಣ್ಯ ಸಚಿವರು ಹಾಲಿ ಆಗಿದ್ದಾಗ ತನುಮನವನ್ನೇ ಧಾರೆ ಎರೆದರು. ತಮ್ಮ ಬಳಿ ಬಂದವರಿಗೆಲ್ಲ ಅನಾಥ ಮಕ್ಕಳ ಭಯಂಕರ ಬದುಕನ್ನು ಮನ ಕರಗುವಂತೆ ವಿವರಿಸಿದರು. ಅವರ ಮಾತು ಕೇಳುತ್ತಾಕೇಳುತ್ತಾ ಬಂದವರೂ ನೊಂದ ಮಕ್ಕಳ ಕುರಿತು ಅನುಕಂಪ ಸೂಚಿಸುತ್ತಿದ್ದರು. ಅನುಕಂಪವನ್ನೇನು ಯಾರು ಬೇಕಾದರೂ ಸುರಿಸಬಹುದು. ಅದರ ಜೊತೆ 'ಧನಕಂಪ'ವನ್ನು ಸುರಿಸಿದವರಿಗೆ ಅರಣ್ಯಮಂತ್ರಿಗಳ ಅಭಯಹಸ್ತ ನೀಡಲಾಗುತ್ತಿತ್ತಂತೆ. ಹೀಗಾಗಿ ಅರಣ್ಯ ಸಚಿವರ ಬಳಿಗೆ ಯಾರು ಕೆಲಸ ಮಾಡಿಸಿಕೊಳ್ಳಲು ಬಂದರೂ ಎರಡು ಬ್ರೀಫ್‌ಕೇಸುಗಳನ್ನು-ಒಂದು ಸಚಿವರಿಗೆ, ಮತ್ತೊಂದು ಆಶ್ರಮಕ್ಕೆ-ತರುವುದು ಕಡ್ಡಾಯವಾಗಿತ್ತು ಎಂಬುದು ಖಚಿತವಾಗಿಲ್ಲ.

ಮಂತ್ರಿಯಾಗಿರುವವರು ಯಾವ ಸ್ಥಳದಲ್ಲಿ ಏನನ್ನು ಬೇಕಾದರೂ ನಿರ್ಮಿಸಬಹುದು ಎಂಬ ಅಲಿಖಿತ ಕಾನೂನೇ ಇರುವ ಈ ದಿನಗಳಲ್ಲೂ ಮಾನ್ಯ ಸಚಿವರು ಅದನ್ನು ಬಳಸಿಕೊಳ್ಳಲಿಲ್ಲ. ಆಶ್ರಮ ಬರಬೇಕಾಗಿರುವ ಸ್ಥಳ ಬೈರನಾಯಕನಹಳ್ಳಿಕೆರೆ ಬಯಲಾಗಿದ್ದು ಅದು ಅರ್ಕಾವತಿ ಜಲಾನಯನ ಪ್ರದೇಶದ ವ್ಯಾಪ್ತಿಗೆ ಬರುತ್ತದೆ. ಕೃಷಿ ಭೂಮಿಯನ್ನು ಕೃಷಿಯೇತರ ಬಳಕೆಗೆ ಉಪಯೋಗಿಸುವಂತಿದ್ದರೆ ಸರ್ಕಾರದ ಅನುಮತಿ ಇರಬೇಕು. ಮಂತ್ರಿಗಳೇ ಸರ್ಕಾರ ಅಲ್ಲವಾ. ಆದರೂ ಮಾನ್ಯ ಚೆನ್ನಿಗಪ್ಪನವರು ನೆಲಮಂಗಲ ಅಭಿವೃದ್ಧಿ ಪ್ರಾಧಿಕಾರಕ್ಕೆ ಅನುಮತಿ ಕೋರಿ ಪತ್ರ ಬರೆದು ದೊಡ್ಡತನ ಮೆರೆದಿದ್ದಾರೆ. ಆ ಪ್ರಾಧಿಕಾರ ಅನುಮತಿ ನೀಡದಿರುವುದು ಅದರ ವೈಫಲ್ಯವನ್ನು ಎತ್ತಿ ಹಿಡಿದಂತಾಗಿದೆಯೇ ಹೊರತು ಚೆನ್ನಿಗಪ್ಪ ಅವರದ್ದನ್ನಲ್ಲ! ಭೂ ಕಬಳಿಕೆಯ ಬಗ್ಗೆ ಕೂಲಂಕಷ ತನಿಖೆ ನಡೆಸಲು ಎ.ಟಿ. ರಾಮಸ್ವಾಮಿಯವರ ನೇತೃತ್ವದಲ್ಲಿ ಸಮಿತಿ ರಚಿಸಿತಲ್ಲಾ ಹಿಂದಿನ ಸರ್ಕಾರ. ಅದರಲ್ಲೂ ಚೆನ್ನಿಗಪ್ಪನವರ ಹೆಸರು ಸೇರಿಸಲಾಗಿದೆಯಂತೆ. ಒಳ್ಳೆಯ ಕೆಲಸಕ್ಕೆ ಎಷ್ಟೊಂದು ವಿಘ್ನ!

ಅಣಕ

ಎಚ್.ಎಲ್. ಕೇಶವಮೂರ್ತಿ

ಈ ಎಲ್ಲ ಅಡೆತಡೆಗಳ ನಡುವೆಯೂ ಚೆನ್ನಿಗಪ್ಪನವರು ಪಂಚತಾರಾ ಆಶ್ರಮ ನಿರ್ಮಿಸಿದರು. ತನ್ನ ಮಾತಾಪಿತೃ ಸಮಾನರಾದ ಹೆಸರು ಇಟ್ಟರು. ಚೆನ್ನಮ್ಮಾಜಿ ದೇವೇಗೌಡ ಅನಾಥ ಆಶ್ರಮ ಆಯಿತು. ಅದರ ಉದ್ಘಾಟನೆಯಾಗಬೇಕಲ್ಲ. ಅಪ್ಪಾಜಿಯವರಾದ ದೇವೇಗೌಡರನ್ನೇ ಆಹ್ವಾನಿಸಿದರು. ಉದ್ಘಾಟನೆಗೆ ಮೊದಲೇ ಅನಾಥರನ್ನು ಸೇರಿಸಿಕೊಂಡಿರಲಿಲ್ಲವಾಗಿ ದೇವೇಗೌಡ ಕುಮಾರಸ್ವಾಮಿಯವರನ್ನೊಳಗೊಂಡಂತೆ ಅವರ ವಂಶದ ಎಲ್ಲರನ್ನೂ ಅನಾಥಾಲಯದಲ್ಲಿ ದಾಖಲಿಸಲು ಬಯಸಿದ್ದರೇನೋ! ಆದರೆ ಅವರೆಲ್ಲ ಯಾವಯಾವುದೋ ನೆಪ ಹೇಳಿ ಸಮಾರಂಭದಿಂದ ಜಾರಿಕೊಂಡರು! ಅಂತೂ ಹೇಗೋ ಉದ್ಘಾಟನೆ. ಅಂತ ಒಂದು ನಡೆಯಿತು ಅನ್ನಿ.

ಚೆನ್ನಮ್ಮಾಜಿ ದೇವೇಗೌಡ ಅನಾಥ ಆಶ್ರಮ ಉದ್ಘಾಟನೆಯೇನೋ ಆಯಿತು. ಅನಾಥ ಮಕ್ಕಳೇ

"ಅಂಗೆ ಆಯ್ತಪ್ಪ."

"ರಾಮಚಂದ್ರಾಪುರದ ಮಠದಲ್ಲಿ ಸ್ವಾಮಿ ದನವ ಸೋಗಿಟ್ಟವುನೆ. ...ದೋರು ಇಂತಿಂತ ದನ ಹಿಂಗರತವೆ ಅಂತ ನೋಡಿಕಂಡು ಬಂದರಂತೆ. ...ಮುಂದೆ ಅವುನು ಅಮ್ರುತ್‌ಮಹಲ್ ತಳಿನೂ ತಗಂಡೋಗಿ ಇಡತನೆ. ...ಹೋಗಿ ನೋಡಿಕೊಂಡು ಬತ್ತವೆ."

"ಅವುನೇನೊ ಚನ್ನಾಗಿ ಹುಲ್ಲು ನೀರು ಕೊಟ್ಟು ಸಾಕ್ತನಂತೆ. ಬುಡ್ತ ...ಗ್ಲಿ" ಎಂದ ಶೀರ.

"ಚಿಗಪ್ಪ ನಿನ್ನಂಥೋರು ಜಾಸ್ತಿಯಾದ್ದರಿಂದ್ಲೆಯ ಎಡೂರಪ್ಪ ಮಾಡಬಾರದ ...ಸ ಮಾಡ್ತಯಿರದು."

"ಇಸಿಸಿ, ಇರದೇಳಿದೆ ಕಂದ್ಕ, ರಾಂಚಂದ್ರಾಮಠದ ಸ್ವಾಮಿ ದನವ ಚನ್ನಾಗಿ ...ನೆ ಅಂದ್ರು. ಸಾಕೋನತ್ರ ದನಿರ್ಲಿ ಬುಡು."

"ಬರಿ ದನಾಗಿದ್ರೆ ಯಾರೂ ಮಾತಾಡತಿರಲಿಲ್ಲ ಚಿಗಪ್ಪ, ಸಾವುರಾರ್‍ಕರೆ ...ಮಾಳದೆ, ಅದ ಬುದ್ಸನ ಅವುನು? ಎಲ್ಲೆಲ್ಲಿ ಗೋಮಾಳದೆ ಅಲ್ಲಿಗೆ ...ದು ಒಂದೊಂದು ಗೋಮಠ ಮಾಡ್ತನೆ. ಆಗೇನು ಮಾಡ್ತಿ ನೀನು? ...ಕ್ಕೋದಾಸ್ತಿ ಮಸಾಣಕ್ಕೋದ ಹ್ಯಣ ತಿರಗಬಂದವೆ ಚಿಗಪ್ಪ? ಅಂಗಾಯ್ತದೆ. ...ಚುಂಚುನಗಿರಿಮಠಕ್ಕೆ ರೈತರು ಜಮೀನು ಕೊಟ್ರಲ್ಲಾ, ತಿರಗಬತ್ತೆ? ...ಗಾಯ್ತದೆ."

"ಅಂಗಾದ್ರೆ ಕೊಡದಲ್ಲ ಬುಡು."

"ಅದ್ಕೆ, ನಾವೇನೇಳ್ತಿವಪ್ಪ ಅಂದ್ರೇ, ಪಶುಸಂಗೋಪನ ಇಲಾಖೆ ಅದೆ, ...ದಕ್ಕೆ ಒಬ್ಬ ಮಂತ್ರಿ ಅವುನೆ, ಬೇಕಾದೊಷ್ಟು ಅಧಿಕಾರಿಗಳವುರೆ, ಅವುರ ...ತೆ ಸರಿ ಮಾಡ್ಲಿ ಅಂತಿವಿ."

"ಯಡೂರಪ್ಪ ಯಾಕಂಗೆ ಮಾಡಿದ?"

"ಎಡೂರಪ್ಪನಿಗೆ ಹುಟ್ಟಿದಾಗಿಂದ ಸ್ವಂತ ತಲೆ ಇಲವಂತೆ ಕಣ್ರೊ. ಸ್ವಂತ ...ಯೇ ಇದ್ರೆ ಲಿಂಗಾಯಿತ್ರೋನ್ಯಾಕೋಗಿ ಬಿಜೆಪಿ ಸೇರತಿದ್ದ? ಬಿಜೆಪಿ ಸೇರಿದ್ರಿಂದ ...ಸವಣ್ಣನ ಮರೆತು, ರಾಘವೇಶ್ವರನ್ನ ಹಿಡಕಂಡ. ಈಗವುನು ಇವನ ...ಹಿಡಕಂಡು ಮಠ, ಗೋಮಾಳ, ಗೋಕರ್ಣ, ಯಲ್ಲಾನು ಬರಿಸಿಗುತ್ತಾ ...ವುನೆ."

"ಇನ್ನು ಏನೇನು ಬರಿತನ್ಲಾ ಅಂಗರೇ?"

"ಇನ್ನ ಏನ್ನಾರ ಬರಿಯದು ಕಷ್ಟ ದ್ವಡಪ್ಪ, ನಿಮ್ಮ ದ್ಯಾವೇಗೌಡ್ರು ಆಗ್ಲೆ ...ಬಚಿ ಕ್ವಡವಿಕೊಂಡು ಎದ್ದವುರೆ."

"ಅವುನೆದ್ದ ಮ್ಯಾಲೆ ಮುಗಿತುಬುಡು, ತಡಿತನೆ."

"ಇಷ್ಟಕ್ಯಲ್ಲ ಕಾರಣನೆ ಅವುನು ದ್ವಡಪ್ಪ, ಎಡೂರಪ್ಪನ್ನ ತಂದು ಕೂರಿಸಿದ್ದೆ ...ವೇಗೌಡಲವೆ?"

"ಅಂಗಂತಿಯಾ?"

"ಕಣಿಕೇಳು!" ■

...ರಲಿಲ್ಲ! ಎಲ್ಲರೂ ಕ್ಯಾತನ ತರಹವೇ ಅಲ್ಲವಲ್ಲ. ಆ ವೈಭವಯುತ ಕಟ್ಟಡ ...ನೋಡಿಯೇ ಅನಾಥ ಮಕ್ಕಳು ಒತ್ತಟ್ಟಿಗಿರಲಿ, ಸಾಮಾನ್ಯ ಜನರ ಮಕ್ಕಳೇ ...ಗಿಲು ಬೀಳುತ್ತಿದ್ದರೇನೋ! ಹೈಟೆಕ್ ಸ್ವಾಮಿಗಳನ್ನು ಸಂಪರ್ಕಿಸಿದ್ದರೆ ಅನಾಥ ...ಮಕ್ಕಳು ದೊರೆಯುತ್ತಿದ್ದರೇನೋ. ಅವರು ಹಾಗೆ ಮಾಡಲಿಲ್ಲ. ಇಂಜಿನಿಯರಿಂಗ್ ...ಕಾಲೇಜು ಪ್ರಾರಂಭಿಸಿದರು.

ಚಿನ್ನಮ್ಮಾಜಿ ದೇವೇಗೌಡ ತಾಂತ್ರಿಕ ಮಹಾವಿದ್ಯಾಲಯ ಎಂದೇ ಹೆಸರು?

ಕಾಲ ಬದಲಾಗಿದೆ. ಇನ್ನೂ ಅದೇ ಹೆಸರೆ? ಇದು ಸಾಧ್ಯ ಇಲ್ಲ.

ಯಾಕೆ ಸಾಧ್ಯ ಇಲ್ಲ?

ಆ ಅಪ್ಪಾಜಿ ಈಗ ಅಪ್ಪಾಜಿ ಅಲ್ಲ!

ಯಾಕೆ ಅಲ್ಲ?

ಅವರ ಬಳಿ ಅಧಿಕಾರ ಇಲ್ಲ!

ಹಾಗಾದರೆ ಈಗ ಅವರು ಏನು?

ನಕಲಿ ಮಣ್ಣಿನ ಮಗ! ಈಗ ದೃಶ್ಯ ಬದಲಾಗಿದೆ. ಗೌಡರ ದರ್ಬಾರು ಮುಗಿದು, ಲಿಂಗದ ದರ್ಬಾರು ಬಂದಿದೆ!

ಈಗ ಅದರ ಹೆಸರು ಏನು?

ಶ್ರೀ ಶಿವಕುಮಾರಸ್ವಾಮಿ ತಾಂತ್ರಿಕ ಮಹಾವಿದ್ಯಾಲಯ!

ಅಕ್ರಮ ಕಬಳಿಕೆಯಲ್ಲಿ ಈ ಗುರುಪೀಠವೂ ಶಾಮೀಲಾ?

ಇಲ್ಲ ಇಲ್ಲ, ಈ ಆಶ್ರಮದ ಕಟ್ಟಡದಲ್ಲಿ ಇನ್ನುಮುಂದೆ ಅನಾಥ ಮಕ್ಕಳು ...ತಾಂತ್ರಿಕ ವಿದ್ಯೆ ಕಲಿಯಲು ಮುಂದೆ ಬಂದಲ್ಲಿ(!) ಅವಕಾಶ ಕಲ್ಪಿಸಲಾಗುವುದಂತೆ! ...ಅದರ ಖರ್ಚು ವೆಚ್ಚವೆಲ್ಲವನ್ನು ಮಾರುತಿ ಸೇವಾ ಟ್ರಸ್ಟ್ ಭರಿಸುವುದಂತೆ! ...ಅದಕ್ಕಾಗಿ ಸ್ವಾಮೀಜಿ ತಮ್ಮ ಹೆಸರನ್ನು ಇಡಲು ಒಪ್ಪಿಗೆ ಸೂಚಿಸಿದರಂತೆ!

ಅಂದರೆ, ಮುಂದೆಯೂ ಸಾರ್ವಜನಿಕರಿಂದ ಹಣ ದೋಚಲು ವ್ಯವಸ್ಥಿತವಾಗಿ ...ಜಾಲ ಎಣೆದಿದೆ ಎಂದಾಯಿತು! ಒಂದು ವೇಳೆ ವೀರಶೈವರು ಮುಗ್ಗರಿಸಿ ...ಇತರೆ ಜಾತಿಯವರು ಎದ್ದು ಬಂದರೆ?

ಆ ಜಾತಿಯ ಮಠದ ಸ್ವಾಮೀಜಿ ಹೆಸರಿಟ್ಟರಾಯಿತು!

ಅದು ಸರಿ. ಆದರೆ ಇವರ ದಂಧೆಗೆ ಅಡಚಣೆಯಾಗುತ್ತದಲ್ಲ?

ಆಗುವುದೇ ಇಲ್ಲ, ಈಗ ಭಾಜಪ ಸೇರಿದಂತೆ ಆಗ ಅವರ ಪಕ್ಷ ಸೇರಿದರಾಯಿತು!


ಪಕ್ಷ ಬದಲಾವಣೆಯಿಂದಲೇ ಇದು ಸಾಧ್ಯವೆ?

ಸಾಧ್ಯ ಇಲ್ಲ ಅನ್ನುವುದಾದರೆ ಯಡ್ಡಿಯನ್ನು ಹೀನಾಮಾನ ತೆಗಳಿದರಾಯಿತು! ...ರಾಜಕಾರಣಿಗಳಿಗೆ ಇಂತಹವನ್ನೆಲ್ಲ ಹೇಳಿಕೊಡಬೇಕಾ....!

ಅನಾಥ ಮಕ್ಕಳು ಸೇರಲಿ ಬಿಡಲಿ, ಅಲ್ಲಿಗೆ ಸೇರಿದ ಇಂಜಿನಿಯರಿಂಗ್ ...ವಿದ್ಯಾರ್ಥಿಗಳು ಅನಾಥರಾಗುವುದು ಖಾತರಿ ಎಂದ ಹಾಗಾಯಿತು! ■

ಬಸವನಗುಡಿ ಮೈದಾನದಲ್ಲಿ ಅಡ್ವಾಣಿ

ಮರೆಯುವ ಮುನ್ನ



■ಪಿ. ಲಂಕೇಶ್ ಡಿಸೆಂಬರ್ 2, 1990

ಅವತ್ತು ಗುರುವಾರ, ಬೆಳಗ್ಗೆಯಿಂದಲೇ ಅಡ್ವಾಣಿಯವರ ನ್ಯಾಷನಲ್ ಹೈಸ್ಕೂಲ್ ಮೈದಾನದ ಬಹಿರಂಗ ಸಭೆಗೆ ಹೋಗಬೇಕೆಂದುಕೊಂಡಿದ್ದೆ. ಎಲ್ಲರಂತೆ ನನಗೂ ಕುತೂಹಲ; ಬಿಹಾರ್, ಉತ್ತರ ಪ್ರದೇಶಗಳಲ್ಲಿ ದೊಡ್ಡ ಸುದ್ದಿ ಮಾಡಿದ ಅಡ್ವಾಣಿ, ರಥಯಾತ್ರೆಯಿಂದ ಸೂಕ್ಷ್ಮಜ್ಞರು ಲಜ್ಜೆಪಡುವಂತೆ, ಹುಂಬರು ಎದೆಯುಬ್ಬಿಸುವಂತೆ ಮಾಡಿ ವಿನಾಕಾರಣ ತಮ್ಮ ಗೆಳೆಯ ವಿ.ಪಿ ಸಿಂಗ್ ಕೆಳಗುರುಳುವಂತೆ ಮಾಡಿದ ಅಡ್ವಾಣಿ, ಮುಸ್ಲಿಮರು, ಹಿಂದೂಗಳು ಒಂದಾಗಬೇಕೆಂದು ಹೇಳುತ್ತಲೇ ಸಾವಿರಾರು ಜನ ಹಿಂದೂಗಳೂ, ಮುಸ್ಲಿಮರೂ ಸತ್ತು ನೆಲಕ್ಕೊರಗಲು ಕಾರಣರಾದ ಅಡ್ವಾಣಿ.

ಆರೂವರೆಗೆ ಹೊರಟೆ. ಹತ್ತು ದಿಕ್ಕುಗಳಿಂದಲೂ ನ್ಯಾಷನಲ್ ಹೈಸ್ಕೂಲ್ ಮೈದಾನದತ್ತ ಬರುತ್ತಿರುವ ಜನ. ಹೆದರಿಕೊಂಡ ಪೊಲೀಸರು ದಾರಿಯಲ್ಲಿ ಎಲ್ಲ ಕಾರುಗಳನ್ನು ತಡೆದು ನಿಲ್ಲಿಸಿ ವಿರುದ್ಧ ದಿಕ್ಕಿಗೆ ಹೋಗಲು ಅಟ್ಟುತ್ತಿದ್ದರು. ನಾನೂ ಬೇರೆ ದಿಕ್ಕು ಹಿಡಿದು ಕಾರು ಓಡಿಸಿದೆ–ಅಲ್ಲಿ ಒಂದು ಕಡೆ ನಿಲ್ಲಿಸಿ ಯೋಚಿಸಿದೆ. ಎಲ್ಲೋ ದಾರಿಯಲ್ಲಿ ಕಾರು ಬಿಟ್ಟು ಹೋಗುವಷ್ಟು ಮುಖ್ಯ ಸಭೆ ಇದಲ್ಲ ಎಂದುಕೊಂಡು ಕಚೇರಿಗೆ ಹಿಂದಿರುಗಿದೆ. ಅಲ್ಲಿ ಕಾರು ನಿಲ್ಲಿಸಿ ಸುಮ್ಮನೆ ಕೂತೆ. ಶೂದ್ರ ಶ್ರೀನಿವಾಸ್ ಮತ್ತು ಅವನ ಗೆಳೆಯರು "ಈಗ ಬಂದುಬಿಡ್ತೇವೆ" ಎಂದು ಸಭೆಗೆ ಹೋಗಿದ್ದವರು ಏಳೂಕಾಲು ಗಂಟೆಯವರೆಗೆ ಕಾದು ಬಂದರು. ಅಡ್ವಾಣಿ ಬಂದಿರಲಿಲ್ಲ, ಬೆಂಗಳೂರಿನ ಬಿಜೆಪಿಗಳು ಮನಸ್ಸಿಗೆ ಬಂದಹಾಗೆ ಘೋಷಣೆ ಅರಚುತ್ತಿದ್ದರು. ಜನ ಘೇರಾಯಿಸಿದ್ದರು. ಸತ್ಯಕ್ಕೆ ಅಪಚಾರ ಬೇಡ. ಕಳೆದ ಹತ್ತಾರು ವರ್ಷ ಸೇರದಷ್ಟು ಜನ. ನ್ಯಾಷನಲ್ ಕಾಲೇಜ್ ಮೈದಾನ ತುಂಬಿ ರಸ್ತೆಯವರೆಗೆ ನಿಂತಿದ್ದ ಜನ. ನಾವು ಮತ್ತೆ ಹೋಗಿ ದೂರದಲ್ಲಿ ನಿಂತಾಗ ಅಡ್ವಾಣಿ ಬಂದಿದ್ದರು.



ಅಡ್ವಾಣಿಗೆ ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತು. ಈತ ವಾಜಪೇಯಿಯಷ್ಟು ಒಳ್ಳೆಯ ಭಾಷಣಕಾರರಲ್ಲ; ವಾಜಪೇಯಿಯಷ್ಟು ವಿವೇಕಿಯಲ್ಲ ಕೂಡ. ಕಾಂಗ್ರೆಸ್ ವಿರೋಧಿ ಅಲೆ ಉತ್ತರ ಭಾರತದಲ್ಲಿ ತೀವ್ರವಾಗಿದ್ದಾಗ ಅಡ್ವಾಣಿಯನ್ನೇ ಬಿಜೆಪಿಯ ಅಧ್ಯಕ್ಷರನ್ನಾಗಿ ಮಾಡಿದರು. ಕಮ್ಯೂನಿಸ್ಟ್, ಜನಮೋರ್ಚಾ, ಜನತಾದಳ, ಬಿಜೆಪಿಗಳೆಲ್ಲ ಒಟ್ಟಾಗಿ ಹೋರಾಡುವ, ಒಟ್ಟಾಗಿ ಆಡಳಿತ ನಡೆಸುವ ಭರವಸೆ ನೀಡಿದರು. ಜನ ಈ ಭರವಸೆಯನ್ನು ನಂಬಿ ಮತ ನೀಡಿದರು. ಈ ಸಂದರ್ಭದಲ್ಲಿಯೇ ಮಧ್ಯಪ್ರದೇಶದಲ್ಲಿ ಶಾಸನಸಭೆಗೆ ನಿಂತ ಕಳ್ಳ ಮಾರ್ಕೆಟ್ಟಿಗರು, ಧೂರ್ತ ವ್ಯಾಪಾರಿಗಳೆಲ್ಲ ಆಯ್ಕೆಯಾಗಿ ಸರ್ಕಾರ ರಚಿಸಿದರು. ಕೇಂದ್ರದಲ್ಲಿ ವಿ.ಪಿ.ಯನ್ನೇ ನಂಬಿದ ಎಲ್ಲರೂ ಸೇರಿಕೊಂಡು ಸರ್ಕಾರ ರಚಿಸಲು ನೆರವಾದರು. ಆದರೆ ಚಿರತೆ ತನ್ನ ಚುಕ್ಕೆಗಳನ್ನು ಬದಲಿಸುವುದಿಲ್ಲ; ನಾಯಿಯ ಬಾಲ ನೆಟ್ಟಗಾಗುವುದಿಲ್ಲ. ನಿರೀಕ್ಷೆಗೆ ತಕ್ಕಂತೆಯೇ ಬಿಜೆಪಿ ತನ್ನ ಅಂಗಾಂಗಗಳಾದ ಆರೆಸ್ಸೆಸ್, ವಿಶ್ವ ಹಿಂದೂ ಪರಿಷತ್ ಮುಂತಾದವರನ್ನು ಚುರುಕುಗೊಳಿಸಿತು. ಇಲ್ಲದ ತರಲೆ ತೆಗೆದು ಜಗಳಕ್ಕೆ ಕಾಲು ಕೆರೆಯಿತು. ಇದೆಲ್ಲ ಕತೆ ಎಲ್ಲರಿಗೂ ಗೊತ್ತಿದೆ.

ನಾನು ಹೇಳಬೇಕೆಂದಿರುವುದು ಈ ಕತೆಯನ್ನಲ್ಲ. ಬಿಜೆಪಿಯ ಅಧ್ಯಕ್ಷ ಅಡ್ವಾಣಿಯವರ ಅವತ್ತಿನ ಭಾಷಣದ ಕುತೂಹಲಕಾರಿ ಅಂಶಗಳತ್ತ ನಿಮ್ಮ ಗಮನ ಸೆಳೆಯುವುದು ನನ್ನ ಉದ್ದೇಶ. ಬೆಂಗಳೂರಲ್ಲಿ ಈ ಬಗೆಯ ನುಡಿಕಟ್ಟು, ಈ ಬಗೆಯ ನಿರ್ಲಜ್ಜ ಧೋರಣೆ, ಈ ಬಗೆಯ ಏಕಪಕ್ಷೀಯ ಸಣ್ಣತನವನ್ನು ಯಾರೂ ಕಂಡಿರಲಿಲ್ಲ. ಇಲ್ಲಿ ತಲತಲಾಂತರದಿಂದ ಭಾಷಣ ಮಾಡಿದ ನಾಯಕರು ಎಚ್ಚರಿಕೆಯಿಂದ, ಜಾತಿಗಳ ಹೆಸರು ಹೇಳಲು ಮುಜುಗರ ಪಟ್ಟುಕೊಂಡು, ಕರ್ನಾಟಕದ ಜನತೆಯ ಮೂಲಭೂತ ಸನ್ನಡತೆಯನ್ನು ಗಮನದಲ್ಲಿಟ್ಟುಕೊಂಡು ಮಾತಾಡುತ್ತಿದ್ದರು. ಅಡ್ವಾಣಿ ತಮ್ಮನೆಯ ವಿನಯವನ್ನೆಲ್ಲ ಕಳೆದುಕೊಂಡಿದ್ದರು. ನೇರವಾಗಿ ಪ್ರಚೋದನೆಯ ಮಾತುಗಳನ್ನು ಆಡತೊಡಗಿದ್ದರು. ಆ ವೇಳೆಯ ಗುಂಗಿನಲ್ಲಿದ್ದ ಬಿಜೆಪಿ ಆರೆಸ್ಸೆಸ್‌ಗಳು ಚಪ್ಪಾಳೆ ತಟ್ಟುತ್ತಿದ್ದರು. ಅವರಿಗೆ ಕೂಡ ಆ ಮಾತು ಕೇಳಿ ನಾಚಿಕೆಯಾಗಿರಬೇಕು; ಅಲ್ಲಿ ಕುತೂಹಲಕ್ಕಾಗಿ ಸೇರಿದ ನಮ್ಮಂಥ ಅನೇಕ ಸಾವಿರ ಜನರಿಗೆ ಅಡ್ವಾಣಿ ಮಾತು ಕೇಳಿ 'ಶಾಕ್' ಆಗಿತ್ತು.


ಅಡ್ವಾಣಿ ಮತ್ತು ಅವರ ಅನುಯಾಯಿಗಳು ಯಾಕೆ ಹೀಗೆ ವರ್ತಿಸುತ್ತಿದ್ದಾರೆ, ಯಾಕೆ ಹೀಗೆ ಎಲ್ಲರಿಗೂ ಸಂಕೋಚವಾಗುವ ರೀತಿಯಲ್ಲಿ ಮಾತಾಡುತ್ತಿದ್ದಾರೆ? ಇದರಿಂದ ರಾಜಕೀಯವಾಗಿ ಅವರ ಪಕ್ಷ ಬೆಳೆಯುವುದೆಂದು ತಿಳಿದಿದ್ದಾರೆಯೇ? ಜನ ಗಾಂಧಿಯನ್ನಾಗಲಿ, ಗೋಡ್ಸೆಯನ್ನಾಗಲಿ, ಈ ದೇಶಕ್ಕೆ ರಾಜಕೀಯ ಶೈಲಿಯನ್ನು ಕಲಿಸಿದ ಸಹನೆಯ ಸಾಕಾರಮೂರ್ತಿ ನೆಹರೂ ಅವರನ್ನಾಗಲಿ ಮರೆತಿದ್ದಾರೆಂದು ಇವರೆಲ್ಲ ತಿಳಿದಿದ್ದಾರೆಯೇ? ಹೀಗೆ ವರ್ತಿಸಿ, ಮಾತಾಡಿ ಬೆಳೆಸಿದ ಪಕ್ಷ ನಾಲ್ಕು ದಿನ ಇಲ್ಲಿ ರಾಜ್ಯಭಾರ ಮಾಡೀತೆಂದು ಭ್ರಮಿಸಿದ್ದಾರೆಯೇ?

ರಾಜಕೀಯ ಕಡು ಕಷ್ಟದ, ನಿಜಕ್ಕೂ ತನುಮನಧನದ ತ್ಯಾಗದ, ಜನತೆಯಲ್ಲಿ ಪ್ರೀತಿ, ಉತ್ಸಾಹ, ಒಗ್ಗಟ್ಟು ಉಕ್ಕಿಸುವ ಕ್ರಿಯೆಯೆಂಬುದನ್ನು ಬಿಜೆಪಿಗಳಾಗಲಿ, ಆರೆಸ್ಸೆಸ್‌ನವರಾಗಲಿ, ಮರೆಯಬಾರದು. ಇಲ್ಲಿ ಒಳದಾರಿಗಳಾಗಲಿ, ತಕ್ಷಣ ಫಲ ಕೊಡುವ ಉಪಾಯಗಳಾಗಲಿ ಇಲ್ಲ. ■

ಕಲ್ಪಿತ ಚಹರೆಗಳಾಚೆ

■ಅರುಣ್ ಜೋಳದಕೂಡ್ಲಿಗಿ

ಅವರು ಮತ್ತೆ ಮತ್ತೆ ಹೇಳುತ್ತಾರೆ
ಇದು ನಿನ್ನದೆ ಗುರುತು!
ನಿಸರ್ಗವೂ ವಿಧಿಯಿಲ್ಲದೆ ಪ್ರತಿಧ್ವನಿಸುತ್ತಿದೆ
ಇದು ನಿನ್ನದೆ ಗುರುತು!
ನಿಸರ್ಗವೊಂದೆ ಸತ್ಯ ಎಂದುಕೊಂಡ
ನಾನೂ ನಂಬಿದ್ದೇನೆ ಇದು ನನ್ನದೆ ಗುರುತು!
ಅವರಿಗೆ ಮಾತ್ರ ಗೊತ್ತು
ಈ ಗುರುತುಗಳನ್ನೇ
ಬಂದೀಖಾನೆಗಳನ್ನಾಗಿಸುವುದು ಹೇಗೆಂದು!



ಸೂರ್ಯ ನನ್ನ ಮನೆ ದೇವರು
ಎಂದು ಬೀಗುತ್ತೇನೆ!
ಆತ ಒಂದು ದಿನ ತನ್ನ ಡ್ಯೂಟಿಗೆ
ರಜೆ ಹಾಕಿದರೂ.....
ನಾನೇ ನಿಂತು ಜಗವ ಬೆಳಗಬಲ್ಲೆ
ಎಂದು ಹಾತೊರೆಯುತ್ತೇನೆ!
ಇರುವೆ ಕಚ್ಚಿದಷ್ಟೂ ನೋವಾಗದೆ
ಸುಡುತ್ತಲೆ ಇರುವ ತಣ್ಣನೆ ಕ್ರೌರ್ಯ
ಈಗ ತಾನೆ ಫ್ರಿಜ್ಜಿನಿಂದ ಹೊರತೆಗೆದದ್ದು!


ನನಗೆ ಆತಂಕವಾಗುತ್ತಿದೆ
ಅವರ ಬಳಿ ಅದೆಷ್ಟೋ ಏಕಲವ್ಯರ
ನಿರ್ಜೀವ ಹೆಬ್ಬೆರಳುಗಳಿವೆ!
ಇಲ್ಲಿ ತ್ಯಾಗದ ವೈಭವವೆ ಏಕಲವ್ಯತನವ
ನಿರ್ವೀರ್ಯಗೊಳಿಸಿ ಸಂಭ್ರಮಿಸುತ್ತಿದೆ!
ಗೋವಿನ ಕರುಣೆಯ ಮುಖವಾಡದಿ
ಹುಲಿಯ ಗರ್ಜನೆಗೆ ಮೌನದ
ಪರದೆ ಎಳೆದಿದ್ದಾರೆ!
ತ್ರಿಶೂಲದಿಂದ ತೊಟ್ಟಿಕ್ಕಿದ್ದ ರಕ್ತದಲ್ಲಿ
ಅವರ ಪ್ರತಿಬಿಂಬ ಗಹಗಹಿಸುತಿವೆ!

ನಿಮಗೆ ಗೊತ್ತಿರಲಿ!
ನನ್ನ ಮೈತುಂಬಾ ಗುರುತುಗಳ
ಒರಿಜಿನಾಲಿಟಿಗಾಗಿ ಅವರು ಒತ್ತಿದ
ಐಎಸ್‌ಐ ಮುದ್ರೆಗಳಿವೆ!
ಬೆಳಕಿನ ಉಡುಗೊರೆಯಾಗಿ ನೀಡಿರುವ
ಬರ್ನ್ ಆದ ಬಲ್ಬುಗಳು
ಕೋಣೆಯ ಕತ್ತಲೆಯೊಂದಿಗೆ ರಾಜಿಯಾಗಿವೆ!

ಈಗತಾನೆ ಮಸುಕು ಮಸುಕಾಗಿ
ಗೋಚರಿಸುತ್ತಿದೆ!
ನಾನು ಬದುಕುತ್ತಿರುವ ಪುಟ್ಟಗೂಡು
ಅವರೆ ಎಸೆದ ಭ್ರಮೆಯ ಕಡ್ಡಿಗಳಿಂದಲೆ
ಹೆಣೆದದ್ದೆಂದು!
ಆದಿಕಾಲದಿಂಧಲೂ ನಡೆಯುತ್ತಲೇ
ಇರುವ ಈ ಜಾಡು
ಅವರ ಹೆಜ್ಜೆಗಳಿಂದಲೇ ಭಾರವಾದದ್ದೆಂದು!

ನೀವು ನನ್ನ ಜತೆ ಸೇರುವುದಾದರೆ ಬನ್ನಿ
ಹಳೆಯ ಜಾಡನ್ನು ಮಡಚಿಡಲು
ನೆರವಾಗಬಹುದು!
ಅವರೆ ತೊಡಿಸಿದ ಚಹರೆಯ ಪೊರೆ ಕಳಚಿ
ಬಯಲಾಗಬಹುದು!
ಗತಕಾಲದ ಗುರುತುಗಳ ಶಾಪಕ್ಕೆ
ನಿಶಾಚರದ ಅಂತ್ಯ ಬರೆಯಬಹುದು!
ಕಟ್ಟ ಕಡೆಯದಾಗಿ ಕಳೆದು ಹೋಗುತ್ತಿರುವ
ನಮ್ಮನ್ನು ನಾವಾದರೂ
ಹುಡುಕಿಕೊಳ್ಳಬಹುದು! ■

ಡಾ. ನಲ್ಲೂರ್‌ಗೆ ಅಭಿನಂದನೆಗಳು, ಆದರೆ....



ಡಾ. ನಲ್ಲೂರು ಪ್ರಸಾದ್ ಈಗ ಕನ್ನಡ ಸಾಹಿತ್ಯ ಪರಿಷತ್‌ನ ಹೊಸ ಅಧ್ಯಕ್ಷ. ಅವರನ್ನು ಅಭಿನಂದಿಸಲು ಇರುವ ಒಂದು ಕಾರಣವೆಂದರೆ ಬಹುತೇಕರು ಆತಂಕ ಪಟ್ಟದ್ದಂತೆ ಮೊನ್ನಿನ ಎಲೆಕ್ಷನ್‌ನಲ್ಲಿ ಬಹುಶಃ ಜಾತಿ ಭಾವನೆ ಕೆಲಸ ಮಾಡಿರಲಾರದು. ಹಾಗಾಗಿದ್ದರೆ ಲಿಂಗಾಯತ ಓಟುದಾರರೇ ಜಾಸ್ತಿ ಇದ್ದ ಕಸಾಪದಲ್ಲಿ ಒಕ್ಕಲಿಗ ನಲ್ಲೂರ್ ಆರೇಳು ಸಾವಿರ ಅಂತರದಿಂದ ಗೆಲ್ಲುವುದು ಕಷ್ಟವಿತ್ತೇನೋ. ಆದರೆ ಅಲ್ಲೂ ಎದ್ದೇಳುವ ಇನ್ನೊಂದು ಸಂಶಯ ಏನೆಂದರೆ ಕಸಾಪದೊಳಗೆ ಲಿಂಗಾಯತರ ಪ್ರಾಬಲ್ಯ ಮುರಿಯಬೇಕೆಂದು ಅಕಸ್ಮಾತ್ ಒಕ್ಕಲಿಗ-ಬ್ರಾಹ್ಮಣ ಲಾಬಿ ಒಂದಾಗಿ ನಲ್ಲೂರ್‌ರನ್ನು ಗೆಲ್ಲಿಸಿಕೊಂಡರಾ ಎಂಬುದು!

ಇದು ಸುಳ್ಳಾಗಿರಲಿ ಎಂದು ಆಶಿಸುತ್ತಲೇ ಈ ಚುನಾವಣೆ ಸಮಯದಲ್ಲಿ ನಡೆದ ಒಂದೆರಡು ಪ್ರಸಂಗದ ಬಗ್ಗೆ ಹೇಳಬೇಕು.

ಆಗಸ್ಟ್ 24 ರ ರಾತ್ರಿ ಹನ್ನೊಂದು ಗಂಟೆ ಸುಮಾರಿಗೆ 'ಲಂಕೇಶ್' ಪ್ರಿಂಟಿಗೆ ಹೋದನಂತರ ಒಂದು ಫೋನ್ ಕರೆ ಬಂತು.

"ನಲ್ಲೂರು ಆರು ಸಾವಿರ ಲೀಡ್‌ನಲ್ಲಿ ಗೆಲ್ತಾರೆ, ನಗರ ಜಿಲ್ಲೆಗೆ ರಾಮೇಗೌಡ್ರು ಗೆದ್ರು... ನಿಮಗೆ ತಿಳಿಸೋಣಾ ಅಂತ ಫೋನ್ ಮಾಡ್ದೆ" ಅಂದರು ಕನ್ನಡದ ಕಟ್ಟಾಳು ಕೋಡಿಹೊಸಳ್ಳಿ ರಾಮಣ್ಣ. ಅವರ ದನಿಯಲ್ಲಿ ಕೊಂಚ ಸಿಟ್ಟಿತ್ತು, ಕಸಾಪದಲ್ಲಿ ಜಾತಿ ಲಾಬಿ ಎಂದೆಲ್ಲಾ ನಾವು ಬರೆದ ಬಗ್ಗೆ ಅವರಿಗೆ ಬೇಸರವಾಗಿತ್ತೇನೊ.

ಅದರಲ್ಲಿ ಮೊದಲನೆಯದು ಖುಷಿಯ ವಿಚಾರವಾದರೆ ಇನ್ನೊಂದು ಬೇಖುಷಿ.

ಇರಲಿ,

ನಮ್ಮ ನಲ್ಲೂರ್ ಸ್ವಲ್ಪ ಭಾವುಕ ಅಂತಾ ಕಾಣುತ್ತೆ, ಯಾಕೆಂದರೆ ಅವರ ಮಾತು, ಪ್ರತಿಕ್ರಿಯೆ, ಚಿಂತನೆಗಳಲ್ಲೆಲ್ಲಾ ಕನ್ನಡವನ್ನು ಬರೀ ಭಾವುಕ ನೆಲೆಯಲ್ಲೇ ಗ್ರಹಿಸುತ್ತಿದ್ದಾರೆಂದೆನಿಸುತ್ತದೆ. ಇದರ ಜೊತೆ ಸ್ವಲ್ಪ impracticality ಯೂ ಸೇರಿಕೊಂಡರೆ ಯಾವ ಕೆಲಸವೂ ಬರ್ಕತ್ತಾಗುವುದಿಲ್ಲ.

ಬಹುಶಃ ನೀವೆಲ್ಲಾ ಗಮನಿಸಿರುತ್ತೀರಿ. ನಲ್ಲೂರ್‌ರ ಮೊದಲ ಅಭಿನಂದನಾ ಸಮಾರಂಭದಲ್ಲೇ ಅವರ ಪಕ್ಕ ಕನ್ನಡಕ್ಕೆ ಸಂಬಂಧಪಡದ ಒಬ್ಬ ಮಠಾಧೀಶರಿದ್ದರು.

ಆತ ಕೊಳದ ಮಠದ ಡಾ. ಶಾಂತವೀರಸ್ವಾಮಿಗಳು!

ನಲ್ಲೂರ್‌ಗೆ ನಿಜಕ್ಕೂ ಕನ್ನಡ ಕಟ್ಟುವ, ಬೆಳೆಸುವ ಕಾಳಜಿ ಇದ್ದರೆ ಅವರು ಈ ಅಭಿನಂದನೆ, ಮಠಾಧೀಶರಿಂದ ಮಾಲಾರ್ಪಣೆ ಇತ್ಯಾದಿಗಳನ್ನು ಇಲ್ಲಿಗೇ ನಿಲ್ಲಿಸಿ ಮುಂದಿನ ಮೂರು ವರ್ಷದಲ್ಲಿ ಏನೇನು ಮಾಡಬಹುದೆಂದು ಕಂಡುಕೊಳ್ಳಲು ಭಾಷಾತಜ್ಞರು, ವಿದ್ವಾಂಸರು, ಶಿಕ್ಷಣ ಪರಿಣಿತರು, ಬರಹಗಾರರು, ಪುಸ್ತಕ ಪ್ರಕಾಶಕರ ಜೊತೆ ಸಭೆ ನಡೆಸಬೇಕಲ್ಲವೆ?

ಕನಿಷ್ಠ ಏನಿಲ್ಲವೆಂದರೂ ಆಡಳಿತದಲ್ಲಿ ಕನ್ನಡ (ಕೋರ್ಟ್ ಸೇರಿದಂತೆ), ತಾಂತ್ರಿಕ, ವೈದ್ಯಕೀಯ ಪದ ಕೋಶ, ಪ್ರತಿ ಜಿಲ್ಲೆಗೊಂದಾದರೂ ಸುಸಜ್ಜಿತ ಪುಸ್ತಕದ ಅಂಗಡಿಗಳು ಇತ್ಯಾದಿಗಳ ಬಗ್ಗೆ ಯೋಚಿಸಬಹುದು.

ಜೊತೆಗೆ ಕೆಲವು ಅರೆ ಚೆಡ್ಡಿ ಕನ್ನಡ ಸಂಘಟನೆಗಳ ತಾಳಕ್ಕೆ ಕುಣಿಯದೆ ದೂರ ನಿಲ್ಲುವ ಬಗ್ಗೆಯೂ ತೀರ್ಮಾನಿಸಬೇಕಿದೆ.

ಕಸಾಪ ಅಂದರೆ ತಮಿಳರ, ಮುಸ್ಲಿಮರ ವಿರುದ್ಧ ಅಸಹನೆ ತೋರಿಸುವ ಇನ್ನೊಂದು ಸಂಸ್ಥೆಯಾಗದೆ, ರಕ್ಷಣಾ ವೇದಿಕೆ ಹಾಗೂ ಬೇರೆ ಅರೆ ಚೆಡ್ಡಿ ಸಂಘಟನೆಗಳ ಸೀಮಿತ ದೃಷ್ಟಿಕೋನದ ಚೌಕಟ್ಟಿನಲ್ಲಿ ಬಂಧಿಯಾಗದೆ ಬೆಳೆಯಬೇಕಿದೆ.

ಡಾ. ನಲ್ಲೂರು ಪ್ರಸಾದ್ ಅದನ್ನು ಸಾಧಿಸಲಿ.

ಅರುಣ ಕಿಡ್ನಾಪ್ ಆಗಿರಲಿಲ್ಲ... ಹಾಗಾದರೆ

ಬಹುಶಃ ಇದು ನಿಮಗೂ ನೆನಪಿರಬಹುದು.


2005 ರ ಮಾರ್ಚ್ ಕೊನೇ ದಿನಗಳಲ್ಲಿ ಶಿವಮೊಗ್ಗದಿಂದ ಒಂದು ಕಿಡ್ನ್ಯಾಪ್ ಕೇಸ್‌ನ ಸುದ್ದಿ ಹೊರಟಿತು. ಬೆಂಗಳೂರಿನ 14ರ ಬಾಲೆ ಅರುಣ ಎಂಬುವಳನ್ನು ಕೆಲವು ನಕ್ಸಲೈಟರು ಅಪಹರಿಸಿ ಶಿವಮೊಗ್ಗದಲ್ಲಿರಿಸಿದ್ದರೆಂತಲೂ, ಆ ಬಾಲಕಿ 15 ದಿನ ಅವರೊಂದಿಗೆ ಹೆಣಗಾಡಿ ಕೊನೆಗೆ ತಪ್ಪಿಸಿಕೊಂಡು ಕೋಟೆ ಪೊಲೀಸರ ಬಳಿ ಹೋದಳೆಂತಲೂ ಪ್ರಚಾರವಾದ ಸುದ್ದಿ ಅದು.

ಪೊಲೀಸರು ಆಮೇಲೆ ಚೂರೂ ತಡಮಾಡದೆ ಮಂಜುಳಾ, ಅನಿತಾ, ಶೋಭಾ, ಇಂದಿರಾ, ಹೊನ್ನಮ್ಮ, ಗೌರಿ ಹೀಗೆ ಕೆಲವರನ್ನು ಅರೆಸ್ಟು ಮಾಡಿ ಕಿಡ್ನ್ಯಾಪ್, ರಾಜದ್ರೋಹದ ಕೇಸುಗಳನ್ನು ಹಾಕಿಬಿಟ್ಟರು. ಇವರೆಲ್ಲಾ ಆಗ ಶಿವಮೊಗ್ಗಾದಲ್ಲಿ ಮಹಿಳಾ ಚಳವಳಿ ನಡೆಸುತ್ತಿದ್ದ ಮಹಿಳಾ ಜಾಗೃತಿಯ ಆಕ್ಟಿವಿಸ್ಟುಗಳು.

ಅಷ್ಟರಲ್ಲಾಗಲೇ ಈ ಗುಂಪು ಪೋಲಿ ಸಿನಿಮಾ ತೋರಿಸುವ ಟಾಕೀಸ್‌ಗಳಿಗೆ ನುಗ್ಗಿ ಪ್ರತಿಭಟಿಸಿತ್ತು. ತನ್ನ ವಿದ್ಯಾರ್ಥಿನಿಯರೊಂದಿಗೇ ಅಶ್ಲೀಲವಾಗಿ ನಡೆದುಕೊಳ್ಳುತ್ತಿದ್ದ ಕಾಲೇಜು ಪ್ರಿನ್ಸಿಪಾಲನಿಗೆ ಛೀಮಾರಿ ಹಾಕಿ ಎದಿರೇಟು ಕೊಟ್ಟಿತ್ತು. ವರದಕ್ಷಿಣೆಗೆ ಬಲಿಯಾದ ನತದೃಷ್ಟೆಯರ ಪರ ದನಿ ಎತ್ತುವ ದಿಟ್ಟತನ ಮತ್ತು ಮಾನವೀಯ ಕಾಳಜಿಯನ್ನು ತೋರಿಸಿತ್ತು.



ಪಾರ್ವತಿ ತನ್ನ ಅಣ್ಣ, ತಂದೆ ಮತ್ತು ತಾಯಿಯರೊಂದಿಗೆ



ಸಿಂಪಲ್ಲಾಗಿ ಹೇಳಬೇಕೆಂದರೆ ಶಿವಮೊಗ್ಗ ಪೊಲೀಸರ ದೃಷ್ಟಿಯಲ್ಲಿ ಇದೇ ಅಪರಾಧವಾಗಿತ್ತು. ಯಾವಾಗ ಅರುಣಾ ವಿಚಾರ ಅವರ ಕೈಗೆ ಸಿಕ್ಕಿತೋ ತಕ್ಷಣ ಎಲ್ಲರ ಮೇಲೂ ರಾಜದ್ರೋಹದ ಕೇಸ್ ಫಿಟ್ ಮಾಡಿಬಿಟ್ಟಿದ್ದರು.

ಈಗತಾನೆ ಅದೇ ಶಿವಮೊಗ್ಗದಿಂದ ಇನ್ನೊಂದು ಸುದ್ದಿ ಬಂದಿದೆ.

ಯಾವುದೇ ಸಾಕ್ಷ್ಯಾಧಾರಗಳಿರದಿದ್ದ ಈ ಸುಳ್ಳು ಕೇಸನ್ನು ಶಿವಮೊಗ್ಗದ fast track court ಡಿಸ್‌ಮಿಸ್ ಮಾಡಿ ಆರೋಪಿತರನ್ನು ನಿರ್ದೋಷಿಗಳೆಂದು ತೀರ್ಪು ನೀಡಿದೆ.

ಬಿಡಿ ಚಿತ್ರಗಳು

• ಈಶ

ವಾಸ್ತವವಾಗಿ ಈ ಅರುಣಾ ಪ್ರಕರಣದ ಹೂರಣ ಏನೆಂದರೆ

ಬೆಂಗಳೂರಿನ ಆಡುಗೋಡಿಯ ಈ ಹುಡುಗಿಯ ತಂದೆ ಒಬ್ಬ ಲಂಪಟನಾಗಿದ್ದ, ಅಮ್ಮ ಇದ್ದಳಾದರೂ ಅಮ್ಮನಂತಿರಲಿಲ್ಲ, ಇದೆಲ್ಲದರಿಂದ ದಿಕ್ಕೆಟ್ಟ ಹುಡುಗಿ ಮನೆ ಬಿಟ್ಟು ಯಾವುದೋ ರೈಲು ಹತ್ತಿದ್ದಳು. ಅದು ಅವಳನ್ನು ರಾತ್ರಿ ತಂದುಬಿಟ್ಟದ್ದು ಶಿವಮೊಗ್ಗಾಗೆ. ಸರಿರಾತ್ರಿ ಒಬ್ಬಂಟಿಯಾಗಿ ರೋಧಿಸುತ್ತಿದ್ದ ಆ ಹುಡುಗಿಯನ್ನು ಕಂಡು, ಇವಳ ಗತಿ ಏನೆಂದು ಕಳವಳಗೊಂಡ ಮಹಿಳಾ ಆಕ್ಟಿವಿಸ್ಟ್ ಒಬ್ಬರು ಸೀದಾ ತಮ್ಮ ಮನೆಗೆ ಕರೆದುಕೊಂಡು ಹೋಗಿದ್ದರು.

ಒಬ್ಬ ಪುಟ್ಟ ಹುಡುಗಿಯನ್ನು ರಕ್ಷಿಸಿದ್ದು ಕಿಡ್ನಾಪ್ ಆಗಿಯೂ, ಮಾನವೀಯತೆ ತೋರಿಸಿದ್ದೇ ರಾಜದ್ರೋಹವಾಗಿಯೂ ಪೊಲೀಸರಿಗೆ ಕಾಣಿಸಿ ಈಗ ನ್ಯಾಯದೇವತೆಯ ಎದುರು ಸೋತು ನಿಂತಿದ್ದಾರೆ. ಆದರೆ ಇವತ್ತಿನವರೆಗೂ ಕಿರುಕುಳ ಅನುಭವಿಸಿದವರ ಪಾಡು?

ಈ ಸಂದರ್ಭದಲ್ಲೇ ನನಗೆ ಪಾರ್ವತಿಯ ಮುಖ ನೆನಪಾಗುತ್ತಿದೆ.

ಶಿವಮೊಗ್ಗದಲ್ಲಿ ಇಂಥದ್ದೇ ಚಟುವಟಿಕೆಯಲ್ಲಿ ಓಡಾಡಿಕೊಂಡಿದ್ದ ಪಾರ್ವತಿಗೆ ಕೋರ್ಟು, ವಿಚಾರಣೆ ಅಂತ ಯಾವ ಅವಕಾಶವನ್ನೂ ಕೊಡದಂತೆ ಕೊಂದು ಕೆಡವಲಾಗಿತ್ತು.

ಈದು ಎನ್‌ಕೌಂಟರ್ ಹತ್ಯೆಗಳು ಜರುಗಿ ಇನ್ನೇನು ಐದು ವರ್ಷ ಆಗಲಿವೆ. ಪಾರ್ವತಿ ನಮ್ಮಲ್ಲಿ ಬಹುತೇಕರಿಗೆ ಪರಿಚಯವಿದ್ದ ಹುಡುಗಿ. 1995 ರ ಸುಮಾರಿಗೆ ತುಂಗಾ ಮೂಲ ಉಳಿಸಿ ಚಳವಳಿ ಬಿರುಸಾಗಿದ್ದಾಗ ನಾವೊಂದಿಪ್ಪತ್ತು ಜನ ಶೃಂಗೇರಿಯಿಂದ ಹರಿಹರದ ತನಕ 200 ಕಿಲೋಮೀಟರ್‌ಗಳ ಸೈಕಲ್ ಜಾಥಾ ಹೊರಟಿದ್ದೆವು. 16 ಯುವಕರ ಆ ತಂಡದಲ್ಲಿದ್ದ ಒಬ್ಬಳೇ ಹುಡುಗಿಯೂ ಈ ಪಾರ್ವತಿಯೆ.

ಇವೆಲ್ಲಾ ಮುಗಿದನಂತರ ಕೊನೆಗೆ ಪಾರ್ವತಿಯ ಸುದ್ದಿ ಕೇಳಿದ್ದೇ ಈದು ಎನ್‌ಕೌಂಟರ್‌ನಲ್ಲಿ. ಆಗ ನಾವೊಂದಿಷ್ಟು ಜನ fact finding ಗೆಂದು ಅಲ್ಲಿಗೆ ಹೋದಾಗ ಪೊಲೀಸ್ ಫೈರಿಂಗ್‌ನಲ್ಲಿ ಛಿದ್ರವಾಗಿದ್ದ ಮನೆ, ಮನೆಯಂಗಳದಲ್ಲಿ ಹರಿದು ಕಲೆಗಟ್ಟಿದ್ದ ಪಾರ್ವತಿ-ಹಾಜೀಮಾರ ದೇಹದಿಂದ ಹರಿದಿದ್ದ ರಕ್ತ ಇನ್ನೂ ಮಾಸಿರಲಿಲ್ಲ.

ಆ ಮನೆ ರಾಮಯ್ಯ ಪೂಜಾರಿಯದು.

ಮಲೆನಾಡಿನ ಸರ್ವೆ ಸಾಧಾರಣ ಬಡ ರೈತರ ಮನೆ ಅದು. 'ಪಾರ್ವತಿ ನಿಮಗೆ ಹೇಗೆ ಗೊತ್ತು, ಇಲ್ಲೇನು ನಡೆಯಿತು?' ಅಂತ ಕೇಳಿದಾಗ ಯಾರೂ ಮಾತಾಡಲಿಲ್ಲ. ಪೂಜಾರಿ, ಆತನ ಹೆಂಡತಿ, ಇಬ್ಬರು ಹೆಣ್ಣುಮಕ್ಕಳು ಬರಿದೇ ಅತ್ತರಷ್ಟೆ.

ನಿಮಗೆ ಗೊತ್ತಿರಲಿ,

ಏನೇ ಆಗಲಿ ನ್ಯಾಯವನ್ನು ಸಾಧಿಸುತ್ತೇನೆ ಅಂದುಕೊಳ್ಳುವುದು ಸುಲಭ. ಆದರೆ ಅದಕ್ಕಾಗಿ ತೀರಾ ಪ್ರಾಣವನ್ನೇ ಪಣಕ್ಕಿಡಬೇಕೆಂದರೆ ಅಷ್ಟು ಸುಲಭವಲ್ಲ.

ಕೊಪ್ಪದ ಹಿರೇಕೊಡಗಿ ಹತ್ತಿರದ ಬಡವರ ಮನೆಯ ಹುಡುಗಿ ಪಾರ್ವತಿಗೆ ಅಂತ ಗಟ್ಟಿ ನಿರ್ಧಾರ ಹೇಗೆ ಬಂತೊ ಏನೊ?

ಅದೆಲ್ಲಾ ಈಗ ನೆನಪಷ್ಟೇ ಅಂದುಕೊಳ್ಳುತ್ತಿರುವಾಗಲೇ ಕಳೆದ ವರ್ಷ ಹಿರೇಕೊಡಗಿಯ ಪಾರ್ವತಿಯ ಮನೆಗೇ ಹೋಗಬೇಕಾಗಿ ಬಂತು. 2007 ಏಪ್ರಿಲ್ ಆರರಂದು ಪೂರ್ಣಚಂದ್ರ ತೇಜಸ್ವಿಗೆ ವಿದಾಯ ಹೇಳಲು ಹಿರೇಕೊಡಗಿಗೆ ಹೋದಾಗ ಅದೇ ದಾರಿಯಲ್ಲಿ ಪಾರ್ವತಿಯ ಮನೆ ಕಾಣಿಸಿತು. ಐದು ನಿಮಿಷ ಕಾದಿರುವಂತೆ ನಮ್ಮ ಬಳಗದವರಿಗೆ ಹೇಳಿ ನಾನು, ವೆಂಕಟೇಶ್ ಮತ್ತು ಇನ್ನಿಬ್ಬರು ಕಾರಿಳಿದು ಮನೆ ಹೊಕ್ಕೆವು.

ಆ ಮನೆ ಹಾಳು ಸುರಿಯುತ್ತಿತ್ತು.

ಹೆಂಚುಗಳು ಹಾರಿಹೋಗಿದ್ದವು, ಕಿಟಕಿ ಬಾಗಿಲನ್ನು ಯಾರೋ ಕಳ್ಳರು ಮುರಿದು ಒಳಹೊಕ್ಕಿದ್ದರು. ಬಿಟ್ಟೂಬಿಡದೆ ಸುರಿಯುವ ಮಲೆನಾಡಿನ ಮಳೆಯಿಂದ ಇಡೀ ಮನೆ ಕೆಸರಾಗಿತ್ತು. ಟ್ರಂಕು, ಪಾತ್ರೆ, ಬಟ್ಟೆಗಳನ್ನೆಲ್ಲಾ ಚೆಲ್ಲಾಡಿದ್ದ ಕಳ್ಳರಿಗೆ ಆ ಬಡವರ ಮನೇಲಿ ಅದೇನು ಸಿಕ್ಕಿತ್ತೊ ಗೊತ್ತಾಗಲಿಲ್ಲ. ಪಾರ್ವತಿಯ ತಂದೆ-ತಾಯಿ, ಅಣ್ಣ ಮನೆ, ಊರು ಬಿಟ್ಟು ಎಲ್ಲಿಗೆ ಹೋದರೆಂಬುದು ಪತ್ತೆಯಾಗಲಿಲ್ಲ.

ಅವಳ ಹತ್ಯೆ ಆ ಬಡ ಕುಟುಂಬವನ್ನು ಕಂಗೆಡಿಸಿದ್ದು ಅಲ್ಲೇ ಕಾಣುತ್ತಿತ್ತು. ಅಲ್ಲಿ ಕಂಡ ಒಂದು ಆಟೋಗ್ರಾಫ್ ಪುಸ್ತಕ, ಪುಟ್ಟ ಫೋಟೋ ಆಲ್ಬಂ ಅನ್ನು ಕೈಲಿಡಿದು ನಾವು ಹೊರಬಂದಾಗ ಡಜನ್‌ಗಟ್ಟಲೆ ಕಾರುಗಳಲ್ಲಿ ಜನ ತೇಜಸ್ವಿಯನ್ನು ದಹಿಸಿ ವಾಪಸ್ ಹೋಗುತ್ತಿದ್ದರು. ಅವರಲ್ಲಿ ಬಹುತೇಕರಿಗೆ ಪಾರ್ವತಿಯ ಬಗ್ಗೆ ಗೊತ್ತಿತ್ತಾ? ಅವಳ ಮನೆ ಇದೇ ಅಂತ ಅರಿವಿತ್ತಾ? ನನಗೆ ಗೊತ್ತಿಲ್ಲ.

ಎಲ್ಲೋ ಹೇಗೋ ಹತ್ತಿಕೊಂಡ ಒಂದು ವೈಚಾರಿಕತೆಯ, ವ್ಯವಸ್ಥೆಯನ್ನು ಶೋಧಿಸುವ ಕಿಡಿ ತೇಜಸ್ವಿಯವರನ್ನು ಕೀರ್ತಿವಂತ ಬರಹಗಾರರನಾಗಿಯೂ, ಪಾರ್ವತಿಯನ್ನು ಬಲಿಪಶುವಾಗಿಯೂ ಕೊನೆಗೊಳಿಸಿತ್ತು.

ಅರುಣಾ ಕಿಡ್ನ್ಯಾಪ್, ರಾಜದ್ರೋಹದ ಕೇಸ್‌ನ ತೀರ್ಪು ಈಗ ಹೊರಬಂದಿದೆ. ಶಂಕಿತ ಆರೋಪಿಗಳು ಈಗ ನಿರ್ದೋಷಿಗಳೆಂದು ತೀರ್ಮಾನವಾಗಿದೆ.

ಅಂಥದ್ದೇ ಒಂದು ಅವಕಾಶ ಪಾರ್ವತಿಗೂ ಸಿಕ್ಕಿದ್ದಿದ್ದರೆ...?

ತೆ ಹೊಗಳಿಕೆ ಚಿ ಕೆ

ಸಗಣಿ ಸ್ವಾಮಿಯ ಡೀಲಿಂಗ್

ಢೋಂಗಿ ಗೋ ಪ್ರೇಮ ಹಾಗೂ ಸಗಣಿ ಗಂಜಲಗಳ ಹೆಸರಲ್ಲಿ ಜನರ ತಲೆಕೆಡಿಸಿ ಜನರ ಮತ್ತು ಸರ್ಕಾರದ ಕೋಟಿಗಟ್ಟಲೆ ಹಣವನ್ನ ಲಪಟಾಯಿಸಿಕೊಂಡು ಕೊಬ್ಬಿರುವ ರಾಘವೇಶ್ವರ ಅಲಿಯಾಸ್ ಹರೀಶ್ ಶರ್ಮನ ಗೋಕರ್ಣ "ಕನ್ನ" ದ ಬಗ್ಗೆ ಪತ್ರಿಕೆಯಲ್ಲಿ 'ದಕಾಯಿತ ಸ್ವಾಮಿ-ಮೆಂಟಲ್ ಯಡ್ಡಿ' ಲೇಖನ ಬಹಳ ಚೆನ್ನಾಗಿ ಬಂದಿದೆ.

ಯಾವುದೋ ಭೂಗತಲೋಕದ ಸಂಚಿನ ರೀತಿಯಲ್ಲಿ ಖುತ್ ಆದ ಪ್ಲಾನ್ ಹೆಣೆದು, ದಾಳಿ ನಡೆಸಿ, ಗೋಕರ್ಣವನ್ನು ವಶಪಡಿಸಿಕೊಳ್ಳಲಾಗಿದೆ. ತನ್ನ ದಾಸಾನುದಾಸ ಯಡ್ಡಿಯ ಮೂಲಕ ಲಾಬಿ ನಡೆಸಿ ಸರ್ಕಾರದ ಪೊಲೀಸ್ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಂಡು ಜನರು ಭಕ್ತಿ ನಂಬಿಕೆಯಿಂದ ಸಲ್ಲಿಸಿದ್ದ ಕೋಟ್ಯಂತರ ರೂ. ಹಾಗೂ ಚಿನ್ನಾಭರಣಗಳನ್ನೆಲ್ಲ ರಾಜಾರೋಷವಾಗಿ ದೋಚಲಾಗಿದೆ.

ಸೌಲಭ್ಯಗಳು-ವಿಶೇಷ ಆಕರ್ಷಣೆಗಳ ಸೆಳೆತಗಳ್ಯಾವುದೂ ಇಲ್ಲದಿದ್ದರೂ ಐತಿಹಾಸಿಕ ಹಾಗೂ ಪೌರಾಣಿಕವಾಗಿ ತನ್ನದೇ ಆದ ಮಹತ್ವ ಪಡೆದ ಗೋಕರ್ಣ ಅನಾದಿಕಾಲದಿಂದಲೂ ಹಿಂದೂ ಭಕ್ತಾದಿಗಳನ್ನು ಸೆಳೆಯುವಂತಹ ಭಾರತದ ಪವಿತ್ರ ಪುಣ್ಯಕ್ಷೇತ್ರಗಳಲ್ಲೊಂದು. ಇದು ಯಾವುದೋ ಬ್ರಾಹ್ಮಣ ಜಾತಿಯ ಅಥವಾ ಮಠದ ಅಥವಾ ಗುಂಪಿಗಷ್ಟೇ ಸೇರಿದಂತಹ ಕ್ಷೇತ್ರವಲ್ಲ. ನಿಜ ಹೇಳಬೇಕೆಂದರೆ ಎಲ್ಲಾ ಕಡೆ ಆಗುವಂತೆ ಇಲ್ಲಿ ಹರಿದುಬರುತ್ತಿರುವ ಸಾರ್ವಜನಿಕರ ಹಣದಲ್ಲಿ 90% ಬ್ರಾಹ್ಮಣೇತರರದ್ದೇ ಇರುವುದನ್ನು ಗಮನಿಸಬೇಕು. (ನಾನೇ ಇಲ್ಲಿ ಗಮನಿಸಿದಂತೆ ದೇಗುಲ ಜೀರ್ಣೋದ್ಧಾರದ ವಿಷಯದಲ್ಲಾಗಲೀ, ಸಾರ್ವಜನಿಕ ಗಣೇಶೋತ್ಸವ, ಸತ್ಯನಾರಾಯಣ ಪೂಜೆಯಂತಹ ಧಾರ್ಮಿಕ ಕಾರ್ಯಕ್ರಮಗಳಿಗಾಗಲೀ ದಾನ ಮಾಡಿದವರ ಹೆಸರಿನ ಪಟ್ಟಿಯನ್ನ ಗಮನಿಸಿದರೆ ಅಲ್ಲಿ ಶೆಟ್ಟಿ, ಪೂಜಾರಿ, ಗೌಡ ಇತ್ಯಾದಿಗಳೇ ತುಂಬಿರುತ್ತಾರೆಯೇ ವಿನಃ ಭೂಸುರರ ಹೆಸರನ್ನು ಹುಡುಕಲು ಭೂತಕನ್ನಡಿ ಬೇಕು) ಅಭಿವೃದ್ಧಿಯ ಹೆಸರಲ್ಲೇ ಈ ಬ್ರಾಹ್ಮಣ ಮಠಕ್ಕೆ ಸಾರ್ವಜನಿಕ ಆಸ್ತಿಯನ್ನ ವಹಿಸಿಕೊಡಲಾಗಿದೆ ಎಂದುಕೊಂಡರೂ ಕೂಡ ಹಾಸ್ಯಾಸ್ಪದವಾಗಿ ತೋರುತ್ತದೆ. ಯಾಕೆಂದರೆ ನಿಜವಾದ ಅಭಿವೃದ್ಧಿಯ ಕಾಳಜಿ ರಾಘವನಿಗೆ ಇದ್ದಿದ್ದರೆ ಅಭಿವೃದ್ಧಿ ಕಾಣಬೇಕಿರುವ ಜೀರ್ಣೋದ್ಧಾರಕ್ಕೆ ಕಾಯುತ್ತಿರುವ ಬಹಳಷ್ಟು ದೇಗುಲಗಳು ಸುತ್ತಮುತ್ತಲೇ ಇರುವುದು ಆತನಿಗೆ ಗೊತ್ತಿಲ್ಲವೇ?

ಜೊತೆಗೆ ಈತನ 'ಅಭಿವೃದ್ಧಿ'ಯ ಹಿನ್ನೆಲೆಯನ್ನ ಗಮನಿಸಿದಾಗ ಅದು ಸ್ವಾರ್ಥದ 'ಅಭಿವೃದ್ಧಿ'ಯೇ ಆಗಿರುತ್ತದೆ ಎಂಬುದು ಗೊತ್ತಾಗುತ್ತದೆ. ಆತ ಈತನಕ ನಡೆಸಿದ ದಗಲ್ಬಾಜಿ ಕಾರ್ಯಕ್ರಮಗಳಿಂದ ದೋಚಿದ ಸರ್ಕಾರಿ ಹಣ, ಭೂಮಿ ಮುಂತಾದವು ಈಗಾಗಲೇ ಜಗಜ್ಜಾಹೀರಾಗಿದೆ.


ಅಲ್ಲದೇ ಈತನಕ ಮುಜರಾಯಿ ಇಲಾಖೆಯ ಸುಪರ್ದಿಯಲ್ಲಿದ್ದು ಇದೀಗ ಈತನ ಕೈಗೆ ಕೊಟ್ಟಿರುವುದರಿಂದ ಅಭಿವೃದ್ಧಿ ಆಗುವುದೇ ಹೌದಾದರೆ ಗೋಕರ್ಣದಲ್ಲೇ ಆ ದೇಗುಲಕ್ಕೆ ನೇರವಾಗಿ ಸಂಬಂಧಿಸಿಕೊಂಡ ಸಾಕಷ್ಟು (ರಾಘವನಂತೆ ಗೋಲ್‌ಮಾಲ್ ಹಿನ್ನೆಲೆ ಇರದ) ಬ್ರಾಹ್ಮಣರೇ ಇದ್ದರಲ್ಲ? ತಮಾಷೆಯೆಂದರೆ ಇದೇ ಬ್ರಾಹ್ಮಣರ ಹಿಡಿತದಿಂದ ಇಲ್ಲಿಗೆ ಬರುವ ಭಕ್ತರ ಪೀಡನೆಯಿಂದ ಗೋಕರ್ಣ ಕುಖ್ಯಾತವಾಗಿತ್ತು. (ಇದೀಗ ಅದಕ್ಕೆ ಪರವಾನಗಿ ಸಿಕ್ಕಿದಂತಾಗಿದೆ). ಹಾಗೂ ಪಕ್ಕದ ಪ್ರಸಿದ್ಧ ಇಡುಗುಂಜಿಯ ದೇಗುಲದಲ್ಲಿ ಸಭಾಹಿತನ ಬಳಗ ಸ್ತ್ರೀಲೋಲುಪತೆಯಲ್ಲಿ ಹೆಸರುವಾಸಿಯಾಗಿತ್ತು. ಇದೆಲ್ಲ ಧಾರ್ಮಿಕ ಪುಣ್ಯಕ್ಷೇತ್ರಕ್ಕೆ ಬ್ರಾಹ್ಮಣರು ಕೊಡುತ್ತಿದ್ದ ಕೊಡುಗೆಯಾದರೆ ಇನ್ನೊಂದು ಪಕ್ಕದಲ್ಲಿದ್ದ ಯಾರಿಗೂ ಹೆಸರೇ ತಿಳಿಯದಿದ್ದ ಮುರ್ಡೇಶ್ವರ ದೇಗುಲವನ್ನು ಜೀರ್ಣೋದ್ಧಾರಗೊಳಿಸಿ ಖ್ಯಾತಿಗೊಳಿಸಿದಾತ ಮಾತ್ರ ಒಬ್ಬ ಅಬ್ರಾಹ್ಮಣ.

ಒಟ್ಟಾರೆ ದಗಲ್ಬಾಜಿತನದ ಹಿನ್ನೆಲೆಯ ವ್ಯಕ್ತಿಯೊಬ್ಬನ ಕೈಗೆ ಸಾರ್ವಜನಿಕರ ದೇಗುಲವನ್ನ ಕೊಟ್ಟಿದ್ದುದು ಬ್ರಾಹ್ಮಣ ವರ್ಗದಲ್ಲೇ ಅಸಮಾಧಾನಕ್ಕೆ ಕಾರಣವಾಗಿದೆ. ವಿಶೇಷವೆಂದರೆ, ಈ ಗೋಕರ್ಣ ಡೀಲ್‌ನ ವ್ಯವಸ್ಥಿತ ಸಂಚಿನಲ್ಲಿ ಮಾಧ್ಯಮಗಳೂ ಕೂಡಾ ಪುರೋಹಿತಶಾಹಿತ್ವದ ಪರ ವಾಲಿಕೊಂಡಿದ್ದುದು ಗಮನಾರ್ಹ.

ಈ ಪ್ರಕರಣವನ್ನು ಯಾವುದೋ ಸಣ್ಣ ವಿಶೇಷವಲ್ಲದ ಸಂಗತಿಯ ರೀತಿಯಲ್ಲಿ ಒಳಪುಟಗಳಲ್ಲಿ ಸಣ್ಣದಾಗಿ ಪ್ರಕಟಿಸಿದ್ದು ಅಥವಾ ಸುಳ್ಳು ಸುಳ್ಳೇ ಕಾರಣಗಳನ್ನು ನೀಡಿ ರಾಘವೇಶ್ವರನ ಪರ ವಕಾಲತ್ತು ನಡೆಸಿದಂತಹ ವರದಿಗಳನ್ನೆಲ್ಲ ನೋಡಿದಾಗ ಇದೊಂದು ದೊಡ್ಡ ಸಂಚೇ ಎಂಬುದು ಯಾರಿಗಾದರೂ ಗೊತ್ತಾಗದೇ ಇರದು.

-ಶಶಿ ಪುತ್ತೂರು. ದ.ಕ.

ತಾಜ್‌ಮಹಲ್‌ನಲ್ಲಿ ಚಂದ್ರುಗೆ ದಕ್ಕಿದ್ದೆಷ್ಟು?



ತಾಜ್‌ಮಹಲ್ ಚಿತ್ರ ರಾಜ್ಯಾದ್ಯಂತ ಬಿಡುಗಡೆಗೊಂಡು ಯಶಸ್ವಿ ಪ್ರದರ್ಶನವನ್ನು ಕಾಣುತ್ತಿರುವುದು ಎಲ್ಲರಿಗೂ ತಿಳಿದಿದ್ದೇ ಆಗಿದೆ. ಆದರೆ ಈ ಹಿಟ್ ಚಿತ್ರ ನೀಡಿದ ನಿರ್ದೇಶಕ ಚಂದ್ರುಗೆ ದೊರಕಿರುವ ಸಂಭಾವನೆ ಎಷ್ಟು ಗೊತ್ತೆ? ಬರೀ ಹದಿನೈದು ಸಾವಿರ! ಈ ಮೊತ್ತ ಇದೇ ಚಿತ್ರಕ್ಕೆ ಕ್ಲಾಪ್ ಮಾಡಿದ ಹುಡುಗ ಪಡೆದ ಸಂಭಾವನೆಗಿಂತಲೂ ಕಮ್ಮಿ!!

ಚಿತ್ರ ಪ್ರಾರಂಭವಾದಾಗ 'ಖರ್ಚಿಗೆ ಇಟ್ಟುಕೊಳ್ಳಿ' ಎಂದು ಹದಿನೈದು ಸಾವಿರ ಕೊಟ್ಟಿದ್ದ ನಿರ್ಮಾಪಕ ಶಿವಶಂಕರ ರೆಡ್ಡಿ ಆಮೇಲೆ ಚಿತ್ರ ಬಿಡುಗಡೆಗೊಂಡು ಹಿಟ್ ಆದರೂ ಇದುವರೆಗೆ ಚಂದ್ರು ಸಂಭಾವನೆಯ ಬಗ್ಗೆ ತುಟಿಪಿಟಿಕ್ ಎಂದಿಲ್ಲ.

"ನಿರ್ಮಾಪಕರು ಹಣ ಕೊಡಲಿ, ಬಿಡಲಿ. ಅವರು ನನಗೆ ಮೊದಲ ಬಾರಿ ನಿರ್ದೇಶನ ಮಾಡುವ ಅವಕಾಶ ನೀಡಿದ್ದಾರೆ" ಎಂಬ ಕೃತಜ್ಞತೆ ತೋರಿಸಿರುವ ಚಂದ್ರುವನ್ನು ಈಗ ನಿರ್ಮಾಪಕ ಕನಕಪುರ ಶ್ರೀನಿವಾಸ್ ಕರೆದು ತಮಗೊಂದು ಚಿತ್ರ ಮಾಡಿಕೊಡುವಂತೆ ಹೇಳಿ ಒಂದು ಲಕ್ಷದ ಅಡ್ವಾನ್ಸ್ ಹಣವನ್ನು ಕೈಗಿಟ್ಟಿದ್ದಾರೆ. ಹಾಗೆಯೇ ರಾಕ್‌ಲೈನ್ ವೆಂಕಟೇಶ್, ಕೊಬ್ರಿಮಂಜು ಸಹಾ ಚಂದ್ರುವನ್ನು ಕರೆದು "ನೀನು ಯಾವಾಗ ಬಂದರೂ ನಿನಗಾಗಿ ನಾವು ಸಿನಿಮಾ ಮಾಡಲು ಸಿದ್ಧ" ಎಂದಿದ್ದಾರೆ.

ಅಂದಹಾಗೆ, ಚಂದ್ರು ತನ್ನ ಮುಂದಿನ ಚಿತ್ರಕ್ಕೆ ಕೇಳುತ್ತಿರುವ ಸಂಭಾವನೆ ಬರೀ ಒಂದು ಕೋಟಿ!!


ಕಳಚಿಕೊಂಡ 'ಕುಚೇಲ'!



ನಟ ಕಂ ನಿರ್ದೇಶಕ ರಮೇಶ್ ತಮ್ಮ ಮನಸ್ಸನ್ನು ಬದಲಾಯಿಸಿದ್ದಾರೆ. ಕೆಲ ದಿನಗಳ ಹಿಂದೆ ರಜನೀಕಾಂತ್ ಅಭಿನಯದ 'ಕುಚೇಲನ್' ಚಿತ್ರವನ್ನು ಕನ್ನಡಕ್ಕೆ ರೀಮೇಕ್ ಮಾಡುತ್ತೇನೆಂದು ಘೋಷಿಸಿದ್ದ ರಮೇಶ್ ಈಗ ಆ ಯೋಜನೆಯನ್ನು ಕೈ ಬಿಟ್ಟಿದ್ದಾರೆ.


ಇದಕ್ಕೆ ಒಂದು ಕಾರಣ 'ಕುಚೇಲನ್' ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಿರುವುದು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಅನೇಕರಿಗೆ ಗೊತ್ತಿಲ್ಲದಿರುವ ಇನ್ನೊಂದು ವಿಚಾರ ಯಾವುದೆಂದರೆ ರಜನೀಕಾಂತ್ ಮಾಡಿದ್ದ ಪಾತ್ರವನ್ನು ಗೋಲ್ಡನ್ ಸ್ಟಾರ್ ಗಣೇಶ್ ಮಾಡಬೇಕಿದ್ದದ್ದು. ಸದ್ಯಕ್ಕೆ ಗಣೇಶನ ಸ್ಟಾರ್‌ವ್ಯಾಲ್ಯೂ ಸಿನಿಮಾದಿಂದ ಸಿನಿಮಾಕ್ಕೆ ಅಲುಗಾಡಲಾರಂಭಿಸಿದೆ. ಅತ್ತ 'ಕುಚೇಲನ್' ಫ್ಲಾಪ್ ಆಗಿದೆ, ಇತ್ತ ಗಣೇಶ್ ಕೂಡ 'ಮಿನಿಮಂ ಗ್ಯಾರಂಟಿ' ಎಂದು ಹೇಳಲಾಗುತ್ತಿಲ್ಲ. ಅದಕ್ಕೇ ರಮೇಶ್ ಈ ಪ್ರಾಜೆಕ್ಟನ್ನೇ ಕೈ ಬಿಟ್ಟಿದ್ದಾರೆ ಎಂದು ಗಾಂಧಿನಗರದ ಚಿತ್ರಬ್ರಹ್ಮರು ತರ್ಕಿಸುತ್ತಿದ್ದಾರೆ.

ರಮೇಶ್ ಈಗ ಹಾಸ್ಯ ಚಿತ್ರವೊಂದನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದ್ದಾರೆ. ಆ ಚಿತ್ರ 'ರಾಮ-ಶಾಮ-ಭಾಮಾ' ಮಾದರಿಯಲ್ಲೇ ಇರುತ್ತದೆಂಬ ಸೂಚನೆಯನ್ನೂ ನೀಡಿದ್ದಾರೆ. ಹಾಸ್ಯದ ಹ್ಯಾಂಗೋವರ್‌ನಿಂದ ಹೊರಬಂದು 'ಆಕ್ಸಿಡೆಂಟ್' ಎಂಬ ಸಸ್ಪೆನ್ಸ್ ಚಿತ್ರ ತೆಗೆದು ಹೈರಾಣಾಗಿದ್ದ ರಮೇಶ್ ಮತ್ತೆ ಹಾಸ್ಯಕ್ಕೆ ಜೋತು ಬಿದ್ದಿರುವುದು ತಮಾಷೆಯಾಗಿ ಕಾಣಿಸುತ್ತಿದೆ.



ಇತ್ತೀಚೆಗೆ ಕೆ.ಸಿ.ಎನ್. ಚಂದ್ರಶೇಖರ್ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಒಂದು ಹೊಸ ಸಂಪ್ರದಾಯವನ್ನು ಪ್ರಾರಂಭಿಸಿದ್ದಾರೆ. ಅದೇನೆಂದರೆ ಯಾವುದೇ ನಿರ್ಮಾಪಕ ಚಿತ್ರವೊಂದನ್ನು ಆರಂಭಿಸುತ್ತಿದ್ದರೆ ಅದಕ್ಕೆ ನಿರ್ಮಾಪಕರ ಸಂಘದ ಪರವಾಗಿ ಅಧ್ಯಕ್ಷರು ಅಥವಾ ಯಾರಾದರೂ ಒಬ್ಬರು ಪದಾಧಿಕಾರಿಗಳು ಹೂಗುಚ್ಛ ಕೊಟ್ಟು ಶುಭಕೋರುವ ಪದ್ಧತಿ. ಆ ಚಿತ್ರದ ನಿರ್ಮಾಪಕರು ಆಹ್ವಾನ ಪತ್ರಿಕೆ ನೀಡದಿದ್ದರೂ ಸಂಘದ ಪರವಾಗಿ ಹೂಗುಚ್ಛವೊಂದು ಗ್ಯಾರಂಟಿ ತಲುಪುತ್ತದೆ! "ಇದು ಉದ್ಯಮದಲ್ಲಿ ಸೌಹಾರ್ದವಾದ ಮತ್ತು ಪ್ರೀತಿಯ ವಾತಾವರಣಕ್ಕೆ ಮುನ್ನುಡಿ ಬರೆಯಬಹುದು" ಎಂಬ ಆಶಯವನ್ನು ಚಂದ್ರು ವ್ಯಕ್ತಪಡಿಸುತ್ತಾರೆ. ಇಂತಹ ನಿರ್ಧಾರವನ್ನು ಕೈಗೊಂಡ ಚಂದ್ರುವಿಗೆ ಭೇಷ್ ಹೇಳೋಣ.

ಗಣೇಶ್‌ಗೆ ಯಶಸ್ಸಿನ 'ಸಂಗಮ'?



ಮೊನ್ನೆ 'ಸಂಗಮ' ಚಿತ್ರದ ಸಂಗೀತ ನಿರ್ದೇಶಕ ತೆಲುಗಿನ ದೇವಿಶ್ರೀಪ್ರಸಾದ್ ಅವರನ್ನು ಆ ಚಿತ್ರದ ತಂಡ ಹಾಡಿ, ಹೊಗಳಿ ಕೊಂಡಾಡಿತು. ಇದನ್ನೆಲ್ಲಾ ನೋಡಿದಾಗ ನಾಲ್ಕು ವರ್ಷದ ಹಿಂದೆ 'ಎಕ್ಸ್‌ಕ್ಯೂಸ್ ಮಿ' ಚಿತ್ರದ ನಿರ್ದೇಶಕ ಪ್ರೇಮ್ ಮತ್ತು ನಿರ್ಮಾಪಕ ಎಂ.ಎನ್.ಸುರೇಶ್ ಆ ಚಿತ್ರದ ಸಂಗೀತ ನಿರ್ದೇಶಕ ಆರ್.ಪಿ. ಪಟ್ನಾಯಕ್‌ರನ್ನು ಹಾಡಿ ಹೊಗಳಿದ್ದು ನೆನಪಾಯಿತು.

'ಸಂಗಮ' ಚಿತ್ರವನ್ನು ಅತ್ಯಂತ ಸೀಕ್ರೇಟಿವ್ ಆಗಿ ಸಂಪೂರ್ಣಗೊಳಿಸಿರುವ ನಿರ್ಮಾಪಕ ಎಸ್.ವಿ. ಬಾಬು ಮೊನ್ನೆ ಅದರ ಪತ್ರಿಕಾಗೋಷ್ಠಿ ಕರೆದರು. ರವಿವರ್ಮಾ ನಿರ್ದೇಶನದ ಈ ಚಿತ್ರದ ನಾಯಕ ನಟ ಗಣೇಶ್.

ಈಗಾಗಲೇ ತೆಲುಗು ಚಿತ್ರರಂಗದಲ್ಲಿ ಬಹಳ ಜನಪ್ರಿಯತೆ ಪಡೆದಿರುವ ಯುವ ಸಂಗೀತ ನಿರ್ದೇಶಕ ದೇವಿಶ್ರೀ ಪ್ರಸಾದ್ ಸಂಯೋಜಿಸಿರುವ ಮೂರು ಹಾಡುಗಳು ಮಧುರವಾಗಿ ಮೂಡಿಬಂದಿದೆ. ಹೀಗಾಗಿ ಗಣೇಶ್ ಪಾಲಿಗೆ ಇವು ವರದಾನವಾಗುವ ಎಲ್ಲಾ ಸಾಧ್ಯತೆಗಳು ಕಾಣಿಸುತ್ತಿದೆ.

'ಬೊಂಬಾಟ್' ಚಿತ್ರ ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಿರುವುದರಿಂದ ಈ ಚಿತ್ರವನ್ನು ಆದಷ್ಟು ಬೇಗ ತೆರೆಗೆ ತರಲು ಎಸ್.ವಿ. ಬಾಬು ಪ್ಲಾನ್ ಹಾಕಿಕೊಂಡಿದ್ದಾರೆ. ಈ ಕಾರಣಕ್ಕಾಗಿಯೇ ವಿದೇಶದಲ್ಲಿ ಚಿತ್ರೀಕರಿಸಬೇಕಾಗಿದ್ದ ಎರಡು ಹಾಡುಗಳನ್ನು ಕೈಬಿಟ್ಟು ಚಿಕ್ಕಮಗಳೂರು ಕಡೆಗೆ ಹೊರಟಿದ್ದಾರೆ. 'ಸಂಗಮ' ಅಕ್ಟೋಬರ್‌ನಲ್ಲಿ ತೆರೆಕಾಣಬಹುದು.

'ಹೌಸ್‌ಫುಲ್' ಪಾಪ್‌ಕಾರ್ನ್!



ಮೊನ್ನೆ ಹೇಮಂತ್ ಹೆಗಡೆ ನಿರ್ದೇಶನದ 'ಹೌಸ್‌ಫುಲ್' ಚಿತ್ರದ ಆಹ್ವಾನ ಪತ್ರಿಕೆಯನ್ನು ಪಿಆರ್‌ಓ ವೆಂಕಟೇಶ್ ನೀಡಿದಾಗ ಆಶ್ಚರ್ಯವಾಯಿತು. ಯಾಕೆಂದರೆ ಆ ಆಹ್ವಾನ ಪತ್ರ ಒಂದು ಪ್ಯಾಕೇಟ್ ರೂಪದಲ್ಲಿದ್ದು ಅದರ ತುಂಬ ಪಾಪ್‌ಕಾರ್ನ್ ತುಂಬಿ ತುಳುಕುತ್ತಿತ್ತು. ಪಾಪ್‌ಕಾರ್ನ್ ತಿಂದ ನಂತರ ಆ ಪ್ಯಾಕೆಟ್‌ನಲ್ಲಿ ಸಿನಿಮಾದ ಬಗ್ಗೆ ಮಾಹಿತಿ ಮತ್ತು ವಿಚಾರಗಳಿದ್ದವು. ನಿಜಕ್ಕೂ ಈ ವಿನೂತನವಾದ ಆಹ್ವಾನ ಪತ್ರಿಕೆ ನೋಡಲು ಮತ್ತು ತಿನ್ನಲೂ ಚೆನ್ನಾಗಿತ್ತು!

ಇಂತಹದ್ದೇ ಕ್ರಿಯೇಟಿವಿಟಿಯನ್ನು ಹೇಮಂತ್ ಹೆಗಡೆ ತನ್ನ 'ಹೌಸ್‌ಫುಲ್' ಚಿತ್ರದಲ್ಲೂ ತೋರಿಸಿದರೆ ಅವರು ಜನ ಮೆಚ್ಚುಗೆಯನ್ನು ಗಳಿಸಬಹುದೇನೋ?

ಹಾಲಿಡೇ ಪ್ರತಿಭೆಗಳಿಗೆ ಕೈತುಂಬಾ ಕೆಲಸ!

ಎಸ್. ನಾರಾಯಣ್ ನಿರ್ದೇಶನದ 'ಚೈತ್ರದ ಸಂಭ್ರಮ' ಚಿತ್ರದ ನಾಯಕ ಪಂಕಜ್ ಪಿಯುಸಿ ಓದುತ್ತಿದ್ದರೆ, ನಾಯಕಿ ಅಮೂಲ್ಯ ಈ ವರ್ಷ ಹತ್ತನೇ ತರಗತಿಯಲ್ಲಿ ಓದುತ್ತಿದ್ದಾಳೆ. ಮೊನ್ನೆ ಬೇಸಿಗೆ ರಜೆಯಲ್ಲಿ ಇವರಿಬ್ಬರು ಚಿತ್ರೀಕರಣದಲ್ಲಿ ಭಾಗವಹಿಸಿ ಈಗ ಮತ್ತೆ ತಮ್ಮ ಕಾಲೇಜು ಮತ್ತು ಸ್ಕೂಲಿಗೆ ಹಿಂದಿರುಗಿದ್ದಾರೆ.

ಈ ಚಿತ್ರ ಬಿಡುಗಡೆಗೊಳ್ಳುವ ಮುನ್ನವೇ ಇವರಿಬ್ಬರಿಗೆ ಸಾಕಷ್ಟು ಅವಕಾಶಗಳು ಬರುತ್ತಿದ್ದರೂ ತಾವಿಬ್ಬರೂ ಮತ್ತೆ ಮುಖಕ್ಕೆ ಬಣ್ಣ ಹಚ್ಚುವುದು ಮುಂದಿನ ಬೇಸಿಗೆ ರಜೆಯಲ್ಲೇ ಎಂದು ಘೋಷಿಸಿದ್ದಾರೆ. ಹೀಗಾಗಿ ಇವರಿಬ್ಬರನ್ನು 'ಹಾಲಿಡೇ ನಾಯಕ-ನಾಯಕಿ' ಎಂದು ಕೆಲವರು ಕರೆಯಲಾರಂಭಿಸಿದ್ದಾರೆ. 'ಚೆಲುವಿನ ಚಿತ್ತಾರ' ಚಿತ್ರ ಸಿಲ್ವರ್ ಜ್ಯೂಬಿಲಿ ಆಚರಿಸಿದಾಗಲೂ ಅಮೂಲ್ಯಳಿಗೆ ಸಿಕ್ಕಾಪಟ್ಟೆ ಡಿಮ್ಯಾಂಡ್ ಬಂದಿತ್ತು. ಆದರೆ 'ಸ್ಕೂಲ್ ಫಸ್ಟ್-ಮೂವೀ ನೆಕ್ಸ್ಟ್' ಎಂಬ ಸಿದ್ಧಾಂತಕ್ಕೆ ಆಕೆ ಗಂಟುಬಿದ್ದಿದ್ದಳು.

ತಮಾಷೆಯ ಸಂಗತಿ ಯಾವುದೆಂದರೆ ಈ 'ಹಾಲಿಡೇ ನಾಯಕ-ನಾಯಕಿ'ಯರಿಗೆ ಕೈತುಂಬಾ ಕೆಲಸವಿದೆ, ಬೇಡಿಕೆ ಇದೆ. ಆದರೆ ಸದ್ಯಕ್ಕೆ ಚಿತ್ರರಂಗದಲ್ಲಿ ನಾಯಕ ನಾಯಕಿಯರಾಗಿ ಮೆರೆದಾಡುತ್ತಿರುವವರಿಗೆ ಪ್ರೇಕ್ಷಕರೇ 'ಹಾಲಿಡೇ' ನೀಡಿದ್ದಾರೆ!



ಮದುವೆಯಾದ ದಿನಕರ್
ಮನೆ ಕಟ್ಟಿದ ಶರಣ್




ಹಾಸ್ಯನಟರಲ್ಲಿ ಸದ್ಯಕ್ಕೆ ನಂ.1 ಸ್ಥಾನವನ್ನು ಅಲಂಕರಿಸಿರುವ ಶರಣ್ ಮೊನ್ನೆ ನಾಗರಬಾವಿಯಲ್ಲಿ ಹುಟ್ಟದೊಂದು ಮನೆಯನ್ನು ಖರೀದಿಸಿ ತನ್ನ ಆಪ್ತಮಿತ್ರರನ್ನು ಗೃಹಪ್ರವೇಶಕ್ಕೆ ಆಹ್ವಾನಿಸಿದ್ದರು. ಕನ್ನಡ ಚಿತ್ರರಂಗದ ಪೋಷಕ ನಟರು ಕೂಡಾ 'ಮನೆಯ ಯಜಮಾನ'ರಾಗುತ್ತಿರುವುದು ಸಂತೋಷದ ವಿಷಯ.



ಅದೊಂದು ಕಾಲವಿತ್ತು, ಪೋಷಕ ನಟರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬೆಳೆದು, ಸಾಲದಲ್ಲಿಯೇ ಇಹಲೋಕ ತ್ಯಜಿಸುತ್ತಿದ್ದರು. ಅವರು ಜನರನ್ನು ರಂಜಿಸುತ್ತಿದ್ದರೂ ಅವರ ಬದುಕು ಮಾತ್ರ ಟ್ರ್ಯಾಜಿಡಿ ಆಗಿರುತ್ತಿತ್ತು. ಆದರೀಗ ಕಾಲ ಬದಲಾಗಿದೆ ಎಂಬುದಕ್ಕೆ ಶರಣ್ ಒಂದು ಪುಟ್ಟ ಉದಾಹರಣೆ.

ಮೊನ್ನೆ ನಾಯಕ ನಟ ದರ್ಶನ್ ತನ್ನ ಸಹೋದರ ದಿನಕರ್ ಅವರ ಮದುವೆಯನ್ನು ಅದ್ದೂರಿಯಾಗಿ ಮಾಡಿಸಿದರು. ಮದುವೆಯಾದ ದಿನಕರ್‌ಗೂ, ಮನೆ ಕಟ್ಟಿದ ಶರಣ್‌ಗೂ ನಮ್ಮ ಅಭಿನಂದನೆ.

ಮಾತು ತಪ್ಪಿದ ಪ್ರೇಮ್



"ನಾನೆಂದೂ ರೀಮೇಕ್ ಚಿತ್ರಗಳಲ್ಲಿ ನಟಿಸುವುದಿಲ್ಲ" ಎಂದು ಹೇಳುವ ಮೂಲಕ ಇಲ್ಲಿನ ಸೃಜನಶೀಲರ ಮೆಚ್ಚುಗೆ ಗಳಿಸಿದ್ದ ನಟ ಪ್ರೇಮ್ ಈಗ "ರೀಮೇಕಾದರೂ ಪರವಾಗಿಲ್ಲ, ಪಾತ್ರ ಚೆನ್ನಾಗಿರಬೇಕು" ಎಂದು ತಮ್ಮ ನಿಲುವನ್ನು ಬದಲಾಯಿಸಿದ್ದಾರೆ.

ಒಂದೆಡೆ ಈಗಿನ ಸರ್ಕಾರ ರೀಮೇಕ್ ಚಿತ್ರಗಳಿಗೆ ಅಸ್ತು ಎಂದಿರುವುದು, ಇನ್ನೊಂದೆಡೆ ತನ್ನ ಎದುರಾಳಿ ಗಣೇಶ್ ರೀಮೇಕ್ ಚಿತ್ರಗಳಲ್ಲಿ ನಟಿಸುತ್ತಾ ಯಶಸ್ಸು ಗಳಿಸುತ್ತಿರುವುದು ಪ್ರೇಮ್ ನಿಲುವಿನ ಬದಲಾವಣೆಗೆ ಕಾರಣವಾಗಿರಬಹುದು.

ಆದರೆ ಶಿವರಾಜ್ ಕುಮಾರ್ ಅವರು "ಅದೇನೇ ಇರಲಿ, ನಾನು ಮಾತ್ರ ಯಾವುದೇ ಕಾರಣಕ್ಕೆ ರೀಮೇಕ್‌ನಲ್ಲಿ ನಟಿಸುವುದಿಲ್ಲ" ಎಂದು ಪುನರುಚ್ಚರಿಸಿದ್ದಾರೆ. ಈ ಮಧ್ಯೆ ಯಾರು ಏನೇ ಹೇಳಿದರೂ ಬೇರೆ ನಾಯಕ ನಟರೆಲ್ಲರೂ ಹಿಟ್ ಆಗಿರುವ ತಮಿಳು ಮತ್ತು ತೆಲುಗು ಚಿತ್ರಗಳ ಸೀಡಿಗಳನ್ನು ತರಿಸುವುದರಲ್ಲೇ ಬಿಜಿಯಾಗಿದ್ದಾರೆ!

R B P LANKESH, Kannada Weekly Price Rs. 12/- 10-9-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi,



ಬಾದ್‌ಶಾ ಮಣಿಸಲು ಬಾಲಿವುಡ್ ಸಂಚು!

ಬರಬರುತ್ತಾ ಬಾಲಿವುಡ್ ಬಾದ್‌ಷಾ ಶಾರುಖ್ ಖಾನ್ ಮಂಕಾಗುತ್ತಿದ್ದಾನಾ? ಅಲ್ಲಿನ ಇತರೆ ನಾಯಕರು ಈತನ ವಿರುದ್ಧ ತಿರುಗಿ ಬಿದ್ದಿದ್ದಾರಾ? ಎಂಬ ಪ್ರಶ್ನೆಗಳಿಗೆ 'ಹೌದು' ಎನ್ನುತ್ತಿದೆ ಬಾಲಿವುಡ್.

ಹಾಗೆ ನೋಡಿದರೆ, 'ಮೊಹಬತೇನ್' ಸಿನಿಮಾ ಬಂದಾಗಿನಿಂದಲೂ ಬಿಗ್‌ಬಿ ಮತ್ತು ಬಾದ್‌ಷಾ ನಡುವೆ ಒಂದು ರೀತಿಯ ಶೀತಲ ಸಮರವೇ ನಡೆಯುತ್ತಿತ್ತು. ಆದರೆ ಅಮಿತಾಬ್ ಬಚ್ಚನ್ ಎಂದಿಗೂ ಬಹಿರಂಗವಾಗಿ ಶಾರುಖ್ ವಿರುದ್ಧ ಹೇಳಿಕೆಗಳನ್ನು ನೀಡಿಲ್ಲ. ಆದರೆ ಬೇರೆಯವರು ಹಾಗಲ್ಲವಲ್ಲ. ಮೊದಲಿಗೆ ಅಮೀರ್ ಖಾನ್ "ನನ್ನ ಮನೆಯ ನಾಯಿಯ ಹೆಸರೂ ಶಾರುಖ್" ಎಂದು ತನ್ನ ಬ್ಲಾಗ್‌ನಲ್ಲಿ ಬರೆದ. ಅದಕ್ಕೂ ಮುಂಚೆ 'ಶಾರುಖ್ ಯಾವತ್ತಿದ್ದರೂ ನಂ.2' ಎಂದು ಚುಚ್ಚುಮಾತನ್ನಾಡಿದ್ದ. ಇದಿಷ್ಟು ಆಮಿರ್-ಶಾರುಖ್ ನಡುವಿನ ಸಮರ.

ಈ ಮಧ್ಯೆ ಶಾರುಖ್ ಮತ್ತು ಸಲ್ಮಾನ್ ಖಾನ್ ಎಂಬ ಮತ್ತೊರ್ವ ನಟನ ನಡುವೆಯೂ ಸಮರ ಪ್ರಾರಂಭವಾಗಿದೆ. ಕಳೆದ ತಿಂಗಳು ಸಲ್ಮಾನ್ ಖಾನ್‌ನ ಗರ್ಲ್‌ಫ್ರೆಂಡ್ ಕತ್ರೀನಾ ಕೈಫ್ ತನ್ನ ಬರ್ತ್‌ಡೇ ಅನ್ನು ಗೋವಾದಲ್ಲಿ ಆಚರಿಸಿಕೊಂಡಳು. ಅಂದಿನ ಪಾರ್ಟಿಗೆ ಆಕೆ ಶಾರುಖ್ ಖಾನ್‌ನನ್ನೂ ಆಹ್ವಾನಿಸಿದ್ದಳು. ಅವತ್ತು ಶಾರುಖ್ ಮತ್ತು ಸಲ್ಮಾನ್ ನಡುವೆ ಜಗಳವಾಗಿ ದೊಡ್ಡ ರಾದ್ಧಾಂತವಾಯಿತು. ಅದಕ್ಕೆ ಕಾರಣವೇನು ಎಂದು ಯಾರಿಗೂ ಈತನಕ ಗೊತ್ತಾಗಿಲ್ಲ. ಆದರೆ ಸಲ್ಮಾನ್ ಖಾನ್ ಸ್ಟಾರ್ ಪ್ಲಸ್ ಚಾನೆಲ್‌ಗಾಗಿ ನಡೆಸಿಕೊಡುವ 'ದಸ್ ಕಾ ಧಂ' ಕಾರ್ಯಕ್ರಮದಲ್ಲಿ "ಶಾರುಖ್ ನಡೆಸಿಕೊಡುವ 'ಪಾಂಚ್ ವಿ ಪಾಸ್' ಕಾರ್ಯಕ್ರಮ ಖರಾಬ್ ಆಗಿದೆ" ಎಂದು ಬಹಿರಂಗವಾಗಿ ಹೇಳಿದ್ದ.

ಇದೆಲ್ಲದರ ಮಧ್ಯೆ ಈಗ ಬಾಲಿವುಡ್‌ನ ಸೂಪರ್ ಸ್ಟಾರ್ ಆಗಿರುವ ಅಕ್ಷಯ್ ಕುಮಾರ್ ಕೂಡ ಇತ್ತೀಚೆಗೆ ಶಾರುಖ್‌ನನ್ನು ತನ್ನ ಮೊನಚು ಮಾತುಗಳಿಂದ ಜರಿದಿದ್ದಾನೆ. ಈಗ ಸೂಪರ್ ಹಿಟ್ ಆಗಿರುವ 'ಸಿಂಗ್ ಈಸ್ ಕಿಂಗ್' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ "ಯಾವತ್ತಿದ್ದರೂ ಅಮಿತಾಭ್ ಮಾತ್ರ ಬಾಲಿವುಡ್‌ನ ಕಿಂಗ್ ಆಗಲು ಸಾಧ್ಯ. ಶಾರುಖ್ ಎಂದಿಗೂ ಇಲ್ಲಿ ಕಿಂಗ್ ಆಗಲು ಸಾಧ್ಯವಿಲ್ಲ"- ಎಂದು ಅಕ್ಷಯ್ ಕುಮಾರ್ ಮಾತನಾಡಿದ್ದಾನೆ.



ಇವರೆಲ್ಲರ ಇಂತಹ ಹೇಳಿಕೆಗಳನ್ನು ಬಾಲಿವುಡ್ ಬಾದ್‌ಷಾ ಶಾರುಕ್ ಖಾನ್‌ನನ್ನು ತುಳಿದು ಹಾಕಲು ಎಲ್ಲರೂ ಸೇರಿ ಹೊಂಚುಹಾಕುತ್ತಿದ್ದಾರೆಯೆ ಎನಿಸುತ್ತದೆ. ಈ ಎಲ್ಲ ಪ್ರತಿರೋಧಗಳನ್ನು ಶಾರುಖ್ ಮೆಟ್ಟನಿಲ್ಲುತ್ತಾನಾ ಎಂಬುದೇ ಈಗ ಬಾಲಿವುಡ್ ಮುಂದಿರುವ ಪ್ರಶ್ನೆ.

■ ಅರುಣ್.ಜ

ಮರ್ಡರ್‌ಗಳ ಮಧ್ಯೆ ಮಾದೇಶ!



'ಮಾದೇಶ' ಚಿತ್ರದ ಬಿಡುಗಡೆಯ ಮುನ್ನವೇ 'ಲಂಕೇಶ್' ಹೇಳಿದ್ದ ಹಾಗೆ ಈ ಚಿತ್ರ 'ಜೋಗಿ' ಚಿತ್ರದ ಅಪ್‌ಡೇಟ್ ವರ್ಷನ್ ಅನ್ನೋದಂತೂ ನಿಜ. ಒಂದೇ ಒಂದು ವ್ಯತ್ಯಾಸವೆಂದರೆ 'ಜೋಗಿ'ಯಲ್ಲಿ ಒಬ್ಬ ಅಮಾಯಕ ಹಳ್ಳಿಯ ಹುಡುಗ ಬೆಂಗಳೂರಿಗೆ ಬಂದು ತನಗೆ ಗೊತ್ತಿಲ್ಲದಂತೆ ಅಂಡರ್‌ವರ್ಲ್ಡ್‌ನಲ್ಲಿ ಬೇರುಬಿಡುತ್ತಾನೆ. ಆದರೆ 'ಮಾದೇಶ' 'ಜೋಗಿ'ಗೆ ವಿರುದ್ಧ ದಿಕ್ಕಿನಲ್ಲಿ ಸಾಗಿದ್ದಾನೆ. ಸಣ್ಣ ವಯಸ್ಸಿನ ಹುಡುಗನೊಬ್ಬ ತನ್ನ ತಾಯಿಯನ್ನು ಪರಪುರುಷನೊಬ್ಬ ಕೆಟ್ಟ ರೀತಿಯಿಂದ ನೋಡಿದ ಎಂಬ ಒಂದೇ ಕಾರಣಕ್ಕೆ ಆತನನ್ನು ಕೊಲ್ಲುತ್ತಾನೆ. ಹದಿನಾಲ್ಕು ವರ್ಷಗಳ ನಂತರ ಜೈಲಿನಿಂದ ಹೊರಬರುವ ಆ ಹುಡುಗ ಬೆಂಗಳೂರು ಸೇರಿ ಉದ್ದೇಶಪೂರ್ವಕವಾಗಿ ಅಪರಾಧಗಳನ್ನು ಎಸಗುತ್ತಾನೆ. ಆಯಿಲ್ ಮಾಫಿಯಾ, ಲ್ಯಾಂಡ್ ಡೀಲಿಂಗ್‌ನೊಂದಿಗೆ ಕಂಡಕಂಡವರನ್ನು ಕೊಚ್ಚಿದರೂ 'ಸಂತ'ನಂತೆ ಪೋಸು ಕೊಡುತ್ತಾನೆ ಮಾದೇಶ. ಹೀಗಾಗಿ 'ಒಬ್ಬ ಕ್ರಿಮಿನಲ್ ಆದವನು ಮಾತ್ರ ಸಮಾಜೋದ್ಧಾರ ಮಾಡಲು ಸಾಧ್ಯ' ಎಂಬ ಸಿದ್ಧಾಂತವನ್ನು ಈ ಚಿತ್ರದ ನಿರ್ದೇಶಕ ರವಿ ಶ್ರೀವತ್ಸ ಸಾರಿದ್ದಾರೆ!

ತಾಂತ್ರಿಕವಾಗಿ ಅದ್ದೂರಿಯಾಗಿ ಮೂಡಿ ಬಂದಿರುವ ಈ ಚಿತ್ರದಲ್ಲಿ ಹಿಂಸೆಯ ಅತಿಯಾದ ವೈಭವೀಕರಣವಂತೂ ಪ್ರೇಕ್ಷಕನ ಹೃದಯಕ್ಕೇ ಚೂರಿ ಹಾಕುತ್ತದೆ. ನಾಯಕ ಶಿವರಾಜ್ ಕುಮಾರ್ ತನ್ನ ಎದುರಾಳಿಯ ತಲೆಗೆ ಸುತ್ತಿಗೆ, ಕಲ್ಲುಗಳಿಂದ ಹೊಡೆಯುವ; ಚಾಕು, ಕತ್ತಿಗಳನ್ನು ಹಿಡಿದು ವಿಕೃತವಾಗಿ ಚುಚ್ಚುವ ದೃಶ್ಯಗಳಂತೂ 'ಹರಹರ ಮಹಾದೇಶ' ಎನ್ನುವಷ್ಟು ಭಯಾನಕವಾಗಿವೆ.

ಚಿತ್ರದ ಆರಂಭದಲ್ಲಿ ಗಂಟೆ ಮಾರುವವನ ಕೊಲೆಯಿಂದ ಪ್ರಾರಂಭವಾಗಿ ಕಡೆಗೆ ರವಿ ಬೆಳಗೆರೆ ಪಾತ್ರಧಾರಿ ಸರ್ಕಾರ್‌ನ ಹೆಣ ಬೀಳುವವರೆಗೂ ಕನಿಷ್ಠ ಎರಡೂವರೆ ಡಜನ್ನು ಚಿತ್ರವಿಚಿತ್ರ ಮರ್ಡರ್‌ಗಳು, ಶೂಟ್‌ಔಟ್‌ಗಳು ಆಗುತ್ತವೆ. ಆದರೆ ಶಿವಣ್ಣ ಒಳಗೊಂಡಂತೆ ಚಿತ್ರದ ಎಲ್ಲ ನಟರೂ ಭೂಗತ ಕ್ರಿಮಿಗಳನ್ನು ತಮ್ಮ ಮೇಲೆ ಆವಾಹಿಸಿಕೊಂಡು ಅಭಿನಯಿಸಿದ್ದಾರೆ. ಆದರಲ್ಲೂ ಗಮನ ಸೆಳೆಯುವುದು ರವಿ ಬೆಳಗೆರೆ.



ಈ ಹಿಂದೆ ಬೆಳಗೆರೆ ಅಭಿನಯಿಸಿದ್ದ ಚಿತ್ರಗಳನ್ನು ನೋಡಿದ ಜನ ಭಯೋತ್ಪಾದಕನೋರ್ವನ ದಾಳಿಗೆ ತುತ್ತಾದವರಂತೆ ಭಯಭೀತರಾಗಿದ್ದರು. ಆದರೆ ಅವರಿಗೆ ಹೇಳಿಮಾಡಿಸಿದಂತಿರುವ 'ಮಾದೇಶ' ಪಾತ್ರದಲ್ಲಿ ಅವರು ಎಚ್ಚೆತ್ತುಕೊಂಡಿರುವಂತಿದೆ. ಕೆನ್ನೆಯ ಮೇಲೆ ಕಂಬಳಿ ಹುಳುವಿನಂತೆ ಹರಡಿರುವ ಅಂಗೈಯಗಲದ ಮೀಸೆ, ಗೂನು ಬೆನ್ನು, ಹೊಟ್ಟೆಯ ಸುತ್ತ ಪೊಗದಸ್ತಾಗಿ ಬೆಳೆದಿರುವ ಟಯರ್... ಎಲ್ಲವೂ ಪಾತ್ರ ನಿರ್ವಹಣೆಗೆ ಸಹಕಾರಿಯಾಗಿವೆ. ರವಿ ಕಾಳೆ ಪಾತ್ರಧಾರಿ "ಬೇವರ್ಸಿ" ಎನ್ನುತ್ತಾ ಬೆಳಗೆರೆಯ ಕುತ್ತಿಗೆ ಹಿಡಿದು ಮೇಜಿನ ಮೇಲೆ ಮಲಗಿಸಿದಾಗ, ಶಿವರಾಜ್ ಕುಮಾರ್ ಬಂದು ಚೈನ್‌ನಿಂದ ಬೆಳಗೆರೆಯ ಕತ್ತು ಸೀಳಿ ಕೊಲ್ಲುವಾಗ "ಅಯ್ಯೋ" ಎನ್ನುವಷ್ಟು ನೈಜವಾಗಿದೆ ಅವರ ಅಭಿನಯ! ಜೊತೆಗೆ ಅಲ್ಲಲ್ಲಿ ಪಂಚಿಂಗ್ ಡೈಲಾಗ್ ನೀಡುವ ಮೂಲಕ ತಾನು ಕಾಮಿಡಿ ನಟನೂ ಆಗಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ!!

ನಿರ್ದೇಶಕ ಶ್ರೀವತ್ಸ ತನ್ನ ಎಲ್ಲಾ ವಿಕೃತವನ್ನು ಉಪಯೋಗಿಸಿಕೊಂಡು ಬಹಳ ಶ್ರದ್ಧೆಯಿಂದ ಈ ಸಿನಿಮಾವನ್ನು ಮಾಡಿದ್ದರೂ, ಸೆನ್ಸಾರ್‌ನವರು ಹಾಕಿರುವ ಅಡಕತ್ತರಿಯಿಂದಾಗಿ ಅಲ್ಲಲ್ಲಿ ಕಂಟಿನ್ಯೂಟಿ ಕೈತಪ್ಪಿದೆ. ಕ್ಲೈಮ್ಯಾಕ್ಸ್‌ಗೇ ಕತ್ತರಿ ಬಿದ್ದಿರುವುದರಿಂದ ಯಾವುದೇ ಮುನ್ಸೂಚನೆ ಇಲ್ಲದೆ ಚಿತ್ರ ಅಂತ್ಯಗೊಳ್ಳುತ್ತದೆ. ಆದ್ದರಿಂದ ಶ್ರೀವತ್ಸ ಚಿತ್ರದ ಕೊನೆಯಲ್ಲಿ ನೀಡಿರುವ ಎಚ್ಚರಿಕೆ 'See you in ಮಾದೇಶ ಪಾರ್ಟ್-2'.

ಅಯ್ಯಯ್ಯೋ ಜನರನ್ನು ಕಾಪಾಡೋ ಮಾದೇಶಾ...!! ■

ಗಣೇಶನ 'ಉಲ್ಲಾಸ'!

ಎರಡು ವಾರಗಳ ಹಿಂದೆ ಬಿಡುಗಡೆಗೊಂಡ 'ಉಲ್ಲಾಸಂಗ ಉತ್ಸಾಹಂಗ' ಎಂಬ ತೆಲುಗು ಚಿತ್ರ ಆಂಧ್ರದಲ್ಲಿ ಜಯಭೇರಿ ಭಾರಿಸಿದ್ದೇ ತಡ, ಅದನ್ನು ಕನ್ನಡಕ್ಕೆ ಭಟ್ಟಿ ಇಳಿಸಲು ಅದರ ನಿರ್ಮಾಪಕರು ನಿರ್ಧರಿಸಿದ್ದಾರೆ. ಈ ಚಿತ್ರಕ್ಕೆ ಗಣೇಶ್ ನಾಯಕ. 'ಚೆಲ್ಲಾಟ'ದಿಂದ ಹಿಡಿದು ಬಹಳಷ್ಟು ರೀಮೇಕ್ ಚಿತ್ರಗಳಲ್ಲೇ ನಟಿಸಿರುವ ಗಣೇಶ್ ಈಗ ಇದರಲ್ಲಿ ನಟಿಸುತ್ತಿರುವುದು ಅಚ್ಚರಿಯ ವಿಷಯವೇನಲ್ಲ.



ಇಲ್ಲಿಯತನಕ ಗಣೇಶ್ ನಟಿಸಿರುವ ಚಿತ್ರಗಳ ಪಟ್ಟಿಯನ್ನೇ ನೋಡಿ. 'ಚೆಲ್ಲಾಟ', 'ಚೆಲುವಿನ ಚಿತ್ತಾರ', 'ಹುಡುಗಾಟ' ಮತ್ತು 'ಕೃಷ್ಣ' ಇವೆಲ್ಲವೂ ರೀಮೇಕ್ ಚಿತ್ರಗಳೇ. 'ಬೊಂಬಾಟ್' ಚಿತ್ರವೂ ಒಂದು ರೀತಿಯಲ್ಲಿ 'inspired ರೀಮೇಕ್ ಚಿತ್ರ'. 'ಗಾಳಿಪಟ' ಮತ್ತು 'ಮುಂಗಾರು ಮಳೆ' ಮಾತ್ರ ಗಣೇಶ್ ನಟಿಸಿರುವ ಒರಿಜಿನಲ್ ಚಿತ್ರಗಳು.

ಆದರೆ ಈ ಬಗ್ಗೆ ಗಣೇಶ್‌ಗೆ ಯಾವುದೇ ಪಶ್ಚಾತ್ತಾಪವಿಲ್ಲ. "ನಾನು ನಾಯಕ ನಟನಾಗಿದ್ದೇ ರೀಮೇಕ್ ಚಿತ್ರಗಳ ಮೂಲಕ. ನನಗೆ ಪಾತ್ರವೊಂದು ಇಷ್ಟವಾದರೆ ನಾನು ಕೂಡಲೇ ಅದನ್ನು ಮಾಡಲು ಒಪ್ಪುತ್ತೇನೆ" ಎಂದು ಗಣೇಶ್ ಹೇಳುತ್ತಾರೆ.

ವಿಶೇಷವೆಂದರೆ 'ಉಲ್ಲಾಸಂಗ ಉತ್ಸಾಹಂಗ' ಚಿತ್ರದ ನಾಯಕ ನಟ ಯಶೋ ಸಾಗರ್ ಈಗಾಗಲೆ 20ಕ್ಕೂ ಹೆಚ್ಚು ಕನ್ನಡ ಸಿನಿಮಾಗಳನ್ನು ನಿರ್ಮಿಸಿರುವ ಬಿ.ಸಿ.ಸೋಮು ಅವರ ಪುತ್ರ. ಕನ್ನಡದಲ್ಲಿ ಸಾಗರ್‌ನಿಗೆ ಅವಕಾಶ ಸಿಗದಿದ್ದಾಗ ಆತನಿಗಾಗಿ ಸೋಮು ತೆಲುಗು ಚಿತ್ರ ಮಾಡಿದರು. ಕನ್ನಡದ ಮೇಲಿನ ಪ್ರೀತಿಯಿಂದ ಗಣೇಶ್‌ನನ್ನು ಹಾಕಿಕೊಂಡು ಈಗ ಅದೇ ಚಿತ್ರವನ್ನು ಇಲ್ಲಿ ಮಾಡುತ್ತಿದ್ದಾರೆ. ಈಗಾಗಲೇ 'ಉಲ್ಲಾಸಂಗ ಉತ್ಸಾಹಂಗ' ಚಿತ್ರದ ಮೂಲಕ ಆಂಧ್ರದಲ್ಲಿ ಯಶಸ್ಸು ಕಂಡಿರುವ ಯಶೋ ಸಾಗರ್ ಈಗ 'ಹ್ಯಾಪಿ ಡೇಸ್' ಎಂಬ ಹಿಟ್ ತೆಲುಗು ಚಿತ್ರ ನೀಡಿದ್ದ ನಿರ್ದೇಶಕ ಶೇಖರ್ ಕಮ್ಮುಲು ಅವರ ಮುಂದಿನ ಚಿತ್ರಕ್ಕೆ ಆಯ್ಕೆಯಾಗಿದ್ದಾರೆ.



ಆದ್ದರಿಂದ ಕನ್ನಡಿಗರಿಗೆ ಯಶೋ ಸಾಗರ್ ಎಂಬ ಕನ್ನಡಿಗನ ಬದಲಿಗೆ ಗಣೇಶ್ ಎಂಬ ಮತ್ತೊಬ್ಬ ಕನ್ನಡಿಗ ಸಿಗಲಿದ್ದಾನೆ. ■

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, #124